4. ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ

ವಿಷಯ: ಯಲ್ಲಾಲಿಂಗ ಎಂಬ ಯುವಕನ ಹತ್ಯೆ ಪ್ರಕರಣದ ಬಗ್ಗೆ

ಶ್ರೀ ಜಗದೀಶ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ನಿಲುವಳಿ ಸೂಚನೆ ಮುಖಾಂತರ ಬಹಳ ಒಂದು ಪ್ರಮುಖವಾದಂಥ ವಿಚಾರವನ್ನು ನಾವು ಈ ಸದನದಲ್ಲಿ ಎತ್ತಿದ್ದೇವೆ. ರೂಲ್ 69 ಪ್ರಕಾರ ಈ ಒಂದು ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದಮೇಲೆ ಕೊಪ್ಪಳ ಜಿಲ್ಲೆ ಅಲ್ಲದೆ ಇಡೀ ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಯಲ್ಲಿ ಇದೇ ವಾತಾವರಣ ಉಂಟಾಗಿದೆ. ಅಂದರೆ, ಯಾರು ಗೂಂಡಾಗಿರಿಯನ್ನು, ಅವ್ಯವಹಾರಗಳನ್ನು, ಭ್ರಷ್ಟಾಚಾರಗಳನ್ನು, ಹಗರಣಗಳನ್ನು ಎತ್ತಿ ತೋರಿಸುತ್ತಾರೆ, ಅಂಥವರ ಬಗ್ಗೆ ಒಂದು ರೀತಿಯಾದಂಥ ದೌರ್ಜನ್ಯ ಗೂಂಡಾಗಿರಿ ನಡೆಯುತ್ತಿದೆ. ಕೊಪ್ಪಳ ಜಿಲ್ಲೆ ಬಗ್ಗೆ ನಾನು specific ಆಗಿ ಮಾತನಾಡುವಂಥದ್ದು ಏನೆಂದರೆ, ಕೊಪ್ಪಳ ಜಿಲ್ಲೆಯಲ್ಲಿ ಇತ್ತೀಚಿನ ಕೆಲವು ತಿಂಗಳಿನಿಂದ ಒಂದು ರೀತಿಯಲ್ಲಿ ಗೂಂಡಾ ರಾಜ್ಯ ಪ್ರಾರಂಭ ಆಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ದೌರ್ಜನ್ಯ ಗೂಂಡಾಗಿರಿ ಹೊಡೆದಾಟ, ಕೊಲೆಗಳು, ದಲಿತರ ಮೇಲೆ ದೌರ್ಜನ್ಯ ನಡೆಯುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ನಾನು ಸ್ವತಃ ಕೊಪ್ಪಳ ಜಿಲ್ಲೆಗೆ ಹೋಗಿದ್ದೆ. ಅಲ್ಲಿನ ಪರಿಸ್ಥಿತಿಯನ್ನು ನೋಡಿದ್ದೇನೆ. ಮಾನ್ಯ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಮಾನ್ಯ ಈಶ್ವರಪ್ಪನವರು ಅಲ್ಲಿಗೆ ಬಂದಿದ್ದರು. ಹಲವಾರು ಘಟನೆಗಳನ್ನು ಅದರಲ್ಲಿ ಒಂದು ಘಟನೆ ಬಗ್ಗೆ ಕುರಿತು ಪ್ರಮುಖವಾಗಿ ನಾವು ಚರ್ಚೆ ಮಾಡುತ್ತಿದ್ದೇವೆ. ಯಲ್ಲಾಲಿಂಗ ಎಂಬ 17 ವರ್ಷದ ಒಬ್ಬ ಯುವಕ ಪಿ.ಯು.ಸಿ ಮೊದಲನೇ ವರ್ಷದಲ್ಲಿ ಓದುತ್ತಿದ್ದನು. ಆ ಯುವಕನನ್ನು ಅಮಾನುಷವಾಗಿ ಕೊಂದು ಹಾಕಿ ಕೊಪ್ಪಳದ ರೈಲ್ವೆ ಸ್ಟೇಷನ್ ಹತ್ತಿರ ಇರುವಂಥ ಹಳಿ ಮೇಲೆ ಆ ಹೆಣವನ್ನು ಎಸೆದು ಹೋಗಿದ್ದರು. ಇದು ಒಂದು ಭೀಕರವಾದಂಥ ಹತ್ಯೆ. ಯಲ್ಲಾಲಿಂಗನ ಕುಟುಂಬದ ಒಂದು ಪರಿಸ್ಥಿತಿಯನ್ನು

ನೋಡಿದರೆ ಅವರು ಬಹಳ ಬಡತನದಿಂದ ಬಂದಂಥವರು. ಯಲ್ಲಾಲಿಂಗನ ತಾಯಿ ಕೆಂಚಮ್ಮ. ಆಕೆ ತನ್ನ ಮೊದಲನೆ ಮಗನ ಜೊತೆ ಸ್ವತ: ಬೆಂಗಳೂರಿಗೆ ಬಂದು ಕೂಲಿ ಮಾಡಿ ಅದರಿಂದ ಬಂದ ಹಣದಿಂದ ಯಲ್ಲಾಲಿಂಗನನ್ನು ಓದಿಸಬೇಕೆಂದು ಬಹಳ ಪ್ರಯತ್ನ ಮಾಡಿ, ಬೆವರು ಸುರಿಸಿ ತನ್ನ ಎರಡನೆ ಮಗನಾದರೂ ಒಂದಿಷ್ಟು ಕಲಿಯಲಿ, ಒಳ್ಳೆಯ ರೀತಿಯಿಂದ ಆತ ಜೀವನ ನಡೆಸಿ ಕುಟುಂಬದಲ್ಲಿ ಶಕ್ತಿ ಕೊಡಲಿ ಎಂದು ಆತನಿಗೆ ಎಲ್ಲಾ ರೀತಿಯಲ್ಲಿ ಸಹಾಯ ಮಾಡಿ, ಪರಿಶ್ರಮ ಮಾಡಿ ಗದಗ್‌ನಲ್ಲಿ ಆತ ಮೊದಲನೆ ಪಿ.ಯು.ಸಿಯನ್ನು ಕಲಿಯುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ. ಆ ಯಲ್ಲಾಲಿಂಗನ ಸ್ವಭಾವ ಹೇಗಿತ್ತು ಎಂದರೆ, ಸಮಾಜದಲ್ಲಿ ಏನಾದರೂ ಅನ್ಯಾಯ ಆಗುತ್ತಿದ್ದರೆ, ಎಲ್ಲಿಯಾದರೂ ಭ್ರಷ್ಟಾಚಾರ ನಡೆಯುತ್ತಿದ್ದರೆ ಅದರ ವಿರುದ್ಧ ಧ್ವನಿ ಎತ್ತುವಂಥ ಒಂದು ಕೆಲಸವನ್ನು ಆತ ಮಾಡುತ್ತಿದ್ದ. ಆತನ ಊರು ಕನಕಪುರ. ಆತ ಹಾಗೂ ಅವನ ತಾಯಿ ಎಲ್ಲರೂ ಅಲ್ಲಿ ಇರುತ್ತಾರೆ. ಆ ಕನಕಪುರ ಹುಲಿಹೈದರ್ ಎನ್ನುವ ಗ್ರಾಮಪಂಚಾಯಿತಿ. ಆ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟಂಥ ಹುಲಿಹೈದರ್ ಮತ್ತು ಕನಕಪುರದಲ್ಲಿ ಏನು ಭ್ರಷ್ಟಾಚಾರದ ಹಗರಣ ನಡೆಯುತ್ತವೆ... ನರೇಗಾ ಉದ್ಯೋಗ ಖಾತರಿ ವಿಚಾರವಾಗಿ ಈ ಸದನದಲ್ಲಿ ಬೆಳಿಗ್ಗೆ ಚರ್ಚೆ ಆಯಿತು. ಮಾನ್ಯ ಹೆಚ್.ಕೆ. ಪಾಟೀಲ್‌ರವರು performance ಮಾಡಿದ್ದೇವೆ, ಇದನ್ನು ಮಾಡಿದ್ದೇವೆಂದು ಹೇಳಿದರು. ನರೇಗಾ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಆ ಹುಲಿಹೈದರ್ ಗ್ರಾಮದಲ್ಲಿ ಏನು ಒಂದು ಅವ್ಯವಹಾರಗಳು ನಡೆದವು, ಕೋಟ್ಯಾಂತರ ರೂ.ಗಳ ಭ್ರಷ್ಟಾಚಾರ ನಡೆಯಿತು, ಅದರ ಬಗ್ಗೆ ಆತ ಪತ್ರ ಬರೆಯುತ್ತಾನೆ. ಇದರ ಬಗ್ಗೆ ಅಧಿಕಾರಿಗಳಿಗೆ ತಿಳಿಸುತ್ತಾನೆ. ಇವತ್ತಿನ ದಿವಸದ ಇಡೀ ಒಂದು ವ್ಯವಸ್ಥೆಗೆ, ಸರ್ಕಾರಕ್ಕೆ, ಸಮಾಜಕ್ಕೆ, ಅಧಿಕಾರಿಗಳಿಗೆ ಅವ್ಯವಹಾರದ ಬಗ್ಗೆ ಎಲ್ಲವನ್ನೂ ತಿಳಿಸುವಂಥ ಕೆಲಸವನ್ನು ಮಾಡುತ್ತಾನೆ. ಅರ್ಜಿಗಳನ್ನು ಕೊಡುತ್ತಾನೆ. ಕೊನೆಗೆ ಅಲ್ಲಿಯ ಒಂದು ಸ್ಥಳೀಯ ಟಿ.ವಿ.ಚಾನಲ್ 'ಸುವರ್ಣ ಸಿರಿ' ಎಂದು ಆ ಒಂದು ಸುವರ್ಣ ಸಿರಿ ಚಾನೆಲ್‌ಗೆ ಈ ಹುಲಿಹೈದರ್ ಗ್ರಾಮಪಂಚಾಯಿತಿಯಲ್ಲಿ ಏನು ಕೋಟ್ಯಾಂತರ ರೂಪಾಯಿ

ಅವ್ಯವಹಾರ ಆಗಿದೆ, ಅದರ ಬಗ್ಗೆ ಆತ ಸಂದರ್ಶನದ ಬೈಠಕ್ ಕೊಡುತ್ತಾನೆ. ಅಲ್ಲಿ ಗ್ರಾಮಪಂಚಾಯಿತಿ ಸದಸ್ಯರು ಹಾಗೂ ಕೆಲವು ಗೂಂಡಾಪಡೆ ಇದೆ, ಹನುಮೇಶ್ ನಾಯಕ್ ಎಂಬುವವನ ಮಗ ಮಹಾಂತೇಶ್ ನಾಯಕ್ ಇವರೆಲ್ಲಾ ಕೂಡಿ, ಅವರ ಹಿಂಬಾಲಕರೆಲ್ಲಾ ಕೂಡಿ ಹುಲಿಹೈದರ್ ಗ್ರಾಮ ಪಂಚಾಯಿತಿಯಲ್ಲಿ ಏನು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಆಗಿದೆ, ಆ ಅವ್ಯವಹಾರವನ್ನು ಇವತ್ತು ಬಯಲಿಗೆ ಎಳೆದು ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು, ಇದು ಒಂದು enquiry ಆಗಬೇಕು ಎಂದು ಈ ರೀತಿ ಆದಂಥದ್ದನ್ನು ಹೊರಗೆ ತರುತ್ತಾನೆ. ಒಂದು ಟಿ.ವಿ. ಚಾನೆಲ್‌ಗೆ interview ಕೊಡುತ್ತಾನೆ. ಇಷ್ಟೊಂದು ಅವ್ಯವಹಾರವಾಗಿದೆ, ಇದರ ಬಗ್ಗೆ ಸಂಪೂರ್ಣವಾದಂತಹ ತನಿಖೆಯಾಗಬೇಕು ಎಂದು ಮಾಡುತ್ತಾನೆ. With all documents ಆತ ಟಿ.ವಿ. ಮುಂದೆ ಸಂದರ್ಶನದಲ್ಲಿ ಹೇಳುತ್ತಾನೆ. ಇದನ್ನು ಆ ಹನುಮೇಶ್ ನಾಯಕ್ ಹಾಗೂ ಆತನ ಮಕ್ಕಳು ಮತ್ತು ಆ ಹನುಮೇಶ್ ನಾಯಕನ ಗೂಂಡಾ ಪಡೆ ಏನಿದೆ, ಇದನ್ನು ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆತನಿಗೆ ಅಂದರೆ ಯಲ್ಲಾಲಿಂಗನಿಗೆ ಬೆದರಿಕೆ ಹಾಕುತ್ತಾರೆ. Threat ಕೊಡುತ್ತಾರೆ. ನೋಡಿ, ಇದರ ಬಗ್ಗೆ ನೀವು ಮತ್ತೆ ಮಾತನಾಡಿದರೆ ನಿನ್ನನ್ನು ಬಿಡುವುದಿಲ್ಲ ಎನ್ನುವಂತಹ ರೀತಿಯಲ್ಲಿ ಆತನಿಗೆ threat ಕೊಡುತ್ತಾರೆ. ಮನೆಯಲ್ಲಿ ಆತನನ್ನು ಶಾಂತ ರೀತಿಯಿಂದ ಇರಲಿಕ್ಕೂ ಸಹ ಬಿಡುವುದಿಲ್ಲ. ಆತನ ತಾಯಿಗೆ Threat ಕೊಡುತ್ತಾರೆ. ಈ ಯಲ್ಲಾಲಿಂಗ ಎಂಬುವವನು ಹಲವಾರು ಜನರಿಗೆ ಫೋನ್ ಮಾಡಿ ಹೇಳುತ್ತಾನೆ. ಇಂತಹವರಿಂದ ನನಗೆ Threat ಬರುತ್ತಿದೆ. ನನ್ನ ಜೀವಕ್ಕೆ ಬೆದರಿಕೆ ಹಾಕುತ್ತಿದ್ದಾರೆ. ಎಲ್ಲಿಯವರೆಗೆ ಎಂದರೆ, ಬಹುಶಃ ಪೊಲೀಸ್ ಕಂಟ್ರೋಲ್ ರೂಂಗೆ ಅಂದರೆ ಅದನ್ನು ಪೊಲೀಸ್ ಅಧಿಕಾರಿಗಳು verify ಮಾಡಲಿ, ಪೊಲೀಸ್ ಕಂಟ್ರೋಲ್ ನಂಬರ್ 100ಕ್ಕೆ ಫೋನ್ ಮಾಡಿ ಗೂಂಡಾಗಳು ನನ್ನನ್ನು follow ಮಾಡುತ್ತಿದ್ದಾರೆ, ಈ ಹನುಮೇಶ್ ನಾಯಕ್ ಹಾಗೂ ಅವರ ಮಗ ಹಾಗೂ ಇತರೆ ಗೂಂಡಾ ಪಡೆ ನನ್ನನ್ನು follow ಮಾಡುತ್ತಿದ್ದಾರೆ, ಯಾವ ಸಂದರ್ಭದಲ್ಲಿ ಬೇಕಾದರೂ ನನ್ನನ್ನು ಹೊಡೆದು ಹಾಕಬಹುದು, ನನಗೆ

ಜೀವದ ಹೆದರಿಕೆಯಿದೆ, ನನಗೆ ರಕ್ಷಣೆ ಕೊಡಿ ಎಂದು ಆತ ಕಂಟ್ರೋಲ್ ರೂಂಗೆ ಫೋನ್ ಮಾಡಿ ಹೇಳುತ್ತಾನೆ. ಇಷ್ಟೆಲ್ಲಾ ಆದರೂ ಕೂಡ ಪೊಲೀಸರು ಅದಕ್ಕೆ response ಕೊಡುವುದಿಲ್ಲ. ಏನಾದರೂ ಆವತ್ತು ಆ ರೀತಿ ಆತ ಮಾಹಿತಿ ಕೊಟ್ಟಂತಹ ಸಂದರ್ಭದಲ್ಲಿ immediately ಅಲ್ಲಿಯ ಪೊಲೀಸ್ ಅಧಿಕಾರಿಗಳು ಸ್ಪಂದನ ಮಾಡಿ ತಕ್ಕಣವೇ response ಕೊಟ್ಟು ಆತನ address ತೆಗೆದುಕೊಂಡು ಎಲ್ಲಿದ್ದಾನೆ, ಏನು ಎಂದು ಆತನಿಗೆ ಆವತ್ತು ರಕ್ಷಣೆ ಕೊಟ್ಟಿದ್ದರೆ ಈ ಯಲ್ಲಾಲಿಂಗನ ಕೊಲೆ ಆಗುತ್ತಿರಲಿಲ್ಲ. ಮುಂದೆ ಪೊಲೀಸರ ನಿರ್ಲಕ್ಷ್ಯ ಒಂದು ಕಡೆಗೆ ಮತ್ತು ಗೂಂಡಾಪಡೆ ಈತನ ಬೆನ್ನು ಹತ್ತುವಂತಹದ್ದನ್ನು ಮಾಡುತ್ತಾರೆ. ಎಲ್ಲೆಲ್ಲಿ ಹೋಗುತ್ತಾನೆ, ಅಲ್ಲಿ follow ಮಾಡುವಂತಹದ್ದು ಮಾಡುತ್ತಾರೆ. ಕೊನೆಗೆ ಯಾವುದೋ ಒಂದು ಬಸ್‌ಗೆ ಹೋಗುತ್ತಾನೆ, ಆ ಬಸ್‌ನಲ್ಲಿ ಅಲ್ಲಿಂದ ಮತ್ತೆ ಕೊಪ್ಪಳದಲ್ಲಿ ಇಳಿಯುತ್ತಾನೆ, ಟ್ರೈನ್‌ನಲ್ಲಿ ಹೋಗುತ್ತಾನೆ, ಆ ಕೊಪ್ಪಳ ಸ್ಟೇಷನ್‌ನಲ್ಲಿ ಇಳಿದಾಗ ಅಲ್ಲಿ ಬಂದಂತಹ ಈ ಗೂಂಡಾಪಡೆ ಆತನನ್ನು ಹೊಡೆದು ಬಡಿದು ಆತನ ಕೊಲೆ ಮಾಡಿ ಶವ ಎಲ್ಲಿ ಎಸೆಯಬೇಕು ಎಂದು ಆತನು ತಾನೇ ಸತ್ತಿದ್ದಾನೆ ಎಂದು ಜನರು ತಿಳಿದುಕೊಳ್ಳುವ ರೀತಿಯಲ್ಲಿ ರೈಲ್ವೆ ಹಳಿ ಮೇಲೆ ಹಾಕಿ ಹೋಗುತ್ತಾರೆ. ಇಷ್ಟೆಲ್ಲಾ ಆದ ಮೇಲೆ ರೈಲ್ವೆ ಪೊಲೀಸರು ಇದನ್ನು ಆತ್ಮಹತ್ಯೆ ಎಂದು ಪ್ರಕರಣವನ್ನು ದಾಖಲು ಮಾಡುತ್ತಾರೆ. ಆದರೆ, ಆತನ ತಾಯಿ ಕೆಂಚವ್ವ ಮತ್ತು ಆತನ ಸಹೋದರಿ ಈ ಪ್ರಕರಣವನ್ನು ಬಿಡುವುದಿಲ್ಲ. ಅವರಿಗೆ ಇದರ ಬಗ್ಗೆ ಸಂಶಯ ಬರುತ್ತದೆ. ಏಕೆಂದರೆ, ಆ threat ಕೊಟ್ಟಿದ್ದು, ಗೂಂಡಾ ಪಡೆ ಹೊರಟಿದ್ದು ಎಲ್ಲವೂ ಸಹಿತ ಅವರಿಗೇ ಮಾಹಿತಿಯಿದೆ. ಅವರೂ ಸಹ ಆತನಿಗೆ ಹೇಳಿದ್ದಾರೆ. ಏನಪ್ಪ ನಿನ್ನನ್ನು ರಕ್ಷಣೆ ಮಾಡಿಕೋ, ಈ ಗೂಂಡಾಗಳು ನಿನ್ನನ್ನು ಬಿಡುವುದಿಲ್ಲ, ಅದು ಸಂಶಯ ಅವರಿಗೆ ಇದ್ದೇ ಇತ್ತು. ಆಮೇಲೆ ಈತ suicide ಮಾಡಿಕೊಂಡಿದ್ದಾನೆ ಎಂದು ಒಂದು ರಿಪೋರ್ಟ್ ಏನು ಬಂತು, ಅದರ ಮೇಲೆ ಅವರು ಆಕ್ರೋಶಗೊಂಡು immediately police station ಗೆ ಹೋಗಿ S.P ಯವರಿಗೆ complaint ಕೊಟ್ಟು ಇದು ಕೊಲೆ ಪ್ರಕರಣವಾಗಿದೆ. ಇದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ನಡೆಯುತ್ತಿದೆ. ಇದು ಕೊಲೆ ಪ್ರಕರಣ

ಎಂದು ಇದರಲ್ಲಿ ಯಾರ್‍ಯಾರು ಆರೋಪಿಗಳಿದ್ದಾರೆ ಅವರ ಹೆಸರುಗಳನ್ನು ಸಹ ಹೇಳುತ್ತಾರೆ. ಈ ಆರೋಪಿಗಳನ್ನು ತಕ್ಷಣವೇ arrest ಮಾಡಬೇಕು, ನಮಗೆ ರಕ್ಷಣೆ ಕೊಡಬೇಕೆಂದು ಅವರು ದೂರು ಕೊಟ್ಟಮೇಲೆ ಆ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಜನವರಿ 10ನೇ ತಾರೀಖಿನಂದು ಕೊಲೆಯಾಗಿದೆ. ಅಲ್ಲಿಂದ ಇದು ತಿಂಗಳುಗಟ್ಟಲೆ ಆತ್ಮಹತ್ಯೆ ಎಂದು ಹೋಗುತ್ತದೆ. ಆಮೇಲೆ ಇವರು ದೂರಿನ ಮೇರೆಗೆ S.P ಯವರು re open ಮಾಡಿದ ಮೇಲೆ ಕೊಲೆ ಎಂದು ಆಗುತ್ತದೆ. ಕೊಲೆಯಾದ ಮೇಲೆ ತಕ್ಷಣವೇ ಆರೋಪಿಗಳ ಬಂಧನವಾಗುವುದಿಲ್ಲ. ಕೇವಲ 3–4 ಜನರನ್ನು ಬಂಧನ ಮಾಡುತ್ತಾರೆ. ಆ ಹನುಮೇಶ್ ನಾಯಕ್ ಮೂರನೇ ಆರೋಪಿಯನ್ನು ತಕ್ಷಣವೇ arrest ಮಾಡುವುದಿಲ್ಲ. ಆಮೇಲೆ ಹನುಮೇಶ್ ನಾಯಕನ ಮಗ ಮಹಾಂತೇಶ್ ನಾಯಕ್ ಎಂಬುವವನು ನಂತರ arrest ಮಾಡುತ್ತಾರೆ. ಮಹಾಂತೇಶ್ ನಾಯಕ ಇತ್ತೀಚಿನವರೆಗೂ ಸಾರ್ವಜನಿಕವಾಗಿ ಓಡಾಡಿಕೊಂಡು ಇದ್ದ. ನನಗೇನಾಗ್ಯೆತಿ, ಯಾರೇನು ಮಾಡುತ್ತಾರೆ ನನ್ನನ್ನು. ಈ ರೀತಿ ಓಡಾಡಿಕೊಂಡು ಇದ್ದ, ಆತನನ್ನು ಯಾರೂ arrest ಮಾಡುವುದಕ್ಕೆ ತಯಾರಿರುವುದಿಲ್ಲ. ಎಲ್ಲಿಯವರೆಗೆ ಎಂದರೆ, ಹನುಮೇಶ್ ನಾಯಕ್ ಈ ಹಿಂದೆ ಜಿಲ್ಲಾ ಪಂಚಾಯತ್ ಸದಸ್ಯರನಾಗಿದ್ದಂತಹವನು. ಆತನ ಹೆಂಡತಿ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಾಗಿದ್ದರು. ಈ ರೀತಿ ಒಂದು ಗೂಂಡಾ ಪಡೆ ಮಾಡಿಕೊಂಡು ಹುಲಿಹೈದರ್ ಅದರ ಪಾಳೇಗಾರ ನಾನು ಎನ್ನುವಂತಹ ರೀತಿಯಲ್ಲಿ ನಾನು ಹೇಳಿದ ಹಾಗೆ ಹುಲಿಹೈದರ್‌ರವರನ್ನು ಹಿಡಿಯಬೇಕು, ಆ ಕನಕಗಿರಿ ಕ್ಷೇತ್ರ ಏನಿದೆ, ಶಿವರಾಜ್ ತಂಗಡಗಿ ಯವರು ಅದನ್ನು ಪ್ರತಿನಿಧಿಸುತ್ತಾರೆ, ಅಲ್ಲಿ ಅವರು ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿದ್ದಾರೆ. ಅವರ ಹೆಸರನ್ನು ಹೇಳಿಕೊಂಡು ಈ ಗೂಂಡಾಪಡೆ ಕೆಲಸ ಚಾಲೂ ಮಾಡುತ್ತದೆ. ಅಲ್ಲಿ ಹೇಗಿದೆ ಎಂದರೆ ಹನುಮೇಶ್ ನಾಯಕ್ ಎಂದರೆ, ಶಿವರಾಜ್ ತಂಗಡಗಿಯವರ ಬಲಗೈ ಭಂಟ. ಯಾರೂ ಬೇಕಾದರೂ ತಾವು ಹೋಗಿ ಕೇಳಬಹುದು. ಪೊಲೀಸ್ ಅಧಿಕಾರಿಗಳು ಅಲ್ಲಿಗೆ ಹೋಗಿ ಯಾರಿಗಾದರೂ

ಕೇಳಬಹುದು. ಹೇಗಿದೆ ಎಂದರೆ ಹನುಮೇಶ್ ನಾಯಕ್ ಎಂದರೆ ಶಿವರಾಜ್ ತಂಗಡಗಿಯವರ ಬಲಗೈ ಭಂಟ.

ಶ್ರೀ ಶಿವರಾಜ್ ಎಸ್. ತಂಗಡಗಿ:- ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ. ಯಾವುದೇ ರೀತಿ ತಪ್ಪು ಮಾಹಿತಿ ಹೋಗಬಾರದು.

ಶ್ರೀ ಜಗದೀಶ್ ಶೆಟ್ಟರ್:- ನಾನು ಏನೂ ಆಪಾದನೆ ಮಾಡಿಲ್ಲ. ನಾನು ಏನೂ ಮಾಡಿಲ್ಲ.

ಶ್ರೀ ಶಿವರಾಜ್ ಎಸ್. ತಂಗಡಗಿ:- ನಾನು ಹೇಳಿದ್ದೇನೆ. ಅವರು ಮಾತನಾಡಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: "ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿದರಂತೆ."

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- "ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿದರಂತೆ."

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:- ಅದು ನನ್ನ ಕ್ಷೇತ್ರ. ಆ ಕ್ಷೇತ್ರದಿಂದ ನಾನು ಪ್ರತಿನಿಧಿಸುತ್ತಿದ್ದೇನೆ. ಮೊದಲನೆಯ ಬಾರಿಯಲ್ಲ. ಎರಡನೇ ಬಾರಿಗೆ ಆ ಕ್ಷೇತ್ರದಿಂದ ಆರಿಸಿ ಬಂದಿದ್ದೇನೆ. ಆ ಕ್ಷೇತ್ರದಲ್ಲಿ ವಿಶೇಷವಾಗಿ ನನ್ನನ್ನು ಆರಿಸಿ ಕಳುಹಿಸಿದ್ದಾರೆ. ನೀವು ಮಾತನಾಡಿ ಅದರ ಬಗ್ಗೆ ಚರ್ಚೆ ಮಾಡಿ. ಉತ್ತರ ಕೊಡೋಣ. ನಿಮಗೆ ಎಷ್ಟು ಕಾಳಜಿಯಿದೆ ಅದಕ್ಕಿಂತಲೂ ಹೆಚ್ಚಿನ ಕಾಳಜಿ ನನಗಿದೆ. ನಾನು ಶಾಸಕನಾಗಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ತಾಳ್ಮೆ ತೆಗೆದುಕೊಳ್ಳಿ,

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:– ವಾಸ್ತವಿಕ ಸಂಗತಿ ಏನಿದೆ, ಅದನ್ನು ಮಾತನಾಡಿ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರೆ, ಇಲ್ಲಿ ಮಂತ್ರಿಗಳು ನಾವು ಹೇಳುವುದನ್ನು ತಾಳ್ಮೆಯಿಂದ ಕೇಳಬೇಕಾಗುತ್ತದೆ. ಮಂತ್ರಿಗಳು ಕೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:– ಅದು ಚರ್ಚೆಯಾಗಲಿ, ಚರ್ಚೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ವಾಸ್ತವಿಕ ಸತ್ಯ ಹೊರಗೆ ಬರಲಿ. ಅದರೆ, ತಪ್ಪು ಮಾಹಿತಿಯನ್ನು ಕೊಡುವುದು ಬೇಡ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– "ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ಕೊಂಡು ನೋಡಿದರು."

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:– ಅದರ ಬಗ್ಗೆ ನನಗೆ ವಿಶೇಷವಾದ ಆಸಕ್ತಿಯಿದೆ. ನೀವು ಕುಂಬಳಕಾಯಿ ಕಳ್ಳರಿರಬಹುದು.

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:– ತಪ್ಪು ಮಾಹಿತಿಯನ್ನು ಕೊಡಬೇಡಿ.

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:- ನೀವು ಧಾರವಾಡದಲ್ಲಿ ಮಂತ್ರಿಯಾಗಿದ್ದಾಗ ಏನೂ ಆಗಿಲ್ಲವೇನು? ಅವುಗಳನ್ನೆಲ್ಲ ನೀವೇ ಮಾಡಿಸಿದ್ದೀರೇನು? ನೀವು ಇದ್ದಾಗ ಕೊಲೆಗಳು ಆಗಿಲ್ಲವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಗೂಂಡಾಗಿರಿಗೆ ರಕ್ಷಣೆ ಕೊಡುವಂತಹವರು.

(ಗೊಂದಲ)

ಶ್ರೀ ಕೆ. ಷಡಕ್ಷರಿ:- ಮಾನ್ಯ ಅಧ್ಯಕ್ಷರೆ, ಅವರು ಹೆಸರು ಹೇಳಿ ನೇರವಾಗಿ ಅವರ ಮೇಲೆ ಆಪಾದನೆ ಮಾಡುತ್ತಿದ್ದಾರೆ. ನೇರವಾಗಿ ಆಪಾದನೆ ಮಾಡುತ್ತಿದ್ದಾರೆ. ಅವರಿಗೆ ಹೇಳುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಉಪಾಧ್ಯಕ್ಷರೆ, ಇದನ್ನು ಸರಿಮಾಡಬೇಕು. ವಿರೋಧ ಪಕ್ಷದ ನಾಯಕರು ಯಾವುದೇ ರೀತಿಯಾದಂತಹ ನೇರವಾದ ಆರೋಪವನ್ನು ಮಾನ್ಯ ಮಂತ್ರಿಯವರಾದ ಶಿವರಾಜ್ ತಂಗಡಗಿಯವರ ಮೇಲೆ ಮಾಡಿಲ್ಲ. ಒಂದೇ ನಿಮಿಷ ಹೇಳುತ್ತೇನೆ.

(ಗೊಂದಲ)

ಶ್ರೀ ಕೆ. ಷಡಕ್ಷರಿ:- ಬೊಮ್ಮಾಯಿಯವರೆ, ಅದನ್ನು ತೆಗೆಸಿರಿ.

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:- ನೇರವಾಗಿ ನನ್ನ ಹೆಸರು ತೆಗೆದುಕೊಂಡರೆ ನನಗೆ ಒಂದು ತರಹ ನೋವು ಆಗುತ್ತದೆ. ನಾನು ಆ ಕ್ಷೇತ್ರದ ಶಾಸಕ.

(ಗೊಂದಲ)

ಶ್ರೀ ಸಿ.ಟಿ. ರವಿ:- ಮಾನ್ಯ ಉಪಾಧ್ಯಕ್ಷರೆ, ಹನುಮೇಶ್ ನಾಯಕ್ ಎನ್ನುವವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು. ಅದು ಸುಳ್ಳಾ? ಅವರು ಶಿವರಾಜ್ ತಂಗಡಗಿಯವರ ಬೆಂಬಲಿಗರು ಅದು ಸುಳ್ಳಾ? ಇದು ಸುಳ್ಳಾ? FIR ನಲ್ಲಿ ಆತ ಮೂರನೇ ಆರೋಪಿ. ಆರು ತಿಂಗಳು FIR ನಲ್ಲಿ ಆತ ಮೂರನೇ ಆರೋಪಿ. ರಾಜಾರೋಷವಾಗಿ ಊರಿನ ತುಂಬಾ ಓಡಾಡಿಕೊಂಡಿದ್ದಾನೆ.

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:- ಮೂರನೇ ಆರೋಪಿ ಸತ್ಯ. ಅದರ ಬಗ್ಗೆ ಚರ್ಚೆ ಮಾಡಿ. ನನ್ನ ಹೆಸರು ಏಕೆ ನೀವು ತರುತ್ತೀರಿ? ಆ ಕ್ಷೇತ್ರದ ಶಾಸಕ ನಾನು. ನನಗೆ ಗೊತ್ತಿದೆ.

(ಗೊಂದಲ)

ಶ್ರೀ ಕೆ. ಷಡಕ್ಷರಿ:- ತಪ್ಪು ಮಾಡಿದ್ದರೆ ಕ್ರಮ ತೆಗೆದುಕೊಳ್ಳಲಿ, ಜೈಲಿಗೆ ಹಾಕಲಿ. ಆದರೆ, ಅವರು ನೇರವಾಗಿ ಆಪಾದನೆ ಮಾಡುತ್ತಿದ್ದಾರಲ್ಲಾ?

(ಗೊಂದಲ)

ಶ್ರೀ ಸಿ.ಟಿ. ರವಿ:- ಅವರು ತಡೆಯದೇ ಇದ್ದರೆ Chief Minister ತಡೆಯಬೇಕು. ಜಿಲ್ಲಾ ಉಸ್ತುವಾರಿ ಸಚಿವರು ತಡೆಯದೇ ಇದ್ದರೆ Home Minister ತಡೆಯಬೇಕು. Home Minister ತಡೆದಿಲ್ಲವೆಂದರೆ Chief Minister ತಡೆದಿರಬಹುದು.

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:- ಅವರು ನಿಮ್ಮ ಬೆಂಬಲಿಗರು ಅಲ್ಲವೇ?

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:- ಇದು ಸರಿಯಲ್ಲ. ನೀವು ಮಾತನಾಡುವ ದಾಟಿಯನ್ನು ಬದಲಿಸಿಕೊಳ್ಳಿ, ನೀವು ಮಂತ್ರಿಯಾಗಿ ಮಾತನಾಡಿ. ಈ ರೀತಿ ಮಾತನಾಡುವುದು ಸರಿಯಲ್ಲ. ಅವರು ಮಾತನಾಡುತ್ತಿರುವ ರೀತಿ ಸರಿಯಿದೆಯೇ? ಅವರು ಏನು ಗೂಂಡಾನಾ ಅಥವಾ ಮಂತ್ರಿನಾ?

(ಗೊಂದಲ)

ಉಪಾಧ್ಯಕ್ಷರು:- ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:- ಅವರು ಗೂಂಡಾ ರೀತಿ ಮಾತನಾಡುವುದು ಬೇಡ. ಅವರು ಮಂತ್ರಿ ರೀತಿ ಮಾತನಾಡಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಒಬ್ಬರು ಸಚಿವರಾಗಿ ಈ ರೀತಿಯಾದಂತಹ ವರ್ತನೆ ಮಾಡುವುದು ಈ ಸದನಕ್ಕೆ ಗೌರವ ತರುವಂತಹದ್ದಲ್ಲ. ತಾವು ಈ ರೀತಿ ವರ್ತನೆ ಮಾಡಬಾರದು ಎಂದು ಎಚ್ಚರಿಕೆ ಕೊಡಬೇಕು. ಗೂಂಡಾಗಿರಿ ನಿಮ್ಮ ಕ್ಷೇತ್ರದಲ್ಲಿ ಮಾಡಿರಬಹುದು, ಕೊಪ್ಪಳದಲ್ಲಿ ಮಾಡಿರಬಹುದು, ಅದು ಇಲ್ಲಿ ನಡೆಯುವುದಿಲ್ಲ.

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:- ನೀವು ಹೇಳಿದ್ದನ್ನೆಲ್ಲಾ ಕೇಳಬೇಕಾ?

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:- ಇದು ಸರಿಯಲ್ಲ. ಎಲ್ಲರೂ ಹೇಳುವುದನ್ನು ತಾಳ್ಮೆಯಿಂದ ಕೇಳಿ. ಏಕೆ ಗಡಿಬಿಡಿ ಮಾಡುತ್ತೀರಿ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಗೂಂಡಾಗಿರಿ ವರ್ತನೆಯನ್ನು ಸದನದಲ್ಲಿಯೂ ಮಾಡುತ್ತಿದ್ದಾರೆ. ಗೂಂಡಾಗಿರಿಯನ್ನು ನಿಮ್ಮ ಕ್ಷೇತ್ರದಲ್ಲಿ ಮಾಡಿರಬಹುದು, ಕೊಪ್ಪಳದಲ್ಲಿ ಮಾಡಿರಬಹುದು. ಇಲ್ಲಿ ನಿಮ್ಮ ಗೂಂಡಾಗಿರಿ ನಡೆಯುವುದಿಲ್ಲ.

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:- ನನಗೆ ಗೊತ್ತಿದೆ, ನೀವು ಮಾತನಾಡಿ, ಚರ್ಚೆ ಮಾಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಿಮಗೆ ಸಮಾಧಾನದಿಂದ ಮಾತನಾಡುವುದಕ್ಕೆ ಬರುವುದಿಲ್ಲ. ಬಾಯಿ ಮುಚ್ಚಿಸುವ ಪ್ರಯತ್ನ ಮಾಡುತ್ತೀರಾ?

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:- ನೀವು ಚರ್ಚೆ ಮಾಡಿ ಯಾರು ಬೇಡವೆಂದು ಹೇಳಿರುವುದು.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:- ಎಲ್ಲರೂ ಹೇಳುವುದನ್ನು ನೀವು ತಾಳ್ಮೆಯಿಂದ ಕೇಳಿ. ಏಕೆ ಗಡಿಬಿಡಿ ಮಾಡುತ್ತೀರಿ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಇದು ಬಾಯಿ ಮುಚ್ಚಿಸುವ ಪ್ರಯತ್ನವೇ? ಕನಕಗಿರಿ ಕ್ಷೇತ್ರದಲ್ಲಿ ದಾದಾಗಿರಿ ಮಾಡುತ್ತಿದ್ದಾರೋ, ದಬ್ಬಾಳಿಕೆ ಮಾಡುತ್ತಿದ್ದಾರೋ? ತಾವು ಮಂತ್ರಿಗಳಾಗಿ ಸದನದಲ್ಲಿ ವರ್ತನೆ ಮಾಡುವ ರೀತಿಯೇ ಇದು?

(ಗೊಂದಲ)

ಶ್ರೀ ಸಿ.ಟಿ. ರವಿ:- ನೀವೆಲ್ಲ ಅವರ ಬೆಂಬಲಕ್ಕೆ ನಿಂತು ಏಕೆ ಹಾಳಾಗಿ ಹೋಗುತ್ತೀರಿ. ಸತ್ಯವನ್ನು ಮುಚ್ಚಿ ಹಾಕುತ್ತೀರೇನು?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ವಿರೋಧಪಕ್ಷದ ನಾಯಕರು ಮಾತನಾಡುವಾಗ ತಾಳ್ಮೆಯಿಂದ ಕೇಳಬೇಕಲ್ಲವೇ? ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ಅವರು ಮಾತನಾಡಿದ ನಂತರ ನಿಮಗೆ ಉತ್ತರ ಹೇಳುವುದಕ್ಕೆ ಅವಕಾಶವಿದೆ.

(ಗೊಂದಲ)

ಶ್ರೀ ಸಂಜಯ್ ಬಿ. ಪಾಟೀಲ್:- ವಿರೋಧಪಕ್ಷದ ನಾಯಕರು ಮಾತನಾಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಸದಸ್ಯರೆಲ್ಲರೂ ಮುಖ್ಯಮಂತ್ರಿಗಳು ಸ್ವಲ್ಪ ಗಮನಿಸಲಿ ಎಂದು ಮಾತನಾಡುತ್ತಿದ್ದಾರಷ್ಟೆ. ಮತ್ತೇನಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಶಿವರಾಜ್ ತಂಗಡಗಿಯವರು ಒಮ್ಮೆಲೆ ಇಷ್ಟೇಕೆ emotional ಆಗುತ್ತಿದ್ದಾರೆಂದು ಗೊತ್ತಿಲ್ಲ. ನಾನು ನೇರವಾಗಿ ಅವರ ಮೇಲೆ ಏನು ಆಪಾದನೆ ಮಾಡಿಲ್ಲ. ಹನುಮೇಶ್ ನಾಯಕ್ ರವರು ಕಾಂಗ್ರೆಸ್ ಪಕ್ಷದಲ್ಲಿ ಇದ್ದದ್ದು ಸತ್ಯವೋ ಸುಳ್ಳೋ ಎಂದು ಅವರು ಹೇಳಲಿ. ಇವರು ಕಾಂಗ್ರೆಸ್ ಪಾರ್ಟಿ ಹೌದೋ ಅಲ್ಲವೋ ಎಂದು ಹೇಳಲಿ. ಶಿವರಾಜ್ ತಂಗಡಗಿಯವರ ಬಲಗೈ ಬಂಟ ಎಂದು ನಾನು ಹೇಳಿದೆ ಅಲ್ಲವೆಂದು ಅವರು ಉತ್ತರದಲ್ಲಿ ಹೇಳಲಿ. ನನಗೂ ಅವನಿಗೂ ಏನೂ ಸಂಬಂಧವಿಲ್ಲ, ನನ್ನ ಬಲಗೈ ಬಂಟ ಅಲ್ಲ, ಎಡಗೈ ಬಂಟನೂ ಅಲ್ಲವೆಂದು ಅವರು ಹೇಳಲಿ. Deny ಮಾಡುವುದಕ್ಕೆ ಅವರಿಗೆ ಹಕ್ಕಿದೆ, ಆತ ಶಿವರಾಜ್ ತಂಗಡಗಿಯವರ ಬಲಗೈ ಬಂಟನೆಂದು ನಾನು ಹೇಳುತ್ತಿದ್ದೇನೆ. ಇಂತಹ ಒಂದು ಗೂಂಡಾಗಿರಿ ನಡೆಯುತ್ತಿದೆ. ಇದೇನು un-parliamentary ಅಥವಾ ಏನಾದರೂ ತಂಗಡಗಿಯವರನ್ನು ಆಪಾದನೆ ಮಾಡಿದ್ದೇವೆಯೇ? ಏನಿಲ್ಲ

ನಾನಿನ್ನೂ ಪ್ರಾರಂಭ ಮಾಡಿದ್ದೇನೆ, ಆಗಲೇ ಇಷ್ಟು ಹೇಳುತ್ತಾರೆ. ಇವರ ರೀತಿಯನ್ನು ನೋಡಿದರೆ "ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡರೆಂದು" ಅರ್ಥ ಮಾಡಿಕೊಳ್ಳವುದಕ್ಕೆ ಅವಕಾಶವಾಗುತ್ತದೆ.

ಉಪಾಧ್ಯಕ್ಷರು:– ಸದಸ್ಯರೆ, ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್:– ಇವತ್ತು ಎಷ್ಟೊಂದು ಗೂಂಡಾಗಿರಿ ನಡೆಯುತ್ತಿದೆಯೆಂದರೆ, ಈ ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ನಡೆಯಿತು. ಮೊದಲು ಸೂಯಿಸೈಡ್ ನಂತರ ಕೊಲೆಯೆಂದು open ಆಯಿತು, investigation ಮಾಡಿ slowly ಒಬ್ಬರನ್ನು, ಇಬ್ಬರನ್ನು ಅರೆಸ್ಟ್ ಮಾಡಿದರು. ನಾಲ್ಕು, ಎಂಟು, ಒಂಭತ್ತು ಜನ ಆರೋಪಿಗಳು ಒಬ್ಬೊಬ್ಬರಾಗಿ ಆದರು, ಮೊದಲು ಆರು ಜನರನ್ನು ಅರೆಸ್ಟ್ ಮಾಡಿದರು. ಬಹುಶಃ ಈ ಪ್ರಕರಣ open ಆಗದಿದ್ದರೆ, ಹಾಗೆ ಮುಚ್ಚಿ ಹೋಗುವ ಪರಿಸ್ಥಿತಿ ಕೂಡ ಇತ್ತು. ಐದಾರು ಜನ ಅರೆಸ್ಟ್ ಆದ ನಂತರ ಕೂಡ ಹನುಮೇಶ್ ನಾಯಕ್ ರವರನ್ನು ಪೋಲಿಸ್‌ರವರು ಅರೆಸ್ಟ್ ಮಾಡಲೇ ಇಲ್ಲ. ಕೇವಲ ಭಾರತೀಯ ಜನತಾ ಪಾರ್ಟಿ ಮಾತ್ರ ಹೋರಾಟಕ್ಕೆ ಇಳಿಯಲಿಲ್ಲ, ಮಾಜಿ ಸಚಿವೆಯಾದ ಬಿ.ಟಿ.ಲಲಿತಾನಾಯಕ್‌ರವರು, ಸಾಮಾಜಿಕ ಕಾರ್ಯಕರ್ತರು, ಬೇರೆ ಬೇರೆ ಸಂಘಟನೆಗಳು ಎಲ್ಲರೂ ಕೂಡ ಅಲ್ಲಿ ಹೋರಾಟಕ್ಕಿಳಿದರು. ಈ ರೀತಿ ಹೊರಟಕ್ಕಿಳಿದ ನಂತರ ಪೊಲೀಸ್‌ರವರಿಗೆ ಒತ್ತಡ ಬಂತು. ಭಾರತೀಯ ಜನತಾ ಪಾರ್ಟಿಯ ನಾಯಕರಾದ ನಾವು ಕೂಡ ಅಲ್ಲಿ ಹೋಗಿ ಹೋರಾಟ ಮಾಡಿದೆವು. ಹೋರಾಟ ಮಾಡಿದ ನಂತರ ಒಂದೊಂದಾಗಿ ನಿಜಾಂಶ ಹೊರಗೆ ಬರುವುದಕ್ಕೆ ಪ್ರಾರಂಭವಾಯಿತು. ಮೂರನೇ ಆರೋಪಿಯಾದ ಹನುಮೇಶ್ ನಾಯಕ್ ಮೇ ತಿಂಗಳವರೆಗೆ, ಜೂನ್ ತಿಂಗಳವರೆಗೆ ಆತ ಅರೆಸ್ಟ್ ಆಗಲಿಲ್ಲ. ರಮೇಶ್‌ನಾಯಕ್ ಮತ್ತು ಅಶೋಕ್ ನಾಯಕ್ ಎಂಬುವವರು ಈ ಕ್ಷಣದವರೆಗೆ ಅರೆಸ್ಟ್ ಆಗಿಲ್ಲ. ನಿನ್ನೆ ಪತ್ರಿಕೆಯಲ್ಲಿ ನೋಡಿದೆ, ಇನ್ನಿಬ್ಬರು ಆರೋಪಿಗಳು ಅಧಿವೇಶನದಲ್ಲಿ ಹೋರಾಟ ನಡೆಯುತ್ತದೆಂದು ಅವರುಗಳು ಹೋಗಿ ನಿನ್ನೆ ಜಿಲ್ಲಾ ನ್ಯಾಯಾಲಯದಲ್ಲಿ ಶರಣಾಗಿದ್ದಾರೆ. ಇಲ್ಲಿಯವರೆಗೆ ಶರಣಾಗಲಿಲ್ಲ, ಗೂಂಡಾಗಿರಿ ದೌರ್ಜನ್ಯದ ವಿರುದ್ಧ ಯಾವಾಗ

ಜನ-ಜಾಗೃತಿಯಾಯಿತು, ಹೋರಾಟ ಪ್ರಾರಂಭವಾಯಿತು ಆಗ ಇವರಿಗೆ ತಿಳಿಯಿತು. ಅಲ್ಲಿಯವರೆಗೆ ಈ ಪ್ರಕರಣ ಮುಚ್ಚಿ ಹೋಗುತ್ತದೆ, ನಾವು ಮಾಡಿದ್ದು ನಡೆದು ಹೋಗುತ್ತದೆ, ನಮ್ಮ ತಪ್ಪನ್ನು ಯಾರೋ ಮುಚ್ಚಿ ಹಾಕಿಬಿಡುತ್ತಾರೆ, ನಮಗೆ ರಕ್ಷಣೆ ಕೊಡುವವರು ಇದ್ದಾರೆ ಎಂದು ಈ ಪ್ರಕರಣವನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನಿಸಿದ್ದರು. ಯಾವಾಗ ಜನಜಾಗೃತಿಯಾಯಿತು, ಹೋರಾಟ ಪ್ರಾರಂಭವಾಯಿತು, ಜನಪರ ಸಂಘಟನೆಗಳು ಇದರಲ್ಲಿ involve ಆಯಿತು, ಭಾರತೀಯ ಜನತಾ ಪಾರ್ಟಿ ಯಾವಾಗ ಹೋರಾಟ ಪ್ರಾರಂಭ ಮಾಡಿತೋ ಆಗ ಇದೆಲ್ಲಾ ಶುರುವಾಯಿತು. ಮೊದಲು ಸ್ಥಳೀಯ ಪೊಲೀಸರಿಂದ ನಂತರ ಒತ್ತಡ ಜಾಸ್ತಿಯಾದ ನಂತರ ಮುಖ್ಯಮಂತ್ರಿಗಳು ಸಿ.ಐ.ಡಿ ತನಿಖೆಗೆ ಆದೇಶ ಮಾಡಿದರು. ನಾನೇ ಹೇಳಿ ಸಿ.ಐ.ಡಿ ತನಿಖೆ ಮಾಡಿಸುತ್ತೇನೆಂದು ತಂಗಡಗಿಯವರಿಂದ ಸ್ಟೇಟ್‌ಮೆಂಟ್ ಬಂತು, ಇದೇ ಸ್ಟೇಟ್‌ಮೆಂಟ್ ಅನ್ನು ಜನವರಿ, ಫೆಬ್ರವರಿ ತಿಂಗಳಲ್ಲಿ ಏಕೆ ಹೇಳಿಲ್ಲ. ಇತ್ತೀಚಿಗೆ ಸಾರ್ವಜನಿಕ ಒತ್ತಡ ಜಾಸ್ತಿ ಆದ ನಂತರ ಮುಖ್ಯಮಂತ್ರಿಗಳು ಜೂನ್ ತಿಂಗಳಲ್ಲಿ ಸಿ.ಐ.ಡಿ ತನಿಖೆಗೆ ಆದೇಶ ಮಾಡಿದರು. ನಂತರ ಸಿ.ಐ.ಡಿ ತಂಡ ಕೊಪ್ಪಳಕ್ಕೆ ಬಂದ ತಕ್ಷಣ ಹನುಮೇಶ್ ನಾಯಕ್ ರವರನ್ನು ಕಸ್ಟಡಿಗೆ ತೆಗೆದುಕೊಂಡರು. ಜನವರಿ 10ನೇ ತಾರೀಖಿನಂದು ಕೊಲೆಯಾದ ಪ್ರಕರಣದಲ್ಲಿ ಕೇಂದ್ರ ಬಿಂದುವಾದ ಹನುಮೇಶ್ ನಾಯಕನೇ ಪ್ರಮುಖನಾದ ವ್ಯಕ್ತಿಯಾಗಿದ್ದು, ಆ ತಾಯಿ ಪದೇ ಪದೇ ಈತನಿಂದ ಹೆದರಿಕೆಯಿದೆ ಅರೆಸ್ಟ್ ಮಾಡಿ ಎಂದು ಹೇಳುತ್ತಿದ್ದರು. ಇಷ್ಟಾದರೂ ಆತನನ್ನು ಅರೆಸ್ಟ್ ಮಾಡಿರಲಿಲ್ಲ ಈತನಿಗೆ ಯಾರ ರಕ್ಷಣೆ ಮತ್ತು ಪ್ರೆಷರ್‌ಯಿದೆಯೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇಷ್ಟೆಲ್ಲಾ ಒತ್ತಡವಿದ್ದರೂ ಆತನನ್ನು ಅರೆಸ್ಟ್ ಮಾಡಿರಲಿಲ್ಲ, ಒಂದು ಕಡೆ ಎಸ್.ಪಿ ರವರು ಯಾವುದೇ ಸಾಕ್ಷಿ ಪುರಾವೆ ಸಿಕ್ಕಿದ ಕಾರಣ ಈತನನ್ನು ಅರೆಸ್ಟ್ ಮಾಡಿಲ್ಲವೆಂದು ಕೊಟ್ಟಿರುವ ಸ್ಟೇಟ್‌ಮೆಂಟ್ ಅನ್ನು ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ಮುಖ್ಯಮಂತ್ರಿಯರು ಸಿ.ಐ.ಡಿ ರವರನ್ನು ನೇಮಕ ಮಾಡಿದ ನಂತರ ಅವರು ಕೊಪ್ಪಳಕ್ಕೆ ಬಂದು ವಿಚಾರಣೆ ಮಾಡಿ ಆತನನ್ನು prima

facie case ಇದ್ದ ಮೇಲೆ ಅರೆಸ್ಟ್ ಮಾಡಿದರು. ಕೊಲೆ ಮಾಡಿರುವಂತಹ ಒಬ್ಬ ವ್ಯಕ್ತಿ ಜೂನ್ ತಿಂಗಳವರೆಗೆ open ಆಗಿ ಸಾರ್ವಜನಿಕವಾಗಿ ಅಡ್ಡಾಡುತ್ತಾನೆ. ಅದಕ್ಕೆ direction ಕೊಟ್ಟಿರುವಂತಹ ವ್ಯಕ್ತಿ open ಆಗಿ ಅಡ್ಡಾಡುತ್ತಾನೆ. ಆತನನ್ನು ಅರೆಸ್ಟ್ ಮಾಡುವುದಿಲ್ಲ. ಕಸ್ಟಡಿಗೆ ತೆಗೆದುಕೊಳ್ಳುವುದಿಲ್ಲ, ಆತನನ್ನು enquiry ಮಾಡುವುದಿಲ್ಲ. ಯಲ್ಲಾಲಿಂಗನನ್ನು ಕೊಲೆ ಮಾಡಿದಂತಹ ಹನುಮೇಶ್ ನಾಯಕ ಮತ್ತು 10–15 ಜನ ಬೇರೆ ಬೇರೆ ಮಂದಿಯನ್ನು ಕರೆದುಕೊಂಡು ನನ್ನ ತಪ್ಪಿಲ್ಲವೆಂದು ಹೇಳುವುದಕ್ಕೆ ಯಲ್ಲಾಲಿಂಗನ ತಾಯಿ ಕೆಂಚಮ್ಮನ ಮನೆಗೆ ಜೂನ್ ತಿಂಗಳಲ್ಲಿ ಹೋಗುತ್ತಾನೆ. ಆ ಸಂದರ್ಭದಲ್ಲಿ ಪೋಲಿಸರಿರುತ್ತಾರೆ, ಅಲ್ಲೇ ಹನುಮೇಶ್ ನಾಯಕನನ್ನು ಅರೆಸ್ಟ್ ಮಾಡಬಹುದಿತ್ತು, ಆದರೆ ಮಾಡಲಿಲ್ಲ. ಕೆಂಚಮ್ಮ ಹೆದರಿ ಮತ್ತೆ ಪತ್ರಿಕಾ ಗೋಷ್ಠಿ ಕರೆದು ಸ್ಟೇಟ್‌ಮೆಂಟ್ ಕೊಡುತ್ತಾಳೆ ಮತ್ತು ಪೊಲೀಸ್ ಕಂಪ್ಲೇಟ್ ಕೊಡುತ್ತಾಳೆ. ಆರೋಪಿ ನಮ್ಮ ಮನೆಗೆ ಬಂದು ಬೆದರಿಕೆ ಒಡ್ಡಿದರೆ ನಾನು ಹೇಗೆ ಸ್ಟೇಟ್‌ಮೆಂಟ್ ಕೊಡುವುದು, ಇದು impartial ಆಗಿ ಹೇಗೆ ತನಿಖೆಯಾಗುತ್ತದೆಂದು ಕೇಳಿ ಅವರು ಸ್ಟೇಟ್‌ಮೆಂಟ್ ಕೊಡುತ್ತಾರೆ. ಆತ ಬಂದು ಹೋದ ಒಂದೆರಡು ದಿವಸಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿಯವರು ಅವರ ಮನೆಗೆ ಹೋಗುತ್ತಾರೆ. ಜನವರಿಯಲ್ಲಿ ಕೊಲೆಯಾದ ನಂತರದ ನಾಲ್ಕೈದು ತಿಂಗಳಾದರೂ ಕೂಡ ಅಲ್ಲಿ ಕೊಲೆಯಾಗಿದೆ ಸಾರ್ವಜನಿಕವಾಗಿ ಚರ್ಚೆ ಆಗುತ್ತಿದೆ, ಆ ಕುಟುಂಬಕ್ಕೆ ಹೋಗಿ ಸಂತೈಸಬೇಕು, ಹೋಗಬೇಕೆಂಬ ಕಾಳಜಿಯಿರಲಿಲ್ಲ. ತಾವು ಅಲ್ಲಿಗೆ ಹೋಗುವುದಾಗಿ ಯಾವ ಪತ್ರಿಕಾ ಮಾಧ್ಯಮಕ್ಕೂ ಹೇಳುವುದಿಲ್ಲ, ಯಾರಿಗೂ ಹೇಳುವುದಿಲ್ಲ ಕದ್ದು–ಮುಚ್ಚಿ ಅಲ್ಲಿ ಹೋಗಿ ಒಂದು ಲಕ್ಷ ರೂ.ಗಳ ಪರಿಹಾರ ಕೊಟ್ಟು, ನನ್ನ ತಪ್ಪಿಲ್ಲವೆಂದು ಹೇಳುತ್ತಾರೆ. ಹಾಗಾದರೆ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಹೋಗಬಹುದಿತ್ತು. Impartial ತನಿಖೆಯಾಗಬೇಕೆಂದು ಅವರ ಮನಸ್ಸಿನಲ್ಲಿ ಅವತ್ತೇ ಬಂದಿದ್ದರೆ ಸಿ.ಐ.ಡಿ ತನಿಖೆ ಮಾಡಿಸಿ ಎಂದು ಮುಖ್ಯಮಂತ್ರಿಗಳಿಗೆ ಹೇಳಿ ಆದೇಶ ಮಾಡಿಸಬಹುದಾಗಿತ್ತು, ಆದರೆ ಅದನ್ನು ಮಾಡಲಿಲ್ಲ. ತಂಗಡಗಿಯವರು ಕೆಂಚಮ್ಮರವರ ಮನೆಗೆ ಹೋದಾಗ ಆಕೆ ಏನು

ಸ್ಟೇಟ್‌ಮೆಂಟ್ ಕೊಟ್ಟರೆಂಬ ವಿವರ ಪತ್ರಿಕೆಯಲ್ಲಿ ಬಂದಿದೆ. ಯಲ್ಲಾಲಿಂಗನ ಮನೆಗೆ ಸಚಿವರು ಹೋದಾಗ ಪತ್ರಿಕೆಯಲ್ಲಿ "ಮಾಧ್ಯಮದ ಕಣ್ಣುತಪ್ಪಿಸಿ ಹೋದ ಸಚಿವರು" ಎಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ. "ನಮಗೆ ರೊಕ್ಕಾ ಬೇಡ ನ್ಯಾಯ ಕೊಡಿಸಿ" ಯೆಂದು ಯಲ್ಲಾಲಿಂಗನ ತಾಯಿ ಒಂದೇ ಮಾತಿನಲ್ಲಿ ಹೇಳುತ್ತಾಳೆ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿಯೂ ಕೂಡ ಬಂದಿದೆ, ಮಾಧ್ಯಮದ ಕಣ್ತಪ್ಪಿಸಿ ಹೋದರೂ ಕೂಡ ಮಾಧ್ಯಮದಲ್ಲಿ ವರದಿಯಾಯಿತು. ತಾಯಿಯ ಮನಸ್ಸು ಹೇಗಿರುತ್ತದೆಂಬ 2–3 sentence ಅನ್ನು ತಮ್ಮ ಗಮನಕ್ಕೂ ಕೂಡ ತರುತ್ತೇನೆ. ತಂಗಡಗಿಯವರು ಅವರ ಮನೆಗೆ ಹೋದಾಗ ನಿಮ್ಮ "ರೊಕ್ಕ ಯಾರಿಗೆ ಬೇಕ್ರಿ, ನನ್ನ ಮಗನಾದ ಯಲ್ಲಾಲಿಂಗ ಜೀವಂತವಾಗಿದ್ದಿದ್ದರೆ ಒಂದು ತಿಂಗಳಲ್ಲಿ 50,000 ರೂ.ಗಳನ್ನು ದುಡಿಯುತ್ತಿದ್ದ, ಮಗ ಸತ್ತು ನಾಲ್ಕು ತಿಂಗಳಾದ ನಂತರ ಈಗ ಬಂದು ರೊಕ್ಕ ಕೊಟ್ಟರೆ ನನ್ನ ಮಗ ವಾಪಸ್ಸು ಬರುತ್ತಾನೆಯೇ" ಎಂದು ತಂಗಡಗಿಯವರನ್ನು ಆ ತಾಯಿ ಕೇಳುತ್ತಾಳೆ. ಕೊಲೆಯಾದ ಮೂರೇ ದಿವಸಗಳಲ್ಲಿ ಫೋನ್ ಮಾಡಿ ನನ್ನ ಮಗನ ಸಾವಿಗೆ ನ್ಯಾಯ ಕೊಡಿಸಿಯೆಂದು ಕೇಳಿದರೆ ನನಗೇನು ಸಂಬಂಧವಿಲ್ಲವೆಂದು ಫೋನ್ ಇಟ್ರಿ, ಈಗ ನಮಗೆ ಸಮಾಧಾನ ಹೇಳುವುದಕ್ಕೆ ಬಂದಿದ್ದೀರಾ? ನನ್ನ ಮಗನನ್ನು ಕೊಲೆ ಮಾಡಿದವರನ್ನು ರಕ್ಷಣೆ ಮಾಡಾಕ್ ಹತ್ತೀರಿ ಎಂದು ಹೇಳಿದ್ದಾರೆ. ಇದು ಕೆಂಚಮ್ಮನ ಸ್ಟೇಟ್‌ಮೆಂಟ್ ಆಗಿದೆ, ಇದು ಜಗದೀಶ ಶೆಟ್ಟರ್ ರವರ ಅಥವಾ ಬೇರೆ ಸಂಘಟನೆಯ ಸ್ಟೇಟ್‌ಮೆಂಟ್ ಅಲ್ಲ. ತಾಯಿ ಮನಸ್ಸಿನಲ್ಲಿ ಈ ರೀತಿ ಭಾವನೆ ಬಂದಿರುವಂತಹದ್ದು, ಇನ್ನು ಮುಂದೆ ಯಾರೂ ಕೂಡ ನಮ್ಮ ಮನೆಗೆ ಬರಬೇಡಿ ಎಂದು ಒಮ್ಮೆಲೆ ಹೇಳುತ್ತಾಳೆ. ಸಮಾಧಾನಪಡಿಸುವ ಸಮಯದಲ್ಲಿ ಸಮಾಧಾನ ಹೇಳಲಿಲ್ಲ, ಆಗ ಏನೂ ಮಾಡಲಿಲ್ಲ, ಏನೂ ಮಾಡದೇ ಇವತ್ತು ಭೇಟಿ ಕೊಟ್ಟಿ ಮಾಡುವುದೇನಿಲ್ಲ. ಮುಂದುವರೆಯುತ್ತಾ, ಹನುಮೇಶ್ ನಾಯಕ್. . . . ನನ್ನ ಮಗನನ್ನು ಕೊಂದವರು ಏಕೆ ಬಂದಿರಿ. ವಿಜಯಕರ್ನಾಟಕದಲ್ಲಿ "ಕೊಲೆಯಾದ ಯಲ್ಲಾಲಿಂಗನ ಮನೆಗೆ ಆರೋಪಿ ತಂದೆ ಭೇಟಿ, ಬೆವರಳಿಸಿದ ತಾಯಿ" ನನ್ನ ಮಗನನ್ನು ಕೊಂದವರು ಏಕೆ ಬಂದಿರಿ. ಆರೋಪಿಯ ತಂದೆಯೇ ಮನೆಗೆ

ಬಂದಿರುವುದರಿಂದ ನಮಗೆ ಭಯವಾಗಿತ್ತು. ಅಂತಹವರು ನಮ್ಮ ಮನೆಗೆ ಬರಬಾರದು, ಬರುವ ಅವಶ್ಯಕತೆಯಿಲ್ಲ ಮಹಾಂತೇಶ್ ನಾಯಕ್ ಹನುಮೇಶ್ ನಾಯಕನ ಮಗ. ಅಂದರೆ ಕೊಲೆ ಮಾಡಿದವ ಆರೋಪಿ ತಂದೆ ನಮ್ಮ ಮನೆಗೆ ಬಂದಿರುವುದರಿಂದ ನಮಗೆ ಭಯವಾಗಿತ್ತು. ಅಂತಹವರು ನಮ್ಮ ಮನೆಗೆ ಬರಬಾರದು, ಬರುವ ಅವಶ್ಯಕತೆಯಿಲ್ಲ ಬಂದರೆ ಅವರನ್ನು ಬಂಧಿಸಬೇಕೆಂದು ಪೊಲೀಸರಿಗೆ ದೂರು ನೀಡಬೇಕೆಂದು ಕೊಲೆಯಾದ ವಿದ್ಯಾರ್ಥಿಯ ತಾಯಿ ತಿಳಿಸಿದರು. ಆದರೆ ಈ ಕುರಿತು ಪಿ.ಎಸ್.ಐ. ಉದಯ್ ರವಿ ಅವರನ್ನು ಪ್ರಶ್ನಿಸಿದಾಗ ಯಾವುದೇ ದೂರು ಬಂದಿಲ್ಲವೆಂದು ತಿಳಿಸಿದರು. ಈ ರೀತಿ ಆಕೆ ಸ್ಟೇಟ್‌ಮೆಂಟ್ ಕೊಟ್ಟಿದ್ದರು.

ಮಾನ್ಯ ಅಧ್ಯಕ್ಷರೆ, ಇನ್ನೊಂದು ಕಡೆ "ಪೊಲೀಸರ ಸಾಥ್ ಆರೋಪಿಯ ತಂದೆ ಹಾಗೂ ಕಾಂಗ್ರೆಸ್ ಮುಖಂಡ ಹನುಮೇಶ್ ನಾಯಕ್‌ನೊಂದ ಕುಟುಂಬದ ಮನೆಗೆ ನೇರವಾಗಿ ಭೇಟಿ ನೀಡಿದಾಗ ಸ್ಥಳದಲ್ಲಿ ಪೊಲೀಸರು ಇದ್ದರು. ಪ್ರಕರಣ ತನಿಖೆಯಲ್ಲಿರುವಾಗ ಇಂತಹ ಭೇಟಿಯಿಂದ ಕುಟುಂಬ ಅಧೈರ್ಯಕ್ಕೆ ಸಿಲುಕುವ ಸಾಧ್ಯತೆಯಿದ್ದರೂ, ಪೊಲೀಸರು ಅದರ ಹತ್ತಿರ ಗಮನ ಹರಿಸದೇ ಇರುವುದು ಅಚ್ಚರಿ ಕಾಣಬಹುದಾಗಿದೆ." ಪೊಲೀಸ್ ಇದ್ದರೂ ಸಹ ಆ ಆರೋಪಿ ಆರಾಮವಾಗಿ ಮನೆಗೂ ಬರುತ್ತಾನೆ, ಬೆದರಿಕೆ ಹಾಕುತ್ತಾನೆ ಮತ್ತು ಎಲ್ಲವೂ ಮಾಡುತ್ತಾನೆ. ಈ ರೀತಿ ಆರೋಪಿಗಳೇ ಬಂದು ತಾಯಿಯನ್ನು ಭೇಟಿಯಾದರೆ, ಅವರಿಗೆ ನ್ಯಾಯ ಎಲ್ಲಿ ಸಿಗುತ್ತದೆ? ನ್ಯಾಯ ಸಿಗುತ್ತದೆನ್ನುವ ಗ್ಯಾರಂಟಿಯೇನಿದೆ? Impartial ತನಿಖೆಯಾಗುವುದಕ್ಕೆ ಸಾಧ್ಯ ಎಲ್ಲಿದೆ? ಸಾಧ್ಯವೇ ಇಲ್ಲ. ಇನ್ನೊಂದು ಅಂಶವೇನೆಂದರೆ ಮಾನ್ಯ ಶಾಸಕರಾದ ಹಿಟ್ನಾಳ್ ಅವರು ಸದನದಲ್ಲಿಯೇ ಇದ್ದಾರೆ. ಮಾನ್ಯ ಶಾಸಕರು ಜೈಲಿಗೆ ಹೋಗಿ ಭೇಟಿಯಾಗಿ ಬಂದಿದ್ದಾರೆ.

ಶ್ರೀ ಕೆ. ರಾಘವೇಂದ್ರ ಬಸವರಾಜ್ ಹಿಟ್ನಾಳ್ (ಕೊಪ್ಪಳ):– ಮಾನ್ಯ ಅಧ್ಯಕ್ಷರೆ, ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುವಂತಹದ್ದು ಆಗಬಾರದು.

ಶ್ರೀ ಜಗದೀಶ್ ಶೆಟ್ಟರ್:- ಒಂದು ನಿಮಿಷ ನಾನು ಮಾತನಾಡಿದ ಮೇಲೆ ನೀವು ಹೇಳಿ.

ಉಪಾಧ್ಯಕ್ಷರು:- ಅವರು ಮಾತನಾಡಿದ ನಂತರ ಮಾತನಾಡಿ.

ಶ್ರೀ ಕೆ. ರಾಘವೇಂದ್ರ ಬಸವರಾಜ್ ಹಿಟ್ನಾಳ್:- ಮಾನ್ಯ ಅಧ್ಯಕ್ಷರೆ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಏಕೆಂದರೆ ಈ ಕೇಸಿಗೂ ನಮಗೂ ಯಾವುದೇ ರೀತಿಯ ಸಂಬಂಧವಿಲ್ಲವೆಂಧು ಮಾಧ್ಯಮಗಳಲ್ಲಿ ಈಗಾಗಲೇ ಸ್ಪಷ್ಟನೆ ಕೊಟ್ಟಿದ್ದಾರೆ. ದಯಮಾಡಿ ಇದರಲ್ಲಿ ರಾಜಕಾರಣ ಮಾಡುವುದನ್ನು ನಿಲ್ಲಿಸಬೇಕು, ದಯಮಾಡಿ ನಿಲ್ಲಿಸಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇದರಲ್ಲಿ ರಾಜಕಾರಣ ಇಲ್ರೀ. ಗೂಂಡಾಗಿರಿ, ಗೂಂಡಾ ಮಂದಿಯನ್ನು ನಿಮ್ಮ ತಂಗಡಗಿಯವರು ರಕ್ಷಣೆ ಮಾಡಿದ್ದಾರೆ. ಅವರ ಬಗ್ಗೆ ಮಾತನಾಡುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು:- ಅವರು ಹೇಗೆ ಮಾತನಾಡಬೇಕು. ಮೊದಲು ಅವರು ಮಾತನಾಡಲಿ. ನಂತರ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್‌ವೊಂದು ಬಂದಿದೆ. ಕೊಪ್ಪಳದ ಶಾಸಕರಾದ ರಾಘವೇಂದ್ರ ಹಿಟ್ನಾಳ್ ಅವರು ಹೇಳಿರುವುದೇನೆಂದರೆ. . .. "ನಾನು ಜೈಲಿಗೆ ಭೇಟಿ ನೀಡಿದ್ದು ನಿಜ. ಕಾರಾಗೃಹದ ವ್ಯವಸ್ಥೆ ಬಗ್ಗೆ ಪರಿಶೀಲಿಸಲು ಭೇಟಿ ನೀಡಿದ್ದೆ. ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಚರ್ಚಿಸಲು ಮಾನ್ಯ ಸಚಿವರಾದ ಸತೀಶ್ ಜಾರಕಿಹೊಳಿಯವರ ನಿವಾಸಕ್ಕೂ ಹೋಗಿದ್ದೆ. ಅಲ್ಲಿ ಹನುಮೇಶ್ ನಾಯಕ್ ಸಹ ಬಂದಿದ್ದರು. ನಮ್ಮ ಜಿಲ್ಲೆಯ ಹಾಗೂ ನಮ್ಮ ಪಕ್ಷದ ಮುಖಂಡರಾದ ಅವರ ಹತ್ತಿರ ಕುಶಲೋಪರಿ ವಿಚಾರಿಸಿದೆ. ಈ ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಿಕೆಯಿದೆ." ಹಾಗಾದರೆ

ಇವರು ಜೈಲಿಗೆ ಹೋಗಿದ್ದರು, ಭೇಟಿಯಾಗಿದ್ದಾರೆ ಮತ್ತು ಇನ್ನೊಂದು ಅಂಶವನ್ನು ಗಮನಿಸುವುದಾದರೆ ಸತೀಶ್ ಜಾರಕಿಹೊಳಿ ಅವರ ನಿವಾಸದಲ್ಲಿ ಹನುಮೇಶ್ ನಾಯಕ್ ಇರುವುದನ್ನು ಸಹ ಹೇಳುತ್ತಾರೆ. ಅಂದರೆ ಹನುಮೇಶ್ ನಾಯಕ್ ಅಂತಹ ಒಬ್ಬ ಗೂಂಡಾ ವ್ಯಕ್ತಿ ಸಚಿವರ ಮನೆಗೂ ಹೋಗುತ್ತಾನೆ? ಇದೆಲ್ಲವೂ ಘಟನೆಯಾದ ನಂತರ ನಡೆದಿರುವಂತಹದ್ದು. ಬೇರೆ ಯಾವುದೇ ಮೊದಲಿನ ವಿಚಾರಗಳಲ್ಲ. ಹನುಮೇಶ್ ನಾಯಕ್ ರೌಡಿಶೀಟರ್ ಕೇವಲ ಇದು ಒಂದೇ ಪ್ರಕರಣವಲ್ಲ. ಕಳೆದ 10–15 ವರ್ಷಗಳಿಂದ 15–20 ಕ್ರಿಮಿನಲ್ ಕೇಸ್‌ಗಳಿವೆ. ಅವರಿವರ ಮೇಲೆ ಅಟ್ಯಾಕ್ ಮಾಡಿರುವಂತಹ ಕೇಸ್‌ಗಳೆಲ್ಲವೂ ಕೋರ್ಟಿನಲ್ಲಿ ಚಾಲ್ತಿಯಲ್ಲಿವೆ. ಹೀಗೆ ಅವನ ಮೇಲೆ 15–20 ಕ್ರಿಮಿನಲ್ ಕೇಸ್‌ಗಳಿರುವ ರೌಡಿ ಶೀಟರ್. ಮಾನ್ಯ ಸಚಿವರಾದ ತಂಗಡಗಿ ಅವರ ಹೆಸರನ್ನೇ ಹೇಳಿಕೊಂಡು ಓಡಾಡುವ ವ್ಯಕ್ತಿ. ಈ ರೀತಿಯಾದಂತಹ ವ್ಯಕ್ತಿಯನ್ನು ಎಲ್ಲಿಯೂ ಜೂನ್ ತಿಂಗಳವರೆಗೆ ಅರೆಸ್ಟ್ ಮಾಡುವುದಿಲ್ಲ. ಇದು ನಿಜವಾದಂತಹ ಸ್ಥಿತಿ.

ಇನ್ನೊಂದು ಅಂಶವೆಂದರೆ, 'ಸತ್ಯ ನುಡಿದುದಕ್ಕಾಗಿ ಕೊಲ್ಲಿಸಿ ಬಿಟ್ಟರು' ಎಂದು ಅವರ ತಾಯಿ ಹೇಳುತ್ತಾರೆ. ಇಲ್ಲಿ ಯಾವ ರೀತಿಯಾಗಿದೆ ಎಂದರೆ, ಯಲ್ಲಾಲಿಂಗನ ದೊಡ್ಡ ಸಹೋದರ, ಇನ್ನೊಬ್ಬ ತಮ್ಮ ಮತ್ತು ಮಗಳು ಸೇರಿದಂತೆ ಅವರಿಗೆ ಒಟ್ಟು ನಾಲ್ಕು ಜನ ಮಕ್ಕಳಿದ್ದರು. ವೀರಭದ್ರಪ್ಪ ಹೇಳುವುದೇನೆಂದರೆ ಹೊಲದಲ್ಲಿ ಕೆಲಸ ಮಾಡುವುದಕ್ಕೆ ಭಯವಾಗುತ್ತದೆ, ಯಾವ ಸಮಯದಲ್ಲಿ ಏನು ಮಾಡುತ್ತಾರೋ ಎನ್ನುವುದು ತಿಳಿಯುತ್ತಿಲ್ಲ. ಕುಟುಂಬದ ಸದಸ್ಯರಿಗೆ ಏನೇ ಆದರೂ ಅವರೇ ಹೊಣೆಯಾಗುತ್ತಾರೆಂದು ಹೇಳುತ್ತಾರೆ. ಹುಲಿಹೈದರ್ ಗ್ರಾಮದಲ್ಲಿ ಕೆಂಚಮ್ಮನ ಮನೆಯ ಅಕ್ಕಪಕ್ಕದಲ್ಲಿರುವವರು, ಆ ಹಳ್ಳಿಯಲ್ಲಿದ್ದವರು ಹೊರಗೆ ಬಂದು ಇವರ ಮನೆಗೆ ಹೋಗಿ ಮಾತನಾಡುವುದಕ್ಕೂ ಧೈರ್ಯವಿಲ್ಲ, ಏಕೆಂದರೆ, ಇವರ ಮನೆಗೆ ಹೋಗಿ ಸಮಾಧಾನ ಮಾಡಿ ಮಾತನಾಡಿಸಿದರೆ, ನಮ್ಮ ಮೇಲೆ attack ಎಲ್ಲಿ ಮಾಡುತ್ತಾರೋ ಎನ್ನುವ ಹೆದರಿಕೆ ಇಡೀ ಗ್ರಾಮದಲ್ಲಿದೆ. ಒಟ್ಟಿನಲ್ಲಿ ಭಯದ ವಾತಾವರಣ, ಗೂಂಡಾಗಿರಿ ವಾತಾವರಣ, ಹೆದರಿಕೆ ವಾತಾವರಣ ಇಡೀ

ಹುಲಿಹೈದರ್ ಗ್ರಾಮಸ್ಥರಲ್ಲಿದೆ. ಆ ವಾತಾವರಣವನ್ನು ತಿಳಿಗೊಳಿಸುವುದು ನಮ್ಮ ರಾಜ್ಯ ಸರ್ಕಾರದ ಪೊಲೀಸರಿಂದ ಆಗಿಲ್ಲ. ಹಾಗಾಗಿ ಯಾರೂ ಸಹ ಹೋಗಿ ಮಾತನಾಡುವುದಕ್ಕೆ ಸಾಧ್ಯವಾಗುತ್ತಿಲ್ಲ.

ಇನ್ನೊಂದು ಪತ್ರಿಕೆಯಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷರು ಇದರ ಬಗ್ಗೆ ಸಚಿವರಾದ ತಂಗಡಗಿ ಅವರಿಂದ ವಿವರಣೆಯನ್ನು ಕೇಳಿದ್ದಾರೆಂಬ ಹೇಳಿಕೆ ಬಂತು. ಡಾ|| ಜಿ. ಪರಮೇಶ್ವರ್ ಅವರ ಹೇಳಿಕೆಯಲ್ಲಿ ಪ್ರಕರಣ ಸಂಬಂಧ ವರದಿ ನೀಡುವಂತೆ ಕೊಪ್ಪಳ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಹಾಗೂ ತಂಗಡಗಿಯವರಿಗೆ ಸೂಚಿಸಿದ್ದೇನೆ. ಹೈಕಮಾಂಡ್ ವಿವರಣೆ ಕೇಳಿದರೆ ನೀಡಬೇಕಾಗುತ್ತದೆಯೆಂಬ ಕಾರಣದಿಂದ ಕ್ರಮ ಕೈಗೊಳ್ಳಲಾಗಿದೆ. ಎಲ್ಲಿಯವರೆಗೂ ಸಾರ್ವಜನಿಕ ಮಹತ್ವ ಪಡೆದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತದೆಂಬುದನ್ನು ಈ ಎಲ್ಲಾ ಅಂಶಗಳ ಮೇಲೆ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ.

ಇಂದು ಕೆಂಚಮ್ಮ ಅವರಿಂದ ಒಂದು ಹೇಳಿಕೆ ಬಂದಿರುತ್ತದೆ. ಅದೇನೆಂದರೆ, ಮಗನ ಹತ್ಯೆ ನಡೆಸಿರುವವರನ್ನು ಬಂಧಿಸಲಾಗುತ್ತದೆಂದು ಮಾನ್ಯ ಸಚಿವರು ಹೇಳುತ್ತಾರೆ. ಆದರೆ ಸಿ.ಐ.ಡಿ. ತನಿಖೆಗೆ ಒಪ್ಪಿಸುವವರೆಗೆ ಹನುಮೇಶ್ ನಾಯಕ್‌ನನ್ನು ಬಂಧಿಸಿರಲಿಲ್ಲ. ಮಗನನ್ನು ಯಾವ ರೀತಿ ಕೊಲೆ ಮಾಡಲಾಗಿದೆ, ಅದೇ ರೀತಿ ಆರೋಪಿಗಳಿಗೆ ಗಲ್ಲು ಶಿಕ್ಷೆ ನೀಡಿ.

ಪತ್ರಿಕೆಯವರು ಆ ಗ್ರಾಮಕ್ಕೆ ಹೋಗಿ ಗ್ರಾಮಸ್ಥರಲ್ಲಿ ಮಾತನಾಡಿದಾಗ ಕೆಲವು ಗ್ರಾಮಸ್ಥರು ಅಸಹಾಯಕತೆಯನ್ನು ತೋರಿಸುತ್ತಾರೆ. 'ಯಲ್ಲಾಲಿಂಗನ ಕುಟುಂಬದವರು ನಮಗೆ ಹೊರತಲ್ಲ, ಅವರಿಗೆ ಕೆಟ್ಟದ್ದು ಮಾಡಬೇಕೆಂಬುದು ನಮ್ಮ ಮನಸ್ಸಲ್ಲ. ಆದರೆ ಅವರಿಗೆ ನಾವೇನಾದರೂ ಸಹಾಯ ಮಾಡಿದರೆ ಊರಿನಲ್ಲಿ ಜೀವಂತವಾಗಿ ಉಳಿಯುತ್ತೇವೆ ಎನ್ನುವ ನಂಬಿಕೆ ಇಲ್ಲದಂತಾಗಿದೆ' ಎಂದು ಹೇಳುತ್ತಾರೆ. ಈ ರೀತಿಯ ಭಯದ ವಾತವರಣ ಆ ಗ್ರಾಮದಲ್ಲಿದೆ.

'ಟಿ.ವಿ.ಗೆ ಬೈಠಕ್ ನೀಡಿದ್ದಕ್ಕೆ ಕೊಲೆ'. ಸಚಿವ ತಂಗಡಗಿ ಅವರ ಬೆಂಬಲಿಗ ಎಂದು ಪತ್ರಿಕೆಯಲ್ಲಿ open statement ಬಂದಿರುತ್ತದೆ. ಹುಲಿಹೈದರ್

ಗ್ರಾಮದಲ್ಲಿ ಹನುಮೇಶ್ ನಾಯಕ್ ಬೆಂಬಲಿಗರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಪಾರ ಅಕ್ರಮ ಬಯಲಿಗೆ ಬಂದಿತ್ತು ಎನ್ನಲಾಗಿದೆ. ಕನಕಗಿರಿ ವಿಧಾನಸಭಾ ಕ್ಷೇತ್ರದ ಸುತ್ತಲಿನ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಕಾಂಗ್ರೆಸ್ ಮುಖಂಡ ಹನುಮೇಶ್ ನಾಯಕ್ ಮಾತೇ ನಡೆಯಬೇಕು ಎನ್ನುವ ಹಠವಿತ್ತು. ಜೊತೆಗೆ ಅವರು ಸಚಿವ ಶಿವರಾಜ್ ತಂಗಡಗಿ ಅವರ ಕಟ್ಟಾ ಬೆಂಗಲಿಗ. ಮಹಾಂತೇಶನ ತಾಯಿ ಸುಜಾತ ಅವರು 2005–10 ರವರೆಗಿನ ಒಂದು ಅವಧಿಯಲ್ಲಿ ಕೊಪ್ಪಳ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷೆಯಾಗಿದ್ದರು. ಈ ರೀತಿಯಾದಂತಹ ಒಂದು ಹಿನ್ನೆಲೆಯಿದೆ. ಇದನ್ನು ಉಪಯೋಗ ಮಾಡಿಕೊಂಡು ಕೊಪ್ಪಳದಲ್ಲಿ ಗೂಂಡಾಗಿರಿ ನಡೆಯುತ್ತಿದೆ. ಇದಕ್ಕಿಂತಲೂ ಮುಖ್ಯವಾಗಿ ಮೊನ್ನೆ ಮಾಜಿ ಸಚಿವೆಯಾಗಿದ್ದ ಬಿ.ಟಿ.ಲಲಿತಾನಾಯಕ್ ಅವರು ಮತ್ತು ಇನ್ನಿತರ ಎನ್.ಜಿ.ಓ. ಗಳು, ಪ್ರಗತಿಪರ ಸಂಘಟನೆಗಳು ಹೋರಾಟವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಅಲ್ಲಿ ಅವರುಗಳು ಒಂದು ರೀತಿಯ ಹೋರಾಟ ಮಾಡಿದ್ದಾರೆ. ಇದಲ್ಲದೆ, ಕನಕಗಿರಿ ಕ್ಷೇತ್ರದಲ್ಲಿ ದಲಿತರ ಮೇಲೆ 10 ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಅದೂ ಸಹಿತ ಮುಚ್ಚಿ ಹೋಗುವಂತಹ ಪರಿಸ್ಥಿತಿಯಾಗಿದೆ. ಕೇವಲ ಕೊಲೆ ಪ್ರಕರಣ ಬಗ್ಗೆ ಮಾತ್ರ ಹೇಳುತ್ತಿಲ್ಲ. ಇನ್ನೂ ಹಲವಾರು ಕೊಲೆಗಳಾಗಿವೆ. ಬಹಳಷ್ಟು ಕೊಲೆಗಳನ್ನು ಮುಚ್ಚಿಹಾಕಿದ್ದಾರೆ. ಹತ್ತಾರು ದಲಿತರ ಕುಟುಂಬದ ಮೇಲೆ ಕನಕಗಿರಿ ವಿಧಾನಸಭಾ ಕ್ಷೇತ್ರದಲ್ಲಿ ದೌರ್ಜನ್ಯವೆಸಗಿ ಆ ಪ್ರಕರಣಗಳನ್ನು ಮುಚ್ಚಿ ಹಾಕುವಂತಹ ಕೆಲಸಗಳು ನಡೆಯುತ್ತಿವೆ. ಹನುಮೇಶ್ ನಾಯಕನ ಮೇಲೆ 15–20 ಕ್ರಿಮಿನಲ್ ಕೇಸ್‌ಗಳಿರುವುದನ್ನು ನಾವು ನೋಡುತ್ತಿದ್ದೇವೆ. ಈ ರೀತಿಯಾಗಿರುವುದು ಒಂದು ಕಡೆ. ಇದರಲ್ಲಿ ಒಟ್ಟು 8–9 ಜನ ಆರೋಪಿಗಳಿದ್ದಾರೆ. ಪ್ರಮುಖವಾಗಿ ಬಾಳನಗೌಡ ಗೌಡರ್, ಪರಶುರಾಮ ಹುಗ್ಗಿ, ಹನುಮೇಶ್ ನಾಯಕ್, ಮಹಾಂತೇಶ್ ನಾಯಕ್, ದುರ್ಗಪ್ಪ ಚೆನ್ನದಾಸರ್, ಮನೋಜ್ ಪಾಟೀಲ್, ಮಂಜುನಾಥ್ ಉರುಫ್ ಕಾಡಾ ಮಂಜಾನಾಯ್ಕ್, ನಂದಕುಮಾರ್ ನಾಯಕ್ ಹಾಗೂ ಯಮಲೂರಪ್ಪ ಚೆನ್ನದಾಸರ್ ಇಷ್ಟೂ ಜನ ಆರೋಪಿಗಳಿದ್ದಾರೆ. ಇದರಲ್ಲಿ ಇದುವರೆವಿಗೂ ಅಶೋಕ್ ನಾಯಕ್ ಮತ್ತು ರಮೇಶ್ ನಾಯಕ್

ಅವರನ್ನು ಇಲ್ಲಿಯವರೆಗೆ ಅರೆಸ್ಟ್ ಮಾಡಿರುವುದಿಲ್ಲ. ಆದರೆ ಹನುಮೇಶ್ ನಾಯಕ್ ನನ್ನು ಸಿ.ಐ.ಡಿ. ಕೊಟ್ಟ ಮೇಲೆ ಅರೆಸ್ಟ್ ಮಾಡುತ್ತಾರೆ. ನಂದಕುಮಾರ್ ನಾಯಕ್ ಮತ್ತು ಯಮನೂರಪ್ಪ ಚೆನ್ನದಾಸರ್ ಇಬ್ಬರೂ ಆರೋಪಿಗಳು ಹೋರಾಟವೆಲ್ಲಾ ನಡೆದ ಮೇಲೆ ಇತ್ತೀಚೆಗೆ ಅಂದರೆ 2-3 ದಿನಗಳ ಹಿಂದೆ District Session Court ಹೋಗಿ ಅವರೇ ಶರಣಾಗುತ್ತಾರೆ. ಇಷ್ಟೆಲ್ಲಾ ಘಟನೆ ನಡೆದಂತಹ ಸಂದರ್ಭದಲ್ಲಿ ಅವರೇ ಹೋಗಿ ಶರಣಾಗುತ್ತಾರೆ. ಮೊದಲು ಏಕೆ ಶರಣಾಗಿಲ್ಲ? ಮೊದಲೇಕೆ ಅವರನ್ನು ಅರೆಸ್ಟ್ ಮಾಡಿಲ್ಲ? ಇವೆಲ್ಲಾ ಪ್ರಶ್ನೆಗಳು ಬರುವುದಕ್ಕೆ ಸಾಧ್ಯವಿದೆ.

ಮಾನ್ಯ ಉಪಾಧ್ಯಕ್ಷರೆ, ನನ್ನದು ಒಂದೇ ಒಂದು contention, ಇವತ್ತೇನು ಈ ಪ್ರಕರಣಗಳಿವೆ, ಅದರಲ್ಲಿ ಹನುಮೇಶನಾಯಕ ಮತ್ತು ಆತನ ಮಗ ಮತ್ತು ಆ ಟೀಮ್ ಇಡೀ ಕೊಪ್ಪಳ ಜಿಲ್ಲೆಯ ಕನಕಗಿರಿ ಕ್ಷೇತ್ರದಲ್ಲಿ ಭಯದ ವಾತಾವರಣವನ್ನು ಉಂಟು ಮಾಡಿದ್ದಾರೆ. ಅವರೆಲ್ಲರಿಗೂ ಒಂದೇ ಧೈರ್ಯ ಏನೆಂದರೆ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಯಾದ ಶಿವರಾಜ ತಂಗಡಗಿಯವರು ನಮ್ಮ ರಕ್ಷಣೆಗೆ ಇದ್ದಾರೆ, ಇದೇ ಒಂದು ಅಭಯಹಸ್ತದಿಂದ ಅವರೆಲ್ಲ ಇಂಥ ಕೃತ್ಯಗಳನ್ನು ಮಾಡುತ್ತಿದ್ದಾರೆ ಎನ್ನುವುದೇ ನನ್ನ ನೇರವಾದ ಆರೋಪವಾಗಿದೆ. ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ, ಹಿಂದೆ ಐಎಎಸ್ ಅಧಿಕಾರಿ ತುಳಸಿ ಮದ್ದಿನೇನಿ ಎನ್ನುವ ಡಿ.ಸಿ. ಇದ್ದರು, ಅವತ್ತು ಯಾವ property enquiry ಮಾಡುವುದಕ್ಕೆ ಹೋದರು, ಏತಕ್ಕಾಗಿ, ಅವರು ಹೇಗೆ transfer ಆದರು ಎನ್ನುವುದು ಮುಖ್ಯಮಂತ್ರಿಗಳವರಿಗೆ ಗೊತ್ತಿದೆ. ಅವತ್ತು ಸಹ ಜಿಲ್ಲಾ ಉಸ್ತುವಾರಿ ಮಂತ್ರಿ ತಂಗಡಗಿಯವರೇ ಇದ್ದರು, ಈ ಬಗ್ಗೆ ಪತ್ರಿಕೆಯಲ್ಲಿ serial ಆಗಿ articles ಬಂದಿತು. ಏಕೆ ಅವರ transfer ಆಯಿತು, ಏನು ತಾನ, ಯಾವ ಆಸ್ತಿ encroachment ಆಗಿತ್ತು, ಅದರ ಬಗ್ಗೆ ಅವರು ನೋಟೀಸ್ ಕೊಟ್ಟಿದ್ದು, ಎಲ್ಲಾ ಬಂದಿದೆ. ನಿಗೂಢವಾದ ಹತ್ಯೆಯಾಗಿ ಸಾವಿಗೀಡಾದಂಥ ಡಿ.ಕೆ.ರವಿಯವರು ಹಿಂದೆ ಅಲ್ಲಿ ಎ.ಸಿ.ಯಾಗಿ ಕೆಲಸ ಮಾಡಿದ್ದಾರೆ. ಅವರೊಂದಿಗೆ ಅಂದು ಯಾವ ರೀತಿ ಇವರು ನಡೆದುಕೊಂಡರು ಎನ್ನುವುದು ಸಹ ಹೊರಗಡೆ ಬಂದಿದೆ. ಇದು ಎಲ್ಲಿಯವರೆಗೆ ಎಂದರೆ

ಯಾರು ಈ ಬಗ್ಗೆ ಪ್ರತಿಭಟನೆ ಮಾಡುವುದಕ್ಕೆ ಹೋಗುತ್ತಾರೆಯೋ, ಹೋರಾಟ ಮಾಡುತ್ತಾರೆಯೋ ಅವರ ಮೇಲೆ 108 ಕೇಸ್‌ಗಳನ್ನು ಹಾಕುವುದಕ್ಕೆ ಚಾಲೂ ಮಾಡುತ್ತಾರೆ. ವಿರೂಪಾಕ್ಷಪ್ಪ ಎನ್ನುವವರು ಆ ಭಾಗದ ನಮ್ಮ Ex-MP ಭಾರತೀಯ ಜನತಾ ಪಾರ್ಟಿಯಲ್ಲಿದ್ದಾರೆ. ಬಹಳ ಹಿರಿಯರು ಅವರು. ಬಸವರಾಜ ದಡಿಸೂರ್ ಎನ್ನುವ ವ್ಯಕ್ತಿ ಇವರ ವಿರುದ್ಧ ಎಲೆಕ್ಷನ್ ನಿಂತು ಬಹಳ ಕಡಿಮೆ ಅಂತರದಲ್ಲಿ ಸಾವಿರಾರು ಮತಗಳಿಂದ ಸೋತಿದ್ದಾನೆ. ಆತ ಮತ್ತು ಇನ್ನೂ ಹಲವಾರು ಕಾರ್ಯಕರ್ತರು, ಅವರು ವಿರುದ್ಧ ಹೋರಾಟ ಮಾಡಿದಾಗ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ FIR ಹಾಕಿದ್ದಾರೆ. ಎಂದರೆ ಹೋರಾಟವನ್ನು ಪ್ರತಿಭಟನೆಯನ್ನೂ ಮಾಡಬಾರದು. ಹತ್ತಿಕ್ಕುವಂಥ ಕೆಲಸ, ದಮನಕಾರಿ ನೀತಿ ಇವೆಲ್ಲಾ ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಡೆಯುವುದಕ್ಕೆ ಸಾಧ್ಯವಿಲ್ಲ. ಆ ರೀತಿ ಇವತ್ತು ಕೊಪ್ಪಳ ಜಿಲ್ಲೆಯಲ್ಲಿ ನಡೆಯುತ್ತಿದೆ. ಶಿವರಾಜ ತಂಗಡಗಿಯವರು ಕೊಲೆ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಆದರೆ ಕೊಲೆ ಮಾಡಿದಂಥ ವ್ಯಕ್ತಿಗಳೇನಿದ್ದಾರೆ, ಇವರ ಅಭಯಹಸ್ತದಿಂದ, ಇವರ ರಕ್ಷಣೆಯಿಂದ ಅವರು ಈ investigation ನಿಂದ ತಪ್ಪಿಸಿಕೊಂಡರು. ತಪ್ಪಿತಸ್ಥರನ್ನು custodyಗೆ ತೆಗೆದುಕೊಳ್ಳಲಾರದೆ, ಬಹಳ ದಿವಸ open ಆಗಿ ಸಾರ್ವಜನಿಕವಾಗಿ ಎಲ್ಲರಿಗೂ ಬೆದರಿಕೆ ಹಾಕುವಂಥ ವಾತಾವರಣವನ್ನು ನಿರ್ಮಾಣ ಮಾಡಿದರು. ಅದಕ್ಕೆ ಇವರೇ ಜವಾಬ್ದಾರರು ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ. ಮುಖ್ಯಮಂತ್ರಿಗಳು ಪ್ರಕರಣವನ್ನು ಸಿಐಡಿಗೆ ವಹಿಸಿದ್ದೇವೆಂದು ಹೇಳಿದರು. ಆದರೆ ನಾನು ಹೇಳುತ್ತಿದ್ದೇನೆ, ಇವತ್ತು ಅಲ್ಲಿಯ ಜಿಲ್ಲಾ ಉಸ್ತುವಾರಿ ಮಂತ್ರಿಗಳ ಹೆಸರು ಬರುತ್ತಿದೆಯೆಂದರೆ, ಅವರು ಅಪರಾಧಿಗಳು, ಅವರು ಭಾಗಿಯಾಗಿಲ್ಲ ಯಾವುದನ್ನೂ ನಾನು ಹೇಳುವುದಿಲ್ಲ. ಅವರ ಹೆಸರು ಬರುತ್ತಿದೆ. ಈ ರೀತಿ ಒಬ್ಬ ಮಂತ್ರಿ ಹೆಸರು ಬರುತ್ತಿರುವ ಸಂದರ್ಭದಲ್ಲಿ impartial ತನಿಖೆ ಹೇಗೆ ಆಗುತ್ತದೆ? Impartial investigation ಹೇಗೆ ಆಗುವುದಕ್ಕೆ ಸಾಧ್ಯವಿದೆ? ಸಾಧ್ಯವೇ ಇಲ್ಲ. ಅದಕ್ಕಾಗಿ ನೀವು COD ಎಂದು ಹೇಳುತ್ತೀರಿ, ಆ COD ಯವರು ಬಂದು custodyಗೆ ತೆಗೆದುಕೊಂಡರು, ಆದರೆ ಮುಂದೆ ನಡೆಯುವಂಥ investigation, ಒಬ್ಬ

ಮಂತ್ರಿಯೇ ಅಲ್ಲಿ ಇರುವಾಗ, ಆತನ ಹೆಸರು ಸಾರ್ವಜನಿಕರಲ್ಲಿ ಚರ್ಚೆಯಾಗುವಂಥ ಸಂದರ್ಭದಲ್ಲಿ ಪತ್ರಿಕೆಯಲ್ಲಿ, ಮಾಧ್ಯಮದಲ್ಲಿ ಇವತ್ತು ಹನುಮೇಶ ನಾಯಕ ತಂಡಗಿಯವರ ಬಲಗೈ ಶಿಷ್ಯ ಎಂದು ಬರುವಂಥ ಸಂದರ್ಭದಲ್ಲಿ ನಿಜಾಂಶ ಹೊರಗೆ ಬರಬೇಕು. ನಿಜವಾದಂಥ ಆರೋಪಿಗಳಿಗೆ ಶಿಕ್ಷೆಯಾಗಬೇಕು. ಕೆಂಚಮ್ಮನ ಒಂದೇ ಒಂದು ಹೇಳಿಕೆ ಏನೆಂದರೆ "ಯಾರು ನನ್ನ ಮಗನನ್ನು ಕೊಂದಿದ್ದಾರೆ, ಕೊಲೆ ಮಾಡಿದ್ದಾರೆ, ಆ ಕೊಲೆ ಮಾಡಿದಂಥ ವ್ಯಕ್ತಿಗಳೆಲ್ಲಾ arrest ಆಗಬೇಕು, ಅವರಿಗೆ ಗಲ್ಲು ಶಿಕ್ಷೆ ಆಗಬೇಕು" ಎನ್ನುವುದೇ ಆ ಕೆಂಚಮ್ಮನ ಆಸೆ. ಆಗ, ಅವಳಿಗೆ ನ್ಯಾಯ ಸಿಗುವುದಕ್ಕೆ ಸಾಧ್ಯವಿದೆ. ಆದರೆ, ಇವತ್ತಿನ ವ್ಯವಸ್ಥೆಯಲ್ಲಿ ಒಬ್ಬ ಮಂತ್ರಿಗಳ ಹೆಸರು ಬರುತ್ತಿರುವ ಸಂದರ್ಭದಲ್ಲಿ ಇದನ್ನೇನಾದರೂ CODಯಿಂದ continue ಮಾಡಿದರೆ ಅಲ್ಲಿಯೂ ಪ್ರಭಾವ ಬೀರುವ chance ಇದೆ. ಎಲ್ಲಾ ರೀತಿಯಿಂದಲೂ ಬೆದರಿಕೆಯಿದೆ. ಅದಕ್ಕಾಗಿ ಇದನ್ನು avoid ಮಾಡಬೇಕೆಂದರೆ ಇವತ್ತು CBI ತನಿಖೆಯೇ ಆಗಬೇಕೆನ್ನುವ ಒತ್ತಾಯವನ್ನು ಭಾರತೀಯ ಜನತಾ ಪಾರ್ಟಿಯವರಾದ ನಾವು ಮಾಡುತ್ತಿದ್ದೇವೆ ಮತ್ತು ನಾನು ಎಲ್ಲಿಯವರೆಗೆ ಹೇಳುತ್ತಿದ್ದೇನೆಂದರೆ ಈ ಪ್ರಕರಣದಲ್ಲಿ ಶಿವರಾಜ ತಂಗಡಗಿಯವರ ಹೆಸರು ಪ್ರಮುಖವಾಗಿ ಕೇಳಿ ಬರುತ್ತಿರುವುದರಿಂದ ಮತ್ತು ಹನುಮೇಶ ನಾಯಕ ಅವರ right hand ಇದ್ದಿದ್ದರಿಂದ, ಶಿವರಾಜ ತಂಗಡಗಿಯವರನ್ನು ಮುಖ್ಯಮಂತ್ರಿಗಳು ನಿಮ್ಮ ಸಂಪುಟದಿಂದ ಕೈಬಿಡಿ. ಅವರಾದರೂ ರಾಜೀನಾಮೆ ಕೊಡಲಿ, ಇಲ್ಲವಾದರೆ ನೀವಾದರೂ ಸಂಪುಟದಿಂದ ಅವರನ್ನು ಕೈಬಿಡಿ ಎನ್ನುವಂಥ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ. ಎಲ್ಲಿಯವರೆಗೆ ಎಂದರೆ ಹನುಮೇಶ ನಾಯಕನಿಗೆ ಎಷ್ಟು ಧೈರ್ಯವಿದೆ, ಎಷ್ಟು ಬಹಿರಂಗವಾಗಿ ಹೇಳುತ್ತಾನೆಂದರೆ atleast ಹನುಮೇಶ ನಾಯಕನ ಮಾತನ್ನಾದರೂ ಕೇಳಲಿ ಸರ್ಕಾರದವರು, ಒಂದು statement ಬಂದಿದೆ ಇಲ್ಲಿ. ಏನೆಂದರೆ, ಕೆಂಚಮ್ಮನ ಮನೆಗೆ ಹನುಮೇಶ ನಾಯಕ ಹೋದಾಗ ಹೇಳುತ್ತಾನೆ, "ಇವರು ಯಾರು ಎನ್ನುವುದೇ ನನಗೆ ಗೊತ್ತಿಲ್ಲ. ಅವರಿಗೆ ನಾನು support ಮಾಡುತ್ತೇನೆ." ಅಂದರೆ ಕೆಂಚಮ್ಮ ಕೊಡುವ ಹೇಳಿಕೆಗೆ ನಾನು support ಮಾಡುತ್ತೇನೆಂದು

ಹೇಳುತ್ತಿದ್ದಾನೆ. "Correct ಆಗಿ CBI ತನಿಖೆಯಾಗಬೇಕು. ತನಿಖೆ ನಡೆಸಿದ ಪೊಲೀಸರನ್ನೇ ಮಂಪರು ಪರೀಕ್ಷೆಗೆ ಒಳಪಡಿಸಬೇಕು". ಮಂಪರು ಪರೀಕ್ಷೆಗೆ ಅವನನ್ನಲ್ಲ, ಒಳಪಡಿಸುವುದು, ತನಿಖೆ ನಡೆಸಿದ ಪೊಲೀಸರನ್ನೇ ಎಂದು ಹೇಳುತ್ತಾನೆ. ಅಲ್ಲದೆ CBI ತನಿಖೆಯಾಗಬೇಕೆಂದು ಆತನೇ ಹನುಮೇಶ ನಾಯಕನೇ ಒತ್ತಾಯ ಮಾಡುತ್ತಾನೆ. ಇಷ್ಟು ಬಹಿರಂಗವಾಗಿ ಹೇಳುವಂಥ ಗೂಂಡಾ ವ್ಯಕ್ತಿ. ಈ ರೀತಿಯಾದ ಪ್ರಕರಣಗಳು ಬಂದಾಗ ಇದನ್ನು ನಾವು ಬಹಳ ಹಗುರವಾಗಿ ತೆಗೆದುಕೊಂಡರೆ ನಾಳೆ ಇಂತಹ ಘಟನೆಗಳು ಬೇರೆ ಕಡೆ ನಡೆಯುವುದಕ್ಕೆ ಸಾಧ್ಯವಿದೆ ಮತ್ತು ಸರ್ಕಾರಕ್ಕೂ ಕೆಟ್ಟ ಹೆಸರು ಬರುವುದಕ್ಕೆ ಸಾಧ್ಯವಿದೆ, ಪಕ್ಷಕ್ಕೂ ಕೆಟ್ಟ ಹೆಸರು ಬರುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ಮುಖ್ಯಮಂತ್ರಿಗಳು ಬಹಳ ಗಂಭೀರವಾಗಿ ಈ ವಿಚಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಯಾರು ಆರೋಪಿಗಳಿದ್ದಾರೆ, ಅವರಿಗೆ ಸರಿಯಾದಂಥ ಶಿಕ್ಷೆ, ಕಾನೂನು ಶಿಕ್ಷೆ, ಕಾನೂನು ಕ್ರಮ ಆಗಬೇಕು ಮತ್ತು ತಂಗಡಗಿಯವರ ಹೆಸರೇನು ಈ ಪ್ರಕರಣದಲ್ಲಿ ಬರುತ್ತಿದೆ, ಅವರನ್ನು ತಕ್ಷಣವೇ ಸಂಪುಟದಿಂದ ಕೈಬಿಡಬೇಕು. ಅವರು ರಾಜೀನಾಮೆಯನ್ನು ಕೊಡಬೇಕು ಮತ್ತು ಇದು CBI ತನಿಖೆಯಾಗಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು positive ಆಗಿ response ಕೊಡಬೇಕು. ಏನು ಎಲ್ಲಾ ಪ್ರಕರಣಗಳಿಗೂ CBI ತನಿಖೆ ಕೇಳುತ್ತೀರೆಂದು ದಾರಿ ಸಾಗಿಸುವಂಥದ್ದಲ್ಲ, ಇದು ಬಹಳ ಗಂಭೀರವಾದ ಪ್ರಕರಣ ಮತ್ತು ಇದು repeat ಆಗಬಾರದು. ಸಚಿವರ ಪಾತ್ರ ಇದರಲ್ಲಿ ಬರುತ್ತಿರುವುದರಿಂದ ನಾನು ಇದನ್ನು ಒತ್ತಾಯ ಮಾಡುತ್ತಿದ್ದೇನೆ. ನಮ್ಮ ಇನ್ನು ಎರಡು ಮೂರು ಜನ ಸದಸ್ಯರು ಇದರ ಬಗ್ಗೆ ಮಾತನಾಡುತ್ತಾರೆ. ಆ ಭಾಗದಿಂದ ಬಂದಂಥ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ್‌ರವರು ಮತ್ತು ನಮ್ಮ ಗೋವಿಂದ ಕಾರಜೋಳರವರು ಮಾತನಾಡುತ್ತಾರೆ. ಅದಕ್ಕಾಗಿ ಈ ಒತ್ತಾಯವನ್ನು ಮಾಡುತ್ತೇನೆ.

ಮತ್ತೊಂದು ವಿಚಾರ, ನಿನ್ನೆ "Activist Murder calls find evidence against accused. Yellalinga was found dead after he filed RTI

application" Times of India ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿದೆ. ಇದರ ಪ್ರಕಾರವೇ ನಮ್ಮ CIDಯವರು ಒಂದು ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಪತ್ರಿಕಾ ಮಾಹಿತಿ ಪ್ರಕಾರವೇ ಮಧ್ಯಂತರ ವರದಿಯಲ್ಲಿಯೂ ಸಹಿತ ಹನುಮೇಶ ನಾಯಕ ಶಿವರಾಜ ತಂಗಡಗಿಯವರು right hand ಎನ್ನುವಂಥದ್ದು ಮತ್ತು ಆತನ involvement ಇವೆಲ್ಲದರ ಬಗ್ಗೆ ಆ ವರದಿಯಲ್ಲಿ ಬಂದಿದೆ.

ಮಾನ್ಯ ಮುಖ್ಯಮಂತ್ರಿಗಳು ಬೇರೆ ಬೇರೆ ಪ್ರಕರಣಗಳಲ್ಲಿ ಮಧ್ಯಂತರ ವರದಿಯನ್ನು ಸದನದಲ್ಲಿ ಮಂಡಿಸುವುದಕ್ಕೆ ಬಹಳ ಆತುರರಾಗಿದ್ದರು. ಈ ಬಗ್ಗೆ ಹಿಂದೆಲ್ಲಾ ನಾನು ನೋಡಿದ್ದೇನೆ. ಅದಕ್ಕಾಗಿ ದಯವಿಟ್ಟು ನಾನು ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುವುದೇನೆಂದರೆ, ಈ ಒಂದು CID ತನಿಖೆ ಮಧ್ಯಂತರ ವರದಿಯೇನಿದೆ, ಅದನ್ನು ನೀವು disclose ಮಾಡಿ, ಸದನಕ್ಕೆ ಮಂಡಿಸಿ. ಆಗ reality ಏನು ಎನ್ನುವುದು ಗೊತ್ತಾಗುತ್ತದೆ. ಇಲ್ಲದೇ ಇದ್ದರೆ ಮತ್ತೆ ಪ್ರಕರಣದ ದಿಕ್ಕು ತಪ್ಪಿಸುವ ಕೆಲಸವಾಗುತ್ತದೆ. ಈ ಕೇಸ್‌ನ್ನು ಮುಚ್ಚಿ ಹಾಕುವಂಥ ಕೆಲಸವಾಗುತ್ತದೆ. ಸಾಕ್ಷಿಗಳನ್ನು ನಾಶ ಮಾಡುವ ಕೆಲಸವಾಗುತ್ತದೆ. ಅದಕ್ಕಾಗಿ ನಾನು ಒತ್ತಾಯ ಮಾಡುತ್ತಿದ್ದೇನೆ. ಇದು impartial ತನಿಖೆಯಾಗಬೇಕು, CBI ತನಿಖೆಯಾಗಬೇಕು. ತಂಗಡಗಿಯವರು ರಾಜೀನಾಮೆಯನ್ನು ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:- ಸನ್ಮಾನ್ಯ ಉಪಾಧ್ಯಕ್ಷರೆ, ರಘುಪತಿ ಭಟ್‌ರವರೆ ಧರ್ಮಪತ್ನಿ ಹಗರಣವಾದಾಗ ಆಗ ಏಕೆ ಇವರು CBI ತನಿಖೆಗೆ ಕೊಡಲಿಲ್ಲ? ಆಗ ಏಕೆ ಇವರು CBIಗೆ ಕೊಡಲಿಲ್ಲ? ಇವರಿಗೊಂದು ನ್ಯಾಯ, ನಮಗೊಂದು ನ್ಯಾಯವೇ? ಇವರು ಏನು ಬೇಕಾದರೂ ಮಾಡಬಹುದು. ಈ ರಾಜ್ಯದಲ್ಲಿ ಆಡಳಿತ ನಡೆಸುವಾಗ ಇವರು ಏನೇನು ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಇವರು ಏನಾದರೂ ಒಂದು ಆರೋಪ

ಮಾಡಬೇಕಾದರೆ, ನಿರ್ದಿಷ್ಟವಾದ ಗುರುತರವಾದ ವಿಚಾರವನ್ನು ಪ್ರಸ್ತಾಪ ಮಾಡಲಿ. ಸುಮ್ಮಸುಮ್ಮನೆ ಸಚಿವರ ಮೇಲೆ ಆರೋಪ ಮಾಡುವುದು ತಪ್ಪು.

(ಗೊಂದಲ)

ಶ್ರೀ ಸಿ.ಟಿ. ರವಿ:– ಆಗ ದೆಹಲಿಯಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಮಾಜಿ ಮುಖ್ಯಮಂತ್ರಿಗಳಾಗಿ ಯಾವುದಾದರೂ ಆರೋಪ ಮಾಡಬೇಕಾದರೆ ಅವರ ಹತ್ತಿರ ಸಾಕ್ಷ್ಯಾಧಾರವಿದ್ದರೆ ಸದನದ ಮುಂದೆ ತಂದಿಡಲಿ. ಆ ಸಚಿವರು ತಪ್ಪಿತಸ್ಥರು ಎನ್ನುವುದಾದರೆ ಅವರ ಮೇಲೆ ಏನು ಬೇಕಾದರೂ ಕ್ರಮ ಕೈಗೊಳ್ಳಲಿ ಇದನ್ನು ರಾಜಕೀಯ ಪ್ರೇರಿತವಾಗಿ ನೀವು ಮಾಡಬೇಡಿ ಎಲ್ಲಿ ಅದರ ಪಾತ್ರವಿದೆ ಎನ್ನುವುದನ್ನು ಸ್ಪಷ್ಟಪಡಿಸಬೇಕು.

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:– ನೀವು ಆಡಳಿತ ನಡೆಸುವಾಗ ಎಷ್ಟು ಮಂದಿ ಗೂಂಡಾ ಲಿಸ್ಟ್‌ನಲ್ಲಿಲ್ಲ. ಅವರನ್ನೆಲ್ಲಾ ನೀವು ಪಕ್ಷದಿಂದ ಹೊರಗೆ ಹಾಕಿದ್ದೀರಾ? Murder ಮಾಡಿ ಆತ್ಮಹತ್ಯೆ ಎಂದು ಮಾಡಿದಿರಿ, ಶಾಸಕರ ಹಿಂದೆ ನೂರಾರು ಮಂದಿ ಇರುತ್ತಾರೆ, ಸಾಕಷ್ಟು ಜನರಿರುತ್ತಾರಲ್ಲ, ಅವರಿಗೇನು ಮಾಡಿದ್ದೀರಿ? ನೀವು ಗೂಂಡಾಗಿರಿ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಶಿವರಾಜ ಎಸ್. ತಂಗಡಗಿ:– ನೋಡಿ ವಿರೋಧಪಕ್ಷದ ನಾಯಕರೆ, ಇಂಥವರಿಗೆ ನಾವು support ಮಾಡುವಂಥ ಪರಿಸ್ಥಿತಿ ನಮಗಿಲ್ಲ. ನಾವು ಇಂಥವರಿಗೆ ರಕ್ಷಣೆ ಕೊಡುವುದಿಲ್ಲ. ಅಂಥ ಸಂಸ್ಕೃತಿಯೊಳಗೆ ನಾವು ಬೆಳೆದಿಲ್ಲ. ಯಾರು ತಪ್ಪು ಮಾಡಿರುತ್ತಾರೆಯೋ ಅವರಿಗೆ ಶಿಕ್ಷೆಯಾಗುತ್ತದೆ. ಆ ಶಿಕ್ಷೆಯಾಗುವ ಸಲುವಾಗಿ ಎಲ್ಲರೂ arrest ಆಗಿದ್ದಾರೆ. ಇವತ್ತೆಲ್ಲಾ ಜೈಲಿಗೆ

ಹೋಗುವಂಥ ಕೆಲಸವನ್ನು ಮಾಡುತ್ತಿದ್ದಾರೆ. ನಿಮ್ಮಿಂದಲೂ ತಪ್ಪಾಗಿತ್ತಲ್ಲ ಆಗ ನೀವ್ಯಾಕೆ ಸುಮ್ಮನೆ ಇದ್ದಿರಿ?

(ಗೊಂದಲ)

ಶ್ರೀ ಎನ್. ಚೆಲುವರಾಯ ಸ್ವಾಮಿ:– ರೀ ನೀವೇನು ಲಾಯರ್ ಏನ್ರೀ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಈ ಪ್ರಕರಣವನ್ನಿಟ್ಟುಕೊಂಡು ರಾಜಕಾರಣ ಮಾಡುತ್ತೀರಲ್ರೀ.

(ಗೊಂದಲ)

ಉಪಾಧ್ಯಕ್ಷರು: ನಿಮ್ಮ ನಾಯಕರು ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ಇವರಿಗೆ ಏನು moral right ಇದೆಯೆಂದು ಕೇಳುತ್ತಾರೆ. ಇವರ ಆಡಳಿತಾವಧಿಯಲ್ಲಿ ದೆಹಲಿಯಲ್ಲಿ ಶಾಸಕರ ಹೆಂಡತಿಯವರ murder ಆಯಿತು. ಇವರು CBIಗೆ ಕೊಡಲಿಲ್ಲ. ಬೇರೆ ಬೇರೆ 4–5 ಪ್ರಕರಣಗಳಲ್ಲಿಯೂ ಸಹ CBI ಬಗ್ಗೆ ಮಾತನಾಡಲಿಲ್ಲ. ಈಗ CBI ಬಗ್ಗೆ ಮಾತನಾಡುತ್ತಿದ್ದಾರೆ. ಇವರಿಗೇನು ನೈತಿಕ ಹಕ್ಕಿದೆ?

(ಗೊಂದಲ)

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ನಿಲುವಳಿ ಸೂಚನೆ ಮೂಲಕ ತಂದಿರುವ ವಿಚಾರಕ್ಕೆ ನಾನು ಬೆಂಬಲವನ್ನು ನೀಡುತ್ತಾ ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತಿದ್ದೇನೆ.

(ಗೊಂದಲ)

ಶ್ರೀ ಅಶೋಕ ಮಹದೇವ ಪಟ್ಟಣ್:– ಮಾನ್ಯ ಅಧ್ಯಕ್ಷರೆ, ರಘುಪತಿಭಟ್ ಶಾಸಕರ ಹೆಂಡತಿಯನ್ನು ದೆಹಲಿಗೆ ಕರೆದುಕೊಂಡು ಹೋಗಿ murder ಮಾಡಿದರು. ಆಗಲೇ ಇವರು ಪ್ರಕರಣವನ್ನು CBIಗೆ ಒಪ್ಪಿಸಲಿಲ್ಲ.

(ಗೊಂದಲ)

ಉಪಾಧ್ಯಕ್ಷರು: ರವಿಯವರೆ, ಅವರು ಮಾತನಾಡುತ್ತಿದ್ದಾರೆ ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ರಘುಪತಿ ಭಟ್ ರವರ ಪತ್ನಿ ಆತ್ಮಹತ್ಯೆಯಾದದ್ದು ದೆಹಲಿಯಲ್ಲಿ. ಅಂದು ದೆಹಲಿಯಲ್ಲಿ ಇದ್ದದ್ದು ಕಾಂಗ್ರೆಸ್ ಸರ್ಕಾರ. ಇವರಿಗೆ ಸಿ.ಬಿ.ಐ ಗೆ ಕೊಡಬೇಕೆನ್ನುವ ಒತ್ತಾಯ ಇದ್ದಿದ್ದರೆ ಆ ಸರ್ಕಾರವೇ ಅಲ್ಲಿಂದ ಸಿ.ಬಿ.ಐ ಗೆ ಕೊಡಲು ಬರುತ್ತಿತ್ತು. ದೆಹಲಿಯಲ್ಲಿದ್ದದ್ದೇ ಕಾಂಗ್ರೆಸ್ ಸರ್ಕಾರ. ಶೀಲಾ ದೀಕ್ಷಿತ್ ರವರೆ ಮುಖ್ಯಮಂತ್ರಿಗಳಾಗಿದ್ದು. ಅದನ್ನು ಇಟ್ಟುಕೊಂಡು ಇಲ್ಲಿ ಮಂತ್ರಿಗಳ ರಕ್ಷಣೆ ಮಾಡುವ ಕೆಲಸಕ್ಕೆ ಮುಂದಾಗಬಾರದು.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– (ಗೊಂದಲ) ನಿಮ್ಮ ಸಂಕುಚಿತ ಸರ್ಕಾರ, ಸರ್ಕಾರದ statement ಏನು ಎನ್ನುವುದನ್ನು ದಯವಿಟ್ಟು ಹೇಳಿ. ಇವತ್ತು ಸುಮ್ಮನೆ ಜಾರಿಕೊಳ್ಳುವುದಕ್ಕೆ ಹೋಗಬೇಡಿ. ಸದನದಲ್ಲಿ record ಇದೆ. ರಘುಪತಿ ಭಟ್‌ರವರ ಧರ್ಮಪತ್ನಿ ಆತ್ಮಹತ್ಯೆಯ ವಿಚಾರದಲ್ಲಿ ನೀವು ನೀಡಿರುವ ಹೇಳಿಕೆಗಳನ್ನು ಹೇಳಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಇವರಿಗೆ ಏನು ನೈತಿಕ ಹಕ್ಕಿದೆ? ಯಾವ ನೈತಿಕ ತಳಹದಿಯ ಮೇಲೆ ಈ ರೀತಿ ಕೇಳುತ್ತಾರೆ?

(ಗೊಂದಲ)

ಉಪಾಧ್ಯಕ್ಷರು:- ಕುಳಿತುಕೊಳ್ಳಿ, ವಿಷಯ ಎಲ್ಲೆಲ್ಲಿಯೋ ಹೋಗುತ್ತಿದೆ. ಕುಳಿತುಕೊಳ್ಳಿ ಸೋಮಶೇಖರ್.

(ಗೊಂದಲ)

ಉಪಾಧ್ಯಕ್ಷರು:- ನೀವು ಮಾತನಾಡಿ ನಿಮ್ಮ ನಾಯಕರು ಬಹಳ ವಿಚಾರಗಳನ್ನು ಹೇಳಿದ್ದಾರೆ.

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ನಡೆದಿರುವ ಕೊಲೆ ಪ್ರಕರಣದ ಬಗ್ಗೆ ಈಗಾಗಲೇ ಜಿಲ್ಲೆಯಾದ್ಯಂತ ಬೇರೆಬೇರೆ ಸಂಘಟನೆಗಳು ಭ್ರಷ್ಟಾಚಾರದ ವಿರುದ್ಧ ಮಾತನಾಡಿದ ಒಬ್ಬ ಯುವಕನ ಕೊಲೆಯಾಗಿದೆ. ಈ ಕೊಲೆಯ ಹಿಂದೆ ಅನೇಕ ಜನ ಪ್ರಭಾವಿ ವ್ಯಕ್ತಿಗಳ ಕೈವಾಡವಿದೆ ಎಂಬ ಶಂಕೆಯಿಂದ ಅನೇಕ ಧರಣಿಗಳು, strikeಗಳು ನಡೆದಿರುವುದನ್ನು ಇಂದು ಕಾಣುತ್ತೇವೆ. ನಿನ್ನೆ ತಾನೆ ಈ ಸದನದಲ್ಲಿ ಭ್ರಷ್ಟಚಾರದ ಬಗ್ಗೆ ಬಹಳಷ್ಟು ಜನ ಹಿರಿಯರೆಲ್ಲರೂ ಮಾತನಾಡಿದರು. ಆದರೆ, ಭ್ರಷ್ಟಾಚಾರದ ವಿರುದ್ಧ ಮಾತನಾಡಿದ್ದ ಒಬ್ಬ ವ್ಯಕ್ತಿ, ಅದೂ ಅವನು ಯಾರ ಹೆಸರನ್ನೂ ಕೂಡಾ ಹೇಳಿರಲಿಲ್ಲ. ಕೇವಲ ನಮ್ಮ ಗ್ರಾಮದಲ್ಲಿ ಅವ್ಯವಹಾರ ಆಗಿದೆ ಎಂದು ಒಂದು ಬೈಟ್ ಕೊಟ್ಟ, ಸಂದರ್ಶನ ಕೊಟ್ಟ, ಆ ಸಂದರ್ಶನ ಕೊಟ್ಟಿದ್ದಕ್ಕೆ ಅಲ್ಲಿರುವ ಒಬ್ಬ ವ್ಯಕ್ತಿ ಬಾಳನಗೂಡ ಎಂಬ ವ್ಯಕ್ತಿ ಹನುಮೇಶ ನಾಯಕನ ಬೆಂಬಲಿಗ ಅಲ್ಲಿ ಹೋಗಿ ನೀನೇಕೆ ಅದನ್ನು ಹೇಳಿಕೆ ಕೊಟ್ಟೆ, ಅವರ ವಿರುದ್ಧ ಹೇಳಿಕೆ ಕೊಟ್ಟರೆ ನೀನು ಬದುಕಲು ಸಾಧ್ಯವೆ? ಎಂದು ಬಹಳ ನೇರವಾಗಿ ಆ ಹುಡುಗನಿಗೆ ಪ್ರಶ್ನೆಯನ್ನು ಮಾಡುತ್ತಾನೆ. ಅವತ್ತು ಕೊಲೆಯಾದ ಸಂದರ್ಭದಲ್ಲಿ ಆತನ ತಾಯಿ ಕೆಂಚಮ್ಮ ಎಂಬ ಯಲ್ಲಾಲಿಂಗನ ತಾಯಿ ಬೆಂಗಳೂರಿಗೆ ದುಡಿಯಲು ಹೋಗಿರುತ್ತಾಳೆ. ಕೂಲಿ ಕೆಲಸ ಮಾಡಿ ತನ್ನ ಮಗನನ್ನು ಓದಿಸಬೇಕು, ಓದಿಸಿ ನಮ್ಮ ಮನೆತನವನ್ನು ಉದ್ಧಾರ ಮಾಡಬಹುದು ಎಂಬ ಕಲ್ಪನೆಯನ್ನು ಇಟ್ಟುಕೊಂಡ ತಾಯಿ ಅಲ್ಲಿಗೆ ಇಂದು ಹೋದರೆ ಎಲ್ಲರ ಮುಂದೆ ಅಳುತ್ತಾ ಹೇಳುವುದು ನನ್ನ ಮಗ ನನಗೆ

ನೌಕರಿ ತೆಗೆದುಕೊಂಡು ಖಂಡಿತಾ ನಿಮ್ಮನ್ನು ಬದುಕಿಸುತ್ತೇನೆ, ಕಾಪಾಡುತ್ತೇನೆ ಎಂಬ ಮಾತನ್ನು ಯಾವತ್ತೂ ಹೇಳುತ್ತಿದ್ದ. ಆದರೆ ಸತ್ಯ ಮಾತನಾಡಿದ್ದಕ್ಕೆ ನನ್ನ ಮಗನ ಕೊಲೆ ಆಯಿತು ಎಂದು ಹೇಳುತ್ತಾರೆ. ಇದು ಯಲ್ಲಾಲಿಂಗನ ಕೊಲೆಯಲ್ಲ. ಏಕೆಂದರೆ ಈ ಹನುಮೇಶ್ ನಾಯಕ್ ಎಂಬ ವ್ಯಕ್ತಿ ಹಾಗೂ ನಾನು ಜಿಲ್ಲಾ ಪಂಚಾಯಿತಿ ಸದಸ್ಯನಾಗಿ ಒಟ್ಟಿಗೆ ಕೆಲಸ ಮಾಡಿರುವವರು. ಮೊದಲಿನಿಂದಲೂ ಕೂಡಾ ಬಹಳ ಆಕ್ರಮಣಕಾರಿ ವ್ಯಕ್ತಿತ್ವವನ್ನು ಹೊಂದಿರುವ ಮನುಷ್ಯ. ಇವತ್ತು ಸದನದಲ್ಲಿ ಮಾನ್ಯ ಸಚಿವರ ಹೆಸರು ಪ್ರಸ್ತಾಪವಾದ ಕೂಡಲೇ ಅವರು ಬಹಳ ಸಿಟ್ಟಿಗೆ ಬಂದರು. ಎಲ್ಲಾ ವರದಿಗಳಲ್ಲಿಯೂ ಹೇಳುತ್ತಿರುವುದು ಏನೆಂದರೆ, ಶಿವರಾಜ ತಂಗಡಗಿಯವರ ಬೆಂಬಲಿಗ ಎಂದೇ ಬಂದಿದೆ ಈ ಪ್ರಕರಣದಲ್ಲಿ. ಹಿಂದೆಯೂ ಕೂಡಾ ಬಹಳಷ್ಟು ಬಾರಿ ಟಿ.ವಿ. ಮಾಧ್ಯಮಗಳಲ್ಲಿ ಬಂದಿರುವುದು ಸ್ವಲ್ಪ ರೌಡಿಶೀಟ್...

ಶ್ರೀ ಕೆ. ಶಿವಮೂರ್ತಿ:- ಹಿಂದೆ ಅವರು ನಿಮ್ಮ ಪಕ್ಕದಲ್ಲಿಯೇ ಇದ್ದರಲ್ಲ? ತಂಗಡಗಿಯವರು ಹಿಂದೆ ನಿಮ್ಮ ಜೊತೆಯಲ್ಲಿಯೇ ಇದ್ದರಲ್ಲ ಎಂದು.

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:- ಹನುಮೇಶ ನಾಯಕನ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ:- ಆಗಲೂ ಇದ್ದರಲ್ಲ, ನೀವೆಲ್ಲಾ ಸ್ನೇಹಿತರಲ್ಲವೇನು?

(ಗೊಂದಲ)

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:- ಅದನ್ನೇ ಹೇಳುತ್ತಿದ್ದೇನೆ. ಸ್ವಲ್ಪ ತಡೆಯಿರಿ.... (ಗೊಂದಲ)

(ಗೊಂದಲ)

ಶ್ರೀ ಡಿ.ಎಸ್. ಜೀವರಾಜ್:- ಹೌದ್ರಿ, ನೀವೂ ಇದ್ರಿ ನಮ್ಮ ಪಕ್ಷದಲ್ಲಿ. ನೀವು ನಮ್ಮ ಪಕ್ಷದಲ್ಲಿ ಇರಲಿಲ್ಲವೇನು?

(ಗೊಂದಲ)

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:- ನಾನು ಹೇಳುವವರೆಗೆ ದಯವಿಟ್ಟು ಸುಮ್ಮನಿರಿ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್: ಹಾಗೆಂದು ಹೇಳಿ ಅದನ್ನೆಲ್ಲಾ ಹೇಳುವುದು ಸರಿಯಲ್ಲ. ನೋಡಿ ಅವರನ್ನು ಭಾಷಣ ಮಾಡುವುದಕ್ಕೆ ಬಿಡಿ. ಪದೇ ಪದೇ ಎಲ್ಲದಕ್ಕೂ ಎದ್ದು ನಿಲ್ಲುವುದು ನಿಮ್ಮ ವ್ಯಕ್ತಿತ್ವಕ್ಕೆ ಸರಿ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ:- ಸುಮ್ಮನೆ ಕುಳಿತುಕೊಳ್ಳಿ, ಅವರು ಮಾತನಾಡಲಿ. ನಿಮಗೆ ಗೌರವ ಇರುವುದಿಲ್ಲ. ನೀವೇನು ಅಡ್ವೋಕೇಟಾ? ಸರ್.

(ಗೊಂದಲ)

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:- ಒಬ್ಬ ರೌಡಿಶೀಟಿನಲ್ಲಿರುವ ವ್ಯಕ್ತಿ ಅವರ ಜೊತೆ ಇರುತ್ತಾನೆಂದು ಬಹಳಷ್ಟು ಜನರಿಗೆ ಗೊತ್ತು. ಆದರೆ ನಮ್ಮ ಒಂದು ಉದ್ದೇಶವೇನೆಂದರೆ ಅವರು ಇದ್ದಾರೋ, ಬಿಟ್ರೋ ಎನ್ನುವುದಲ್ಲ. ಏನು ಇದರಲ್ಲಿ ಸಚಿವರ ಹೆಸರು ಪುನಃ ಪುನಃ ಪ್ರಸ್ತಾಪವಾಗುತ್ತಿದೆ, ಅವರು ನಿಷ್ಕಳಂಕಿತರಾಗಿದ್ದರೆ, ನಿಷ್ಪಕ್ಷಪಾತ ತನಿಖೆ ನಡೆಯಬೇಕೆನ್ನುವುದಾದರೆ ಈಗಾಗಲೇ ಇದನ್ನು ಸಿ.ಓ.ಡಿ ಗೆ ವರ್ಗಾವಣೆ ಮಾಡಿದ್ದಾರೆ. ಬಹುಶಃ 4 ತಿಂಗಳ ಕಾಲ ಆತನನ್ನು arrest ಮಾಡಿಲ್ಲ ಎನ್ನುವುದನ್ನು ನಮ್ಮ ನಾಯಕರು ಹೇಳಿದರು. ಬಡ ಕುಟುಂಬದಿಂದ ಬಂದಿರುವ ಒಬ್ಬ ವ್ಯಕ್ತಿ ಸುಮ್ಮನೆ ಗುದ್ದಾಡಿದರೂ ಸಾಕು, ಒಂದು complaint ಕೊಟ್ಟು ಮನೆಯ ಹತ್ತಿರ ಬಂದು ಅರೆಸ್ಟ್ ಮಾಡಿಕೊಂಡು ಹೋಗುತ್ತಾರೆ. ನಾವು ಹೇಳಿದರೂ ಕೂಡಾ ಅವರನ್ನು ಬಿಡುವುದಿಲ್ಲ. ನಾಳೆ ಬರುತ್ತಾನೆ ಹೋಗಪ್ಪ, ರಾತ್ರಿ ಆಗಿದೆ ಎಂದರೂ ಬಿಡುವುದಿಲ್ಲ. ಆದರೆ, ಕೊಲೆ

ಪ್ರಕರಣದಲ್ಲಿರುವ ವ್ಯಕ್ತಿ death note ನಲ್ಲಿಯೂ ಕೂಡಾ ಹನುಮೇಶ ನಾಯಕನ ಹೆಸರು ಬರೆದಿಟ್ಟಿದ್ದಾನೆ. ಯಲ್ಲಾಲಿಂಗ ಎನ್ನುವವನು death note ನಲ್ಲಿ ಹನುಮೇಶ್ ನಾಯಕನ ಹೆಸರನ್ನೇ ಬರೆದಿದ್ದಾನೆ. Complaint ಕೊಟ್ಟರೆ complaint ಕೂಡಾ ತೆಗೆದುಕೊಳ್ಳುವುದಿಲ್ಲ. ಅಷ್ಟೊಂದು ಭಯದ ವಾತಾವರಣ ಇಂದು ಅಲ್ಲಿರುವುದನ್ನು ನಾವು ಕಾಣುತ್ತೇವೆ. ಕೇವಲ ಅದಷ್ಟೇ ಅಲ್ಲ. ಸಣ್ಣ ಹನುಮಂತಪ್ಪ ಎಂಬ ಒಬ್ಬ ಎಸ್.ಸಿ. ಹುಡುಗ, ಆತನೂ ಕೂಡಾ ಭ್ರಷ್ಟಾಚಾರದ ವಿರುದ್ಧ ಮಾತನಾಡಿದ್ದಕ್ಕೆ ಆತನಿಗೆ ಏನು ಹನುಮೇಶ ನಾಯಕನ ಗ್ಯಾಂಗ್ ಇದೆ, ಅದು ಅಂದು ಅವನ ಮನೆಗೆ attack ಮಾಡಲು ಹೋಗುತ್ತದೆ. ಆದರೆ ಸಣ್ಣ ಹನುಮಂತಪ್ಪ ಸಿಗುವುದಿಲ್ಲ. ಅವರ ಅಣ್ಣ ಹುಸೇನಪ್ಪ ಎಂಬ ವ್ಯಕ್ತಿ ಅಲ್ಲಿ ಸಿಗುತ್ತಾನೆ. ಆತನಿಗೆ ದನಕ್ಕೆ ಬಡಿಯುವ ಹಾಗೆ ಬಡಿದು ಇವತ್ತು ಚಿಕಿತ್ಸೆ ಪಡೆಯುತ್ತಿದ್ದಾನೆ. ಆತ complaint ಮಾಡಲು ಹೋದರೆ ಅದಕ್ಕಿಂತ ಮುಂಚೆ ಹನುಮೇಶ ನಾಯಕನ ಬೆಂಬಲಿಗರು ಹೋಗಿ complaint ಕೊಟ್ಟಿರುತ್ತಾರೆ. ಅಂದರೆ ಗೂಂಡಾ ರೀತಿಯ ವರ್ತನೆ ಆ ಭಾಗದಲ್ಲಿದೆ, ಇಂದು ಕೇವಲ ಬಿ.ಜೆ.ಪಿ ಪಕ್ಷವರೆಂದಲ್ಲ. ಎಲ್ಲಾ ಪ್ರಗತಿಪರ ಸಂಘಟನೆಗಳು ಕೂಡಾ ಹೋರಾಟ ಮಾಡುತ್ತಿವೆ. ಹೋರಾಟ ಏನೆಂದರೆ ನಮ್ಮಲ್ಲಿರುವ ಭಯದ ವಾತಾವರಣ ಹೋಗಬೇಕು. ಈ ತನಿಖೆ ನಿಷ್ಪಕ್ಷಪಾತವಾಗಿ ಆಗಬೇಕೆನ್ನುವುದು ಎಲ್ಲರ ಬೇಡಿಕೆ. ಹಾಗಾಗಿ ಮಾನ್ಯ ಸಚಿವರು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರು ರಾಜೀನಾಮೆ ಕೊಡಬೇಕು. ಏಕೆಂದರೆ ಸಿ.ಓ.ಡಿ ಎಂದರೆ ಯಾರು? ನಿನ್ನೆ ಹಿರಿಯ ಸದಸ್ಯರಾದ ರಮೇಶ್ ಕುಮಾರ್ ರವರು ಹೇಳಿದರು. ಸಿ.ಓ.ಡಿ ಯವರು ಎಂದರೆ ಇಲ್ಲಿರುವ ಪೋಲೀಸರೇ ಅಲ್ಲಿದ್ದಾರೆಂದು. ಹಾಗಾದರೆ ಪೋಲೀಸರ ಮೇಲೆ ಪ್ರಭಾವ ಬೀರುವುದಿಲ್ಲವೆನ್ನುವುದಕ್ಕೆ ಏನು guarantee? ನಮ್ಮಲ್ಲಿ ಜನರ ಮಧ್ಯೆ ಎದ್ದಿರುವ ಪ್ರಶ್ನೆ ಇದು. ಹಾಗಾಗಿ ಇವತ್ತು ಅವರು ಕಳಂಕಿತರಲ್ಲ ಎನ್ನುವುದಾದರೆ, ಅವರನ್ನು ಇವರು ಬೆಂಬಲಿಸುವುದಿಲ್ಲವೆನ್ನುವುದಾದರೆ ತನಿಖೆಯಾದ ಮೇಲೆ ಇವರ ಕೈವಾಡ ಇಲ್ಲವೆನ್ನುವುದಾದರೆ ಅವರು ಮತ್ತೆ ಸಂಪುಟಕ್ಕೆ ಸೇರಬಹುದು.

ಆದರೆ, ಅಲ್ಲಿಯವರೆಗೆ ನಿಷ್ಪಕ್ಷಪಾತ ತನಿಖೆಯಾಗಬೇಕೆನ್ನುವುದಾದರೆ ದಯವಿಟ್ಟು ಇವರು...........

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಇಲ್ಲಿಯತನಕ ಬಿ.ಜೆ.ಪಿ ಸರ್ಕಾರದಲ್ಲಿದ್ದಾಗ ನಿಮ್ಮ ಸಚಿವರುಗಳ ಮೇಲೆ ಆರೋಪ ಬಂದಾಗ ಎಷ್ಟು ಜನ ಆ ರೀತಿ ರಾಜೀನಾಮೆ ಕೊಟ್ಟಿದ್ದರು?

(ಗೊಂದಲ)

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:- ಹೇಳುತ್ತಿದ್ದೇನೆ. ನರೇಂದ್ರಣ್ಣ ಅದನ್ನೇ ಹೇಳುತ್ತಿದ್ದೇನೆ. ನಾನು ಹೇಳುವುದನ್ನು ನೀವು ಕೇಳುತ್ತೀರೋ, ಇಲ್ಲವೋ?

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ನೀವು ಈ ಸಿದ್ಧಾಂತವನ್ನು ಇಲ್ಲಿ ಹೇಳಬೇಕಾದರೆ ನೀವು ಆ ದಾರಿಯಲ್ಲಿ ನಡೆದಿದ್ದೀರಾ? ನಿಮ್ಮ ಆತ್ಮಶೋಧನೆ ಮಾಡಿಕೊಳ್ಳಿ.

(ಗೊಂದಲ)

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:- ಅದೇನು ಎಂದು ನಾನು ಹೇಳುತ್ತಿದ್ದೇನೆ. ಬಹುಶಃ ನಮ್ಮ ಜಿಲ್ಲೆಯ ಜನರ ಭಾವನೆಯನ್ನು........

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಯಾರ ಮೇಲೆ ನೀವು ದೋಷಾರೋಪಣೆ ಹೊರಿಸುತ್ತಿದ್ದೀರಿ? ಲೋಪವೇನಿದೆ ಅಲ್ಲಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:- ಇವರ ಸರ್ಕಾರದಲ್ಲಿ ಶಾಸಕರಾಗಿ ಮಂತ್ರಿಯಾದಾಗ. . .

(ಗೊಂದಲ)

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:– ನನ್ನ ಜಿಲ್ಲೆಯ ಜನರ ಭಾವನೆಯನ್ನು ನಾನು ಈ ಸದನಕ್ಕೆ ಹೇಳಬಯಸುತ್ತೇನೆ. ದಯವಿಟ್ಟು. . . .

(ಗೊಂದಲ)

ಉಪಾಧ್ಯಕ್ಷರು:– ಅವರು ಹೇಳುವುದನ್ನು ಹೇಳಿದ್ದಾರೆ. ಏಕೆ ಸುಮ್ಮನೆ. . . ಅವರು ಮುಗಿಸಲಿ.

(ಗೊಂದಲ)

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:– ಇಂದು ಆ ಊರಿನಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ ಎಂದರೆ. . . .

(ಗೊಂದಲ)

SRI K. SHIVAMURTHY:– The amount of grounds they have against him, they have disqualified him. Supreme Court has upheld it. ಇವೆಲ್ಲಾ ದಾಖಲೆಗಳಲ್ಲಿವೆ (ಗೊಂದಲ). .. they will not tolerate.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಇವತ್ತು ಈ ಮಾತನ್ನು ಆಡುತ್ತಿದ್ದೀರಾ ನೀವು? (ಗೊಂದಲ) ಸುಪ್ರೀಂಕೋರ್ಟಿನಲ್ಲಿ ನಿಮಗೆ ಛೀಮಾರಿ ಹಾಕಿದರು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈ ಸದನದಲ್ಲಿಯೇ ದಾರಿ ತಪ್ಪಿಸುವ ಪ್ರಯತ್ನ ಮಾಡಿದವರು ಇನ್ನು ಆ ತನಿಖೆಯಲ್ಲಿ ಏನೇನು ದಾರಿ ತಪ್ಪಬಹುದು ಹೇಳಿ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಛೀಮಾರಿ ಹಾಕಿತು ಸುಪ್ರೀಂಕೋರ್ಟ್. ನಿಮಗೆ ಯೋಗ್ಯತೆ ಇದ್ದರೆ ಆವತ್ತು ಮಾತನಾಡಬೇಕಿತ್ತು ಸುಪ್ರೀಂಕೋರ್ಟಿನಲ್ಲಿ. This is a drama. ಏನೇನು ಮಾಡಿದ್ದೀರಿ ಎಂಬುದು ನಮಗೆ ಗೊತ್ತಿದೆ. ಯಾವ ರೀತಿಯ ತನಿಖೆಯನ್ನಾದರೂ ಮಾಡಿ. ರಾಜೀನಾಮೆ ಕೇಳುವುದಕ್ಕೆ ನೈತಿಕ ಹಕ್ಕು ಇದೆಯೆ ನಿಮಗೆ? ಧರ್ಮದ ಹಾದಿಯಲ್ಲಿ ನೀವ್ಯಾರು ಇರಲೇ ಇಲ್ಲ.

(ಗೊಂದಲ)

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:– ನಮ್ಮ ಜಿಲ್ಲೆಯ ಜನರ ಭಾವನೆಗಳನ್ನು ಹೇಳುವುದಕ್ಕೆ ಇವರು ಬಿಡುತ್ತಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮುಕ್ತವಾಗಿ ಸದನದಲ್ಲಿ ಚರ್ಚೆ ಮಾಡುವುದಕ್ಕೆ ತೊಂದರೆ ಅಡ್ಡಿ–ಆತಂಕಪಡಿಸುವ ವ್ಯವಸ್ಥೆ ಮಾಡಿಕೊಂಡರೆ ಇನ್ನು ತನಿಖೆ ಏನೇನು ಆಗಿರಬಹುದು ಎಂದು ಯೋಚನೆ ಮಾಡಿ ನೀವು. ಇಲ್ಲಿ ಇಷ್ಟು ಮುಕ್ತವಾದ ವ್ಯವಸ್ಥೆಯಲ್ಲಿ ಈ ರೀತಿ ಅಡ್ಡಿ ಆತಂಕ ಮಾಡುತ್ತಾರೆ. ಇದಕ್ಕಿಂತ ಬೇರೆ ಸಾಕ್ಷಿ ಬೇಕಾ? ತನಿಖೆ ಪೂರ್ಣ ದಾರಿ ತಪ್ಪಿ ಹೋಗುತ್ತದೆ ಎನ್ನುವುದಕ್ಕೆ ಇದೇ ಸಾಕ್ಷಿ.

(ಗೊಂದಲ)

ಶ್ರೀ ಸಿ.ಟಿ. ರವಿ:– ಇವರು ಮಾತನಾಡುತ್ತಿರುವ ಧಾಟಿಯನ್ನು ನೋಡಿದರೆ ನಮ್ಮ ಜೀವಕ್ಕೂ ಭಯವಿದೆ.

(ಗೊಂದಲ)

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:– ನಾನು ನಮ್ಮ ಜಿಲ್ಲೆಯ ಜನರ ಭಾವನೆಯನ್ನು ಹೇಳುವುದಕ್ಕೆ ಬಿಡುತ್ತಿಲ್ಲ. ಅದನ್ನು ಕೇಳಿಸಿಕೊಳ್ಳುವ ತಾಳ್ಮೆಯೂ ಇವರಿಗೆ ಇಲ್ಲ. ಬಹುಶಃ ನಮ್ಮ ಜಿಲ್ಲೆಯ ಜನರ ಪರಿಸ್ಥಿತಿ ಯಾವ ರೀತಿ ಇದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

ಇಂದು ಏನು ಯಲ್ಲಾಲಿಂಗನ ಪ್ರಕರಣವಾಗಿದೆ, ಕೊಲೆ ಎನ್ನುವುದು ಎಲ್ಲರಿಗೂ ಗೊತ್ತಿರುವುದು. ತನಿಖೆಯಾಗುತ್ತಿದೆ. ಈ ಹಿಂದೆಯೂ ಕೂಡಾ ವರದಿ ಬಂದಿತ್ತು. ಏನೆಂದರೆ, ನಿಷ್ಪಕ್ಷಪಾತವಾಗಿ ತನಿಖೆ ಮಾಡುವ ಎಸ್.ಪಿ ಯವರನ್ನು ಅಲ್ಲಿಂದ ವರ್ಗಾವಣೆ ಮಾಡುತ್ತಾರೆಂದು ವರದಿಯಾಗಿತ್ತು. ನಂತರ ಸಚಿವರು ಯಾವುದೇ ಕಾರಣಕ್ಕೂ ವರ್ಗಾವಣೆ ಮಾಡುವುದಿಲ್ಲ ಎಂದು ಹೇಳಿದರು. ಪೊಲೀಸರಿಗೆ complaint ಕೊಡಲು ಹೋದರೂ ಕೂಡಾ ಅವರು ತೆಗೆದುಕೊಳ್ಳುವುದಿಲ್ಲ. ಅವರು ಕೊಲೆ ಮಾಡಿ ಬಂದು ಅಥವಾ attack ಮಾಡಿ ಬಂದು ಅವರು ಕೊಡುವ complaint ತೆಗೆದುಕೊಳ್ಳುತ್ತಾರೆಯೆ ಹೊರತು ಯಾರು ಬಯ್ಯಿಸಿಕೊಂಡಿರುತ್ತಾರೆ, ಯಾರು ಅನ್ಯಾಯಕ್ಕೆ ಒಳಗಾಗಿರುತ್ತಾರೆ, ಅವರಿಂದ complaint ಅನ್ನು ಕೂಡಾ ತೆಗೆದುಕೊಳ್ಳದ ಪರಿಸ್ಥಿತಿ ಅಲ್ಲಿದೆ. ಹಾಗಾಗಿ ಮಾನ್ಯ ಸಭಾಧ್ಯಕ್ಷರೆ, ತಮ್ಮ ಮೂಲಕ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇದನ್ನು ಸಿ.ಬಿ.ಐ ಗೆ ಕೊಡಬೇಕು ಎನ್ನುವುದು ಎಲ್ಲ ಜನರ ಅಭಿಪ್ರಾಯ. ಎಲ್ಲದಕ್ಕೂ ಸಿ.ಬಿ.ಐ ಕೇಳುತ್ತಾರೆ ಎನ್ನುವುದಲ್ಲ. ಆತನೇ ಹೇಳಿರುವುದು. ಈಗಾಗಲೇ ನಮ್ಮ ನಾಯಕರು ಹೇಳಿದಂತೆ ಆತನೇ ಹೇಳಿದ್ದಾನೆ. ಸಿ.ಬಿ.ಐ.ಗೆ ಕೊಡಿ, ನನಗೇನು ಭಯವಿಲ್ಲ ಎಂದು. ಅವನಿಗೆ ಭಯವಿಲ್ಲವೆಂದ ಮೇಲೆ ಸಿ.ಬಿ.ಐ ಗೆ ಕೊಡುವುದಕ್ಕೆ ನೀವ್ಯಾಕೆ ಹಿಂದು–ಮುಂದು ಮಾಡುತ್ತೀರಿ? ಎಂದು ನನಗೆ ಗೊತ್ತಿಲ್ಲ. ಅಥವಾ ಸಿ.ಓ.ಡಿ ಯಲ್ಲಿಯೇ ಮುಂದುವರೆಸುವುದಾದರೆ ದಯವಿಟ್ಟು ಸನ್ಮಾನ್ಯ ಶಿವರಾಜ ತಂಗಡಗಿಯವರು. . . .

ಶ್ರೀ ಕೆ. ಗೋಪಾಲ ಪೂಜಾರಿ:– ನಿಮ್ಮ ಕಾಲದಲ್ಲಿ ಎಷ್ಟು ಸಿ.ಬಿ.ಐ ಗೆ ಕೊಟ್ಟಿದ್ದಿರಿ? ಎಂದು ಹೇಳಿ.

ಉಪಾಧ್ಯಕ್ಷರು:– ಆಯಿತು ಬಿಡಿ ಅದೆಲ್ಲಾ ಏಕೆ ಈಗ.

(ಗೊಂದಲ)

ಶ್ರೀ ಕೆ. ಗೋಪಾಲ ಪೂಜಾರಿ:– ಒಂದೂ ಕೊಡಲಿಲ್ಲ ನಿಮ್ಮ ಕಾಲದಲ್ಲಿ.

ಶ್ರೀ ಆರ್. ಜಗದೀಶ್ ಕುಮಾರ್:- ನಾವು ಕೊಡದೆ ಇರುವುದಕ್ಕೆ ಇಲ್ಲಿ ಕುಳಿತಿದ್ದೇವೆ. ನೀವು ಅಲ್ಲಿ ಕುಳಿತಿದ್ದೀರಿ ಕೊಡಿ.

ಉಪಾಧ್ಯಕ್ಷರು:- ಏನಾಗಬೇಕು ಎಂದು ಹೇಳಿ ಪಾಟೀಲರೆ.

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:- ಇದನ್ನು ಸಿ.ಬಿ.ಐ ಗೆ ಕೊಡಬೇಕು. ನನಗೂ ಕೂಡಾ gurantee ಇದೆ, ಸಚಿವರು ಇದರಲ್ಲಿ ಇಲ್ಲ ಎನ್ನುವುದು. ಹಾಗಾಗಿ ನಿಷ್ಪಕ್ಷಪಾತ ತನಿಖೆ ಮಾಡುವುದಕ್ಕೆ ಅವರು ರಾಜೀನಾಮೆ ಕೊಡಬೇಕು. ಇಲ್ಲದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಸಂಪುಟದಿಂದ ವಜಾ ಮಾಡಬೇಕು. ಇದು ನನ್ನ ಜಿಲ್ಲೆಯ ಜನರ ಭಾವನೆಯಾಗಿದೆ. ಇದಕ್ಕೆ ಸರ್ಕಾರ ದಯವಿಟ್ಟು ಈ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಆಯಿತು. ಈಗ ಚರ್ಚೆ ಮುಗಿದಿದೆ.

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ.

ಉಪಾಧ್ಯಕ್ಷರು:- ನಿಮ್ಮ ನಾಯಕರೆಲ್ಲ ಬಹಳ ವಿಚಾರಗಳನ್ನು ಹೇಳಿದ್ದಾರೆ.

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ನಾನು ಮುಂಚೆ ಮಾತನಾಡುವ ಉದ್ದೇಶವನ್ನು ಹೊಂದಿರಲಿಲ್ಲ. ಶಿವರಾಜ ತಂಗಡಗಿ ನಮ್ಮ ಜೊತೆಯಲ್ಲಿ ನಾನು ಬಿ.ಜೆ.ಪಿ ಯುವ ಮೋರ್ಚಾ ರಾಜ್ಯಾಧ್ಯಕ್ಷನಾಗಿದ್ದಾಗ ಅವರು ರಾಜ್ಯದ ಉಪಾಧ್ಯಕ್ಷರಾಗಿ ಕೆಲಸ ಮಾಡಿದವರು. ಅವರು ಕೊಲೆ ಮಾಡಿದ್ದಾರೆಂದು ಹೇಳುವ ಉದ್ದೇಶ ನನ್ನದಲ್ಲ. ಆದರೆ ಕೊಪ್ಪಳದ ಕನಕಗಿರಿಯ ಪರಿಸ್ಥಿತಿ ಏನಿದೆ? ನೋಡಿ, ಕೊಪ್ಪಳದ ಕನಕಗಿರಿಯಲ್ಲಿ ಯಲ್ಲಾಲಿಂಗನ ಕುಟುಂಬವನ್ನು ಮಾತನಾಡಿಸುವುದಕ್ಕೂ ಕೂಡಾ ಊರಿನವರು ಹೆದರುವ ಪರಿಸ್ಥಿತಿ ಇದೆ. ಅಂದರೆ ಇದನ್ನು ಪ್ರಜಾಪ್ರಭುತ್ವ ಎಂದು ಕರೆಯುತ್ತೇವೆ ಏನು? ಇದನ್ನು ಪ್ರಜಾಪ್ರಭುತ್ವ ಎಂದು ಕರೆಯಲು ಆಗುತ್ತದೆಯೆ? ದೌರ್ಜನ್ಯಕ್ಕೆ ಒಳಗಾದವರು ಒಂದು FIR ದಾಖಲು ಮಾಡಿಸಬೇಕಾದರೂ ಕೂಡಾ ಹರಸಾಹಸ

ಪಡುವಂತಹ ಸ್ಥಿತಿ ಇದೆ ಎಂದರೆ ಇದನ್ನು ಯಾವ ರೀತಿಯ ಆಡಳಿತ ಎಂದು ಕರೆಯಬೇಕು ನಾವು?

ಶ್ರೀ ಜೆ.ಟಿ. ಪಾಟೀಲ್:– ದತ್ತಾ temple ಪರಿಸ್ಥಿತಿ ಏನು ಎಂದು ಹೇಳಿರಿ. ನೀವೇ create ಮಾಡಿದ್ದೀರಿ.

ಶ್ರೀ ಸಿ.ಟಿ. ರವಿ:– ನೀವು ನನಗೆ ರಕ್ಷಣೆ ಕೊಡುವುದಾದರೆ ಮಾತ್ರ ನಾನು ಮಾತನಾಡುತ್ತೇನೆ.

ಉಪಾಧ್ಯಕ್ಷರು:– ಏ, ಹಾಗೆಲ್ಲ ಮಾತನಾಡಬೇಡಿ.

ಶ್ರೀ ಸಿ.ಟಿ. ರವಿ:– ಏಕೆಂದರೆ ಇಲ್ಲಿಯೇ ಈ ರೀತಿಯ ಮಾತಿನ ದೌರ್ಜನ್ಯ ನಡೆಸುವವರು ಹೊರಗಡೆ ಇನ್ಯಾವ ರೀತಿ ದೌರ್ಜನ್ಯ ನಡೆಸಬಹುದು?

ಶ್ರೀ ಕೆ. ಗೋಪಾಲ ಪೂಜಾರಿ:– ರವಿಯವರೆ, ಮಾತಿನ ದೌರ್ಜನ್ಯ ನಮ್ಮದೊ ನಿಮ್ಮದೊ ಎಂದು ಮನಸ್ಸು ಬಿಚ್ಚಿ ಹೇಳಿ.

(ಗೊಂದಲ)

ಶ್ರೀ ಸಿ.ಟಿ. ರವಿ:– ಇಡೀ ಘಟನೆಯನ್ನು ಮಾನವೀಯತೆಯ ನೆಲೆಯಲ್ಲೇ ನೋಡಬೇಕು, ಕಾಂಗ್ರೆಸ್, ಬಿಜೆಪಿ, ದಳ ಎನ್ನುವ ಪಕ್ಷದ ನೆಲೆಯಲ್ಲಿ ನೋಡುವುದಲ್ಲ. ಮುಖ್ಯಮಂತ್ರಿಗಳ ಘೋಷಣೆ ಏನಿದೆ, ನಮ್ಮ ಸರ್ಕಾರ ಬಡವರ ಪರ, ನಮ್ಮ ಸರ್ಕಾರ ಅಹಿಂದ ಪರ, ದೌರ್ಜನ್ಯಕ್ಕೆ ಒಳಗಾದವರು ಬಡವರು, ಈ ಸರ್ಕಾರ ಯಾವ ಕ್ಷಣಕ್ಕೂ ಭ್ರಷ್ಟಾಚಾರ ಸಹಿಸುವುದಿಲ್ಲ ಮುಖ್ಯಮಂತ್ರಿಗಳ ಹೇಳಿಕೆ..

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:– ಮಾನ್ಯ ಅಧ್ಯಕ್ಷರೆ, ಬಡವರು, ಶೋಷಿತರು ಎನ್ನುವ ವಿಚಾರಕ್ಕೆ ನನ್ನದೊಂದು ಮಾತಿದೆ, ನೋಡಿ ಸದಾ ಕಾಲ ಈ ದೇಶದಲ್ಲಿ ದಲಿತ ವಿರೋಧ, ದಲಿತ ದಮನ ನೀತಿ ನಡೆಯುತ್ತಿದೆ

ಎನ್ನುವುದಕ್ಕೆ ನನ್ನ ಹತ್ತಿರ ಉದಾಹರಣೆ ಇದೆ. ಇವರು ದಲಿತರ ಪರ, ಶೋಷಿತರ ಪರ ಎಂದು ಹೇಳುವಾಗ ನಾನು ಮಾತನಾಡಲೇಬೇಕಾಗುತ್ತದೆ, ದಯಮಾಡಿ ಅವಕಾಶ ಕೊಡಿ. ಆತ ಒಬ್ಬ ದಲಿತ ಮಂತ್ರಿ, ಇಲ್ಲಿತನಕ ಈ ಸದನದಲ್ಲಿ, ಇಡೀ ರಾಜ್ಯದಲ್ಲಿ...(ಗೊಂದಲ) ಎಲ್ಲಾ ಸಂದರ್ಭಗಳಲ್ಲೂ, ದೇವರಾಜ ಅರಸು ಕಾಲದಲ್ಲೂ....(ಗೊಂದಲ) ಆರ್.ಡಿ. ಕಿತ್ತೂರು ಎನ್ನುವ ಒಬ್ಬ ದಲಿತ ಮಂತ್ರಿಯ ರಾಜೀನಾಮೆ ಕೊಡಿಸಿದಂಥ ಇತಿಹಾಸವಿದೆ. ಅದೇ ರೀತಿ ಬೂಸ ಚಳುವಳಿಯ ಸಂದರ್ಭದಲ್ಲಿ ಬಸವಲಿಂಗಪ್ಪನವರನ್ನು ಇದೇ ಸದನದಲ್ಲಿ ರಾಜೀನಾಮೆ ಕೇಳಿದಂಥ ಇತಿಹಾಸವಿದೆ, ಮತ್ತೆ ರೇಣಕಾ ರಾಜೇಂದ್ರನ್ ಅವರು ಒಬ್ಬ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗೆ ಕೆಲಸ ಕೊಡಿಸಲಿಲ್ಲವೆನ್ನುವ. . . .

(ಈ ಸಂದರ್ಭದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಸಭೆಯ ನಡವಳಿಗಳನ್ನು ದಾಖಲಿಸದಿರಲು ಆದೇಶಿಸಿದರು)

(ಗೊಂದಲ)

ಉಪಾಧ್ಯಕ್ಷರು:- ಆಯಿತು ಕುಳಿತುಕೊಳ್ಳಿ, ಅವರು ಮಾತನಾಡುತ್ತಿದ್ದಾರೆ, ನೀವು ಆಮೇಲೆ ಮಾತನಾಡಿ.

ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್:- ನರೇಂದ್ರ ಸ್ವಾಮಿಯವರು ದಲಿತರ ಬಗ್ಗೆ ದಮನ ನೀತಿ ಎಂದು ಹೇಳಿದರು, ಹತ್ಯೆಗೊಳಗಾಗಿರುವವರು, ಹೋರಾಟ ಮಾಡಿದವವರೆಲ್ಲಾ ಹಿಂದುಳಿದ ವರ್ಗ ಮತ್ತು ದಲಿತ ವರ್ಗಕ್ಕೆ ಸೇರಿರತಕ್ಕಂಥವರು.

ಶ್ರೀ ಸಿ.ಟಿ. ರವಿ:- ಮುಖ್ಯಮಂತ್ರಿಗಳ ಘೋಷಣೆ ಏನು? ನಮ್ಮ ಸರ್ಕಾರ ಅಹಿಂದ ಪರ, ನಮ್ಮ ಸರ್ಕಾರ ಶೋಷಿತರ ಪರ, ನಮ್ಮ ಸರ್ಕಾರ ಭ್ರಷ್ಟಾಚಾರ ಸಹಿಸುವುದಿಲ್ಲ, ಇವತ್ತು ಯಲ್ಲಾಲಿಂಗ ಮಾಡಿದ ಅಪರಾಧವಾದರೂ ಏನು? ಯಲ್ಲಾಲಿಂಗ ತನ್ನ ಊರಿನಲ್ಲಿರುವ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದ್ದೇ ಅಪರಾಧವೇ? ಹಾಗಾದರೆ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದವರೆಗೆಲ್ಲರಿಗೂ ಸರ್ಕಾರದಲ್ಲಾಗುವ ಶಿಕ್ಷೆ ಏನು, ಮರಣಭಾಗ್ಯವೇ?

ಅಂದರೆ ಯಾರು ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತುತ್ತಾರೆ, ಅವರಿಗೆ ಈ ಸರ್ಕಾರದಲ್ಲಾಗುವ ಶಿಕ್ಷೆ, ಅವನು ಬದುಕುವ ಅವಕಾಶವನ್ನು ಕಳೆದುಕೊಳ್ಳುತ್ತಾನೆ....[ಗೊಂದಲ] ನಾನು ಮಾತನಾಡುವಾಗ ನೀವು ಮಧ್ಯ ಪ್ರವೇಶ ಮಾಡಿ ಸತ್ಯವನ್ನು ಹತ್ತಿಕ್ಕುವುದಕ್ಕಾಗುವುದಿಲ್ಲ.

[ಈ ಸಂದರ್ಭದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ಶ್ರೀ ಸಿ.ಟಿ. ರವಿ:– ಅಂದರೆ ಯಾರು ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತುತ್ತಾರೆ, ಆ ಧ್ವನಿ ಎತ್ತಿದವರಿಗೆ ರಕ್ಷಣೆ ಇಲ್ಲ.

ಅಧ್ಯಕ್ಷರು:– ದಯವಿಟ್ಟು ಚರ್ಚೆ ಸಾಕು ಕುಳಿತುಕೊಳ್ಳಿ, ಒಂದು ಗಂಟೆಯಾಗಿದೆ, ಸಾಧ್ಯವಿಲ್ಲ, ಉತ್ತರ ಹೇಳಿ.

(ಗೊಂದಲ)

ಶ್ರೀ ಸಿ.ಟಿ. ರವಿ:– ನಾನು ಈಗಷ್ಟೇ start ಮಾಡಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಇವರು ಮಾತನಾಡುವಾಗ ಮೊದಲು ಆಡಳಿತ ಪಕ್ಷದವರು ಡಿಸ್ಟರ್ಬ್ ಮಾಡಿದರು, ಗೂಂಡಾಗಿರಿ ಮಾಡುತ್ತಿದ್ದಾರೆ..

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಒಬ್ಬ ದಲಿತ ಸಚಿವರ ಮೇಲೆ ಇಲ್ಲಸಲ್ಲದ ಆರೋಪ ಹೊರಿಸುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):– ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 69 ರ ಕೆಳಗಡೆ ಯಲ್ಲಾಲಿಂಗ ಹತ್ಯೆ ವಿಚಾರದಲ್ಲಿ ಪ್ರಸ್ತಾವನೆಯನ್ನು ಮಾಡಿದ್ದಾರೆ. ಬಹುಶಃ......

(ಗೊಂದಲ)

ಅಧ್ಯಕ್ಷರು:– ಉತ್ತರ ಹೇಳಿ, ಒಂದು ಗಂಟೆಯಾಗಿದೆ, ಇದಕ್ಕೊಂದು ಇತಿಮಿತಿ ಬೇಡವೇ...

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಧ್ಯಕ್ಷರೆ, ಏನು ಇತಿಮಿತಿ ಮೀರಿ ನಾವು ಮಾತನಾಡಿದ್ದೇವೆ, ತಾವು ಏತಕ್ಕೆ ಗಂಭೀರವಾದರೊ ಗೊತ್ತಿಲ್ಲ...[ಗೊಂದಲ]

ಅಧ್ಯಕ್ಷರು:– ಎಲ್ಲರೂ ಕುಳಿತುಕೊಳ್ಳಿ, ರವಿಯವರೆ ಎರಡು ನಿಮಿಷದಲ್ಲಿ ನಿಮ್ಮ ಮಾತನ್ನು ಪೂರೈಸುವುದಿದ್ದರೆ ಪೂರೈಸಿ, ಇಲ್ಲದಿದ್ದರೆ ಸಾಧ್ಯವಿಲ್ಲ...[ಗೊಂದಲ]

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಈ ಬಿಜೆಪಿಯವರಿಗೆ ನಮ್ಮ ಮೇಲೆ ಇನ್ನೂ ಸೇಡು...[ಗೊಂದಲ]

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, (ಗೊಂದಲ) ನನ್ನ ಭಾವನೆಯನ್ನು ಹೇಳಬೇಕಾಗಿದೆ......

ಅಧ್ಯಕ್ಷರು:– ಒಂದು ಮಾತನ್ನು ಹೇಳುತ್ತೇನೆ, ಹಾಗಿದ್ದರೆ ಇದನ್ನೇ ಚರ್ಚೆ ಮಾಡಿ, ಸದನವನ್ನು ಮುಂದಕ್ಕೆ ಹಾಕೋಣ, ಬೇಡಿಕೆ ಮೇಲೆ ಚರ್ಚೆ ಮಾಡೋಣ, ಇನ್ನು ಒಂದು ಪ್ರಶ್ನೆಯನ್ನು ತೆಗೆದುಕೊಳ್ಳಲಿಲ್ಲ.....[ಗೊಂದಲ]

ಶ್ರೀ ಜಗದೀಶ್ ಶೆಟ್ಟರ್:– ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಇಲ್ಲಿ ಮರ್ಡರ್ ನಡೆಯುತ್ತದೆ, ಮಂತ್ರಿಗಳೆ ಅದರ ರಕ್ಷಣೆಗೆ ನಿಂತಿದ್ದಾರೆ, ನಾವು ಹೇಳುವುದಕ್ಕೆ ಅವಕಾಶವಿಲ್ಲವೆಂದರೆ, ನಾವು ಎಲ್ಲಿಗೆ ಹೋಗಬೇಕು? ಹೋಗಿ ನಾವು ಯಾವ ಸದನಕ್ಕೆ ಹೇಳೋಣ, ಅವಕಾಶವಿಲ್ಲವೆಂದರೆ ನಾವು ಎಲ್ಲಿಗೆ ಹೋಗಬೇಕು? ಮಾತನಾಡಲು 10–15 ನಿಮಿಷ ಅವಕಾಶ ಕೊಡಿ.......[ಗೊಂದಲ]

ಅಧ್ಯಕ್ಷರು:– ಅವಕಾಶ ಕೊಟ್ಟಿದ್ದೇವೆ, ಉಪಯೋಗ ಮಾಡಿಕೊಂಡಿದ್ದೀರಿ, ದುರುಪಯೋಗವಾಗಬಾರದು.....[ಗೊಂದಲ]

ಶ್ರೀ ಜಗದೀಶ್ ಶೆಟ್ಟರ್:- ಅವಕಾಶವನ್ನು ನಾವು ಎಂದೂ ದುರುಪಯೋಗ ಮಾಡಿಕೊಂಡಿಲ್ಲ, ಸದನದಲ್ಲಿ ನಾವು ಯಾವಾಗಲು upto the point ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು:- ಬೇರೆ ಕಾರ್ಯಕ್ರಮ ನಡೆಯಬೇಕೊ ಬೇಡವೊ?

ಶ್ರೀ ಜಗದೀಶ್ ಶೆಟ್ಟರ್:- ಆ ರೀತಿ [ಆಡಳಿತ ಪಕ್ಷ] ಅವರಿಗೆ ಹೇಳಿ ಸರ್, ಮಾತನಾಡುವಾಗ ಪ್ರತಿ ಹಂತದಲ್ಲಿ ಮಧ್ಯಪ್ರವೇಶ ಮಾಡುತ್ತಿದ್ದಾರೆ, ನಾವು ಮಾತನಾಡುವುದಕ್ಕೆ ಅವರು ಅವಕಾಶ ಕೊಡಲಿಲ್ಲ, ಇದು ಪದ್ಧತಿಯೇ?

(ಗೊಂದಲ)

ಅಧ್ಯಕ್ಷರು:- ನನಗೆ ಇರುವ ಜವಾಬ್ದಾರಿ, ಆಯಾ ದಿವಸದ ಈ ಸದನದ ಕಾರ್ಯಕಲಾಪವನ್ನು ಮುಗಿಸಬೇಕು, ಅರ್ಥವಾಗುತ್ತದೆಯೇ ಇಲ್ಲವೇ? 2 ಬೇಡಿಕೆ ಇದ್ದರೆ 4 ಜನ ಮಾತನಾಡುವುದಕ್ಕೆ ಆಗುತ್ತಿಲ್ಲ, ಮತ್ತೆ ಈ ಸದನವನ್ನು ಕರೆದದ್ದು ಏಕೆ? ಬೇಡಿಕೆಯನ್ನು ಪಾಸ್ ಮಾಡುವ ದೃಷ್ಟಿಯಿಂದ ಕರೆದದ್ದು.

ಶ್ರೀ ಗೋವಿಂದ ಎಂ ಕಾರಜೋಳ:- ಸರ್, ನಾವು ಬೆಳಿಗ್ಗೆಯಿಂದ ಸಹಕಾರ ಮಾಡಿದ್ದೇವೆ, 4 ದಿವಸದಿಂದ ಸಹಕಾರ ಮಾಡಿದ್ದೇವೆ, ನಾವ್ಯಾರು ಅಡ್ಡಿ ಮಾಡಿಲ್ಲ, ನಾವೆಲ್ಲಿ ಅಡ್ಡಿ ಮಾಡಿದ್ದೇವೆ, ನಾವು ವಿನಾ ಕಾರಣ ಮಾತನಾಡಿದ್ದರೆ ಹೇಳಿ...[ಗೊಂದಲ]

ಶ್ರೀ ಸಿ.ಟಿ. ರವಿ:- ಈಗ ನಿಲುವಳಿ ಸೂಚನೆ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ, ನಮ್ಮ ಧ್ವನಿಯನ್ನೇ ಹತ್ತಿಕ್ಕುವಂತೆ ಕೆಲಸವನ್ನು [ಆಡಳಿತ ಪಕ್ಷ] ಅವರು ಮಾಡಿದರೆ, ಅಲ್ಲಿ ನೋಡಿದರೆ ಜೀವ ತೆಗೆಯುತ್ತಾರೆ, ಇಲ್ಲಿ ನೀವು ಮಾತನಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ಬಗ್ಗೆ ಅತ್ಯಂತ ಗೌರವವನ್ನು ಇಟ್ಟುಕೊಂಡಿರುವವನು, ತಾವು ಅಧ್ಯಕ್ಷ ಪೀಠದಿಂದ

ಸದನವನ್ನು ಅತ್ಯುತ್ತಮವಾಗಿ ನಾವು ನಡೆಸುತ್ತಿದ್ದೀರೆನ್ನುವುದು ಇಡೀ ರಾಜ್ಯದ ಜನಕ್ಕೆ ಹೆಮ್ಮೆ ಇದೆ. ಈಗ ತಾನೆ ತಾವು ಬಂದು ಕುಳಿತುಕೊಂಡಿದ್ದೀರಿ. ನೀವು ಟಿವಿಯಲ್ಲಿ ಒಳಗಡೆ ನೋಡಿರಬಹುದು, ಆದರೆ ವಿಷಯದ ಗಾಂಭೀರ್ಯತೆ ಎನ್ನುವುದು, ಈ ತಾಂತ್ರಿಕ ವಿಷಯವನ್ನು ಮುಗಿಸಬೇಕೆನ್ನುವುದಕ್ಕಿಂತಲೂ ಮುಖ್ಯವಾಗಿರುವುದು.

ಅಧ್ಯಕ್ಷರು:– ಹಾಗಾದರೆ, ಬೇರೆ ಬೇಡಿಕೆಗಳ ಮೇಲೆ ಚರ್ಚೆ ಬೇಡವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅದೆಲ್ಲವೂ ಆಗಬೇಕು ಅಧ್ಯಕ್ಷರೆ, ಆದರೆ ಈ ವಿಷಯದ ಗಾಂಭೀರ್ಯತೆಯನ್ನು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು:– ಆಯಿತು, ಅದೇನು ಹೇಳಿರಿ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇದು ದಲಿತ ವಿರೋಧಿ ನೀತಿ, ಇದಕ್ಕೆ ನೀವು ಅವಕಾಶ ಕೊಡಬೇಡಿ, ದಲಿತ ಮಂತ್ರಿ ಮೇಲೆ ದಬ್ಬಾಳಿಕೆ ಮಾಡುವುದಕ್ಕೆ ಇವರು ಪ್ರಚೋದನೆ ಕೊಡಬಾರದು, ಸಾಕ್ಷಿ, ಆಧಾರಗಳಿದ್ದರೆ ತನಿಖೆ ಮಾಡಲಿ, ಯಾರು ತಪ್ಪಿತಸ್ಥರಿದ್ದರೂ ಅವರಿಗೆ ಶಿಕ್ಷೆಯಾಗಲಿ, ದಲಿತ ಮಂತ್ರಿ ಮೇಲೆ ಈ ರೀತಿಯ ಆರೋಪ ಬೇಡ, ಇತಿಹಾಸದಲ್ಲಿ ಇದು ನಡೆದುಕೊಂಡು ಬಂದಿದೆ, ನಮ್ಮ ಕೂಗಿಗೂ ದಯವಿಟ್ಟು ಅವಕಾಶ ಕೊಡಿ, ದಲಿತ ಮಂತ್ರಿ ವಿರುದ್ಧವಾಗಿ ಮಾತನಾಡುವುದಕ್ಕೆ ಅವಕಾಶವಿಲ್ಲವೆಂದು ದಯವಿಟ್ಟು ರೂಲಿಂಗ್ ಕೊಡಿ.

(ಗೊಂದಲ)

ಅಧ್ಯಕ್ಷರು:– ಇಲ್ಲಿ ದಲಿತರು, ಅವರು ದಲಿತರಲ್ಲ ಎನ್ನುವ ಪ್ರಶ್ನೆ ಇಲ್ಲ, ಅವರು ಮಂತ್ರಿ, ಇವರು ಶಾಸಕರು, ಅವರು ಪ್ರಶ್ನೆ ಎತ್ತಿದ್ದಾರೆ, ಚರ್ಚೆ ಮಾಡುತ್ತಾರೆ, ನೀವು ಎತ್ತಿಲ್ಲ, ಅವಕಾಶವಿಲ್ಲ ಸುಮ್ಮನೆ ಇರಿ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಇಲ್ಲಿ ಯಲ್ಲಾಲಿಂಗನ ಹತ್ಯೆಯ ಪರಿಸ್ಥಿತಿಯನ್ನು ಬಿಂಬಿಸುವಂಥ ಕೆಲಸ ಮಾಡಿದೆ, ಏನು ಪರಿಸ್ಥಿತಿ ಇದೆ?

ಯಲ್ಲಾಲಿಂಗನ ತಾಯಿ ಹೇಳುತ್ತಾರೆ, ಸತ್ಯ ನುಡಿದದ್ದಕ್ಕೆ ಕೊಲ್ಲಿಸಿಬಿಟ್ಟರಲ್ರಿ, ನ್ಯಾಯ ಮಾತನಾಡಿದವನನ್ನು ಅನ್ಯಾಯವಾಗಿ ಕೊಲ್ಲಿಸಿಬಿಟ್ಟರು, ಕುಂದಿರಿಸಿ ಅನ್ನ ಹಾಕುತ್ತೇನೆಂದ ಮಗ ಇಲ್ಲದೆ ನಾನು ಹೇಗೆ ಬದುಕಲಿ, ಆಕೆಯ ರೋಧನ. ಅಂದರೆ ಸತ್ಯ ನುಡಿದಿದ್ದಕ್ಕೆ ಕೊಲ್ಲಿಸಿಬಿಟ್ಟರು ಎಂದು. ಈಗ ಈ ಸರ್ಕಾರ ಅಹಿಂದ ಪರವೆಂದು ಹೇಳಿಕೊಂಡು ಬಂತು, ಒಬ್ಬ ಅಹಿಂದ ಬಡವ ಸತ್ಯ ಹೇಳಿದ ಕಾರಣಕ್ಕೆ...[ಗೊಂದಲ]

ಒಬ್ಬ ಮಾನ್ಯ ಸದಸ್ಯರು:- ಏಕೆ ರಾಜಕಾರಣ ಮಾಡುತ್ತೀರಿ, ಇನ್‌ವೆಸ್ಟಿಗೇಷನ್ ಮಾಡಿ ಆ ಆರೋಪಿಗಳನ್ನು ಕಂಡುಹಿಡಿದವರು ಯಾರು?..[ಗೊಂದಲ]

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ [ಸಹಕಾರ ಸಚಿವರು]:- ಕೊಲೆಗೂ, ಅಹಿಂದ ಸರ್ಕಾರಕ್ಕೂ ಸಂಬಂಧವೇನು? [ಗೊಂದಲ]

ಶ್ರೀ ಸಿ.ಟಿ. ರವಿ:- ನಾನು ಮಾತನಾಡುವುದಕ್ಕೆ ಬಿಡಿ, ಸಂಬಂಧವನ್ನು ಹೇಳುತ್ತೇನೆ..[ಗೊಂದಲ]

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ಅಹಿಂದಗೂ ಕೊಲೆಗೂ ಸಂಬಂಧ ಏನು? ಸರ್ಕಾರ ನಿಂತು ಕೊಲೆ ಮಾಡಿಸಿದೆಯಾ?

(ಗೊಂದಲ)

ಶ್ರೀ ಸಿ.ಟಿ. ರವಿ:- ನಮ್ಮ ಸ್ನೇಹಿತರು ಮಾನ್ಯ ಶಿವರಾಜ ತಂಗಡಗಿಯವರು ದಲಿತ ಮಂತ್ರಿ ಎಂದು ಬಾರಾಖೂನ್ ಮಾಫ್ ಎಂದು ಹೇಳಬಹುದು. ಹಿಂದುಳಿದ ವರ್ಗಕ್ಕೆ ಸೇರಿದವನು ಅನ್ಯಾಯವಾಗಿ ಕೊಲೆ ಆಗಿ ಹೋದನಲ್ಲ ಎಂದು ಹೇಳುವುದು ತಪ್ಪಾ?

ಅಧ್ಯಕ್ಷರು:- ಈ ವಿಷಯವನ್ನು ಪೂರೈಸಬೇಕೋ ಬೇಡ? ಇದೇನು ಚರ್ಚೆಯೇ? ಮಾನ್ಯ ರವಿಯವರೇ, ದಯವಿಟ್ಟು ವಿಷಯಕ್ಕೆ ಬನ್ನಿ. ಯಾರು

ಹೀಗೆ ಹೇಳಿದರು ಏನು ಎನ್ನುವುದು ಅನಗತ್ಯ. ತನಿಖೆಗೆ ಪೂರಕವಾಗಿ ಯಾವುದಾದರೂ ಮಾತು ಇದ್ದರೆ ಹೇಳಿ.

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ಏಕೆ ಈ ಮಾತು ಹೇಳಬೇಕಾಯಿತು ಎಂದರೆ, ನಾನು ದಲಿತ ವರ್ಗಕ್ಕೆ ಸೇರಿದವನು ಎನ್ನುವ ಕಾರಣಕ್ಕೆ ಬಾರಾ ಖೂನ್ ಮಾಫ್ ಇದೆಯಾ ನನಗೆ? ಏನು ಬೇಕಾದರೂ ಮಾಡಬಹುದಾ?

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಯಾರು ಆರೋಪಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಿ. ಯಾರು ಆರೋಪಿ ಅಲ್ಲ ಅವರು ಅಪರಾಧಿಯಾಗುವುದಿಲ್ಲ.

ಶ್ರೀ ಕೆ. ಶಿವಮೂರ್ತಿ:- ಕೋಮು ಭಾವನೆ ಕೆರಳಿಸತಕ್ಕಂತಹವರು. ಇದನ್ನೇ ರಾಜಕೀಯ ಬಂಡವಾಳ ಮಾಡಿಕೊಂಡಿರುವವರು.

ಶ್ರೀ ಸಿ.ಟಿ. ರವಿ:- ಈ ಸದನ ನಿಷ್ಪಕ್ಷಪಾತವಾಗಿ ಯೋಚನೆ ಮಾಡದೇ ಇದ್ದರೆ ನಾಳೆ ಬರುವಂತಹ ಸಮಸ್ಯೆಯೇ ಬೇರೆ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಗುರುತರವಾದ ಆರೋಪ ಇದ್ದರೆ ನೇರವಾಗಿ ಹೇಳಲಿ. ಸುಳ್ಳು ಸುಳ್ಳು ಮಾತುಗಳನ್ನು ಸದನದಲ್ಲಿ ಹೇಳಬಾರದು. ಅವರ ಹತ್ತಿರ ಏನು ಸಾಕ್ಷಿ ಇದೆ, ಅದನ್ನು ತೆಗೆದು ಇಡಲಿ. ಅವರು ಏನು ಬೇಕಾದರೂ ಹೇಳಲಿ, ಸಾಕ್ಷಿ ಸಮೇತ ಅದನ್ನು ರುಜುವಾತು ಮಾಡಲಿ. ತನಿಖೆ ನಡೆಯಲೇಬೆಕು, ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು. ಅವರು ಯಾರೇ ಆಗಿರಲಿ, ಅವರಿಗೆ ಶಿಕ್ಷೆಯಾಗಬೇಕು. ನಿಮ್ಮ ಹತ್ತಿರ ಸಾಕ್ಷಿ ಇಲ್ಲದೆ ಸುಳ್ಳು ಆರೋಪಗಳನ್ನು ಮಾಡುವುದು ಸರಿಯಲ್ಲ. ಒಬ್ಬ ದಲಿತನನ್ನು ವಿರೋಧ ಮಾಡುವುದು ಸರಿಯಲ್ಲ.

ಅಧ್ಯಕ್ಷರು:- ರೀ ಸ್ವಾಮಿ ನಿಮಗ್ಯಾಕೆ ಅದೆಲ್ಲ?

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಮಾನ್ಯ ಅಧ್ಯಕ್ಷರೆ, ದೇವರಾಜ ಅರಸ್‌ರವರ ಕಾಲದಲ್ಲಿ ನೀವೂ ಇದ್ದಿರಿ. ಅವತ್ತು ಆರ್.ಡಿ.ಕಿತ್ತೂರು ಅವರನ್ನು ರಾಜೀನಾಮೆ ಕೇಳಿದ್ದು ಇದೇ ಸದನದಲ್ಲಿ. ಆತ ದಲಿತ. ಬಸವಲಿಂಗಪ್ಪನವರ ರಾಜೀನಾಮೆ ಕೇಳಿದ್ದು ಇದೇ ಸದನದಲ್ಲಿ. ಮುಂದೆ ರೇಣುಕಾ ರಾಜೇಂದ್ರನ್ ಎಂಬ ಒಬ್ಬ Sub Inspector ಅನ್ನು selection ಮಾಡಿಕೊಡಲಿಲ್ಲವೆಂದು ಅವತ್ತು ರಾಜೀನಾಮೆ ಕೇಳಿದ್ದು, ಅಲ್ಲಿಯೂ ಒಬ್ಬ ದಲಿತಳೆ. ದೇವೇಂದ್ರಪ್ಪ ಕಾಳಪ್ಪರವರ ರಾಜೀನಾಮೆ ಕೇಳಿದ್ದು ನೀವೂ ನೋಡಿದ್ದೀರಿ. ಅವರನ್ನು ಸದನದಲ್ಲಿ ಇದೇ ತರಹ ರಾಜೀನಾಮೆ ಕೇಳಿದ್ದು. ಬಿ. ಸೋಮಶೇಖರ್ ನನ್ನ ಕ್ಷೇತ್ರದ ಮಾಜಿ ಶಾಸಕರು ಸಚಿವರಾಗಿದ್ದರು, ಅವರ ಮೇಲೆ ಯಾವುದೋ ಒಂದು ಕಾಪಿ ಪ್ರಕರಣ ತಂದು ಅವರ ಮೇಲೆ ಆರೋಪ ಮಾಡಿ ಅವರನ್ನೂ ಇದೇ ಸದನದಲ್ಲಿ ರಾಜೀನಾಮೆ ಕೇಳಿದ್ದು. ಇವತ್ತು ಅಮಾಯಕ ಶಿವರಾಜ ತಂಗಡಗಿ ಮೇಲೆ ಆರೋಪ ಇದ್ದರೆ ಇವರು ಹೇಳಲಿ. ಅದೇನು ಸಾಕ್ಷಿ ಇದೆ ತೆಗೆದುಕೊಂಡು ಬರಲಿ.

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ಇತಿಮಿತಿಯಲ್ಲಿ ಮಾತನಾಡಿ. ಸದನದಲ್ಲಿ ಏನು ವಿಷಯ ಇದೆ. ಅದಕ್ಕೆ ಪೂರಕವಾಗಿ ಹೇಳುವುದು ಬಿಟ್ಟು ಹಳೆಯ ಕಥೆಯನ್ನೆಲ್ಲಾ ಹೇಳುತ್ತೀರಾ? ಸಾಕು ಬಿಡಿ. ನೀವೊಬ್ಬರೇ ದಲಿತರ ಬಗ್ಗೆ ಪ್ರತಿಭಟನೆ ಮಾಡುವವರಲ್ಲ. ಬೇರೆಯವರೂ ಇದ್ದಾರೆ. ರವಿಯವರೆ, ಎರಡು ಮಾತು ಹೇಳಿ.

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ಜನವರಿ 10ನೇ ತಾರೀಖು ಯಲ್ಲಾಲಿಂಗನ ಕೊಲೆ ಆಯಿತು. ಜೂನ್ 20ನೇ ತಾರೀಖಿನವರೆಗೆ ಪ್ರಮುಖ ಆರೋಪಿಯನ್ನು ಬಂಧಿಸುವುದಿಲ್ಲ. ನನ್ನ ಪ್ರಶ್ನೆ ಇರುವುದು ಈ ಸರ್ಕಾರ ನಿಷ್ಪಕ್ಷಪಾತವಾಗಿದ್ದರೆ, ಯಾರನ್ನೂ ರಕ್ಷಣೆ ಮಾಡುವಂತಹ ಪ್ರಯತ್ನ ಮಾಡದೇ ಇದ್ದರೆ ಆರು ತಿಂಗಳ ಕಾಲ FIRನಲ್ಲಿ ಮೂರನೇ ಆರೋಪಿ ಆಗಿರುವವನು ಯಾರು ಕೊಲೆಯಾಗಿದ್ದಾನೆ ಅವರ ಮನೆಗೆ ಬಂದು ರಾಜಾರೋಷವಾಗಿ

ಧಮ್ಕಿ ಹಾಕುವುದಕ್ಕೆ ಅಷ್ಟು ಸ್ವಾತಂತ್ರ್ಯವನ್ನು ಕೊಟ್ಟವರ್ಯಾರು? ಯಾರು ಅವರ ರಕ್ಷಣೆಗಿದ್ದರು? ಯಾರು ಅವರ ರಕ್ಷಣೆಗಿದ್ದರು ಎಂದು ಹೇಳುವುದಕ್ಕೆ ಪೊಲೀಸರು ಅಸಹಾಯಕರಾಗಿದ್ದರು. ಇದು ತನಿಖೆಯಾಗಬೇಕು. ಈ ಕಾರಣಕ್ಕೆ ಸಾಂದರ್ಭಿಕವಾದ ಸಾಕ್ಷಿಗಳು ಮಾನ್ಯ ಶಿವರಾಜ ತಂಗಡಗಿಯವರನ್ನು ಬೆಟ್ಟು ಮಾಡುತ್ತವೆ. ಏಕೆಂದರೆ, ಅವರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಆ ಕ್ಷೇತ್ರದ ಶಾಸಕರು. ಆರೋಪಿ ಅವರ ಕಟ್ಟಾ ಬೆಂಬಲಿಗ. ಇದನ್ನು ಸಾರ್ವಜನಿಕವಾಗಿ ಹೇಳಿದ್ದಾರೆ, ಪೊಲೀಸ್ ವರದಿಯಲ್ಲಿಯೂ ಹೇಳಿದೆ. ಹಾಗಿದ್ದಾಗ ಆರು ತಿಂಗಳು ಆತ ಬಂಧನಕ್ಕೊಳಗಾಗಿಲ್ಲವೆಂದರೆ, ಅವರ ರಕ್ಷಣೆಗೆ ಇವರು ನಿಂತಿದ್ದಾರೆ ಎನ್ನುವುದು ಅಂಗೈ ಹುಣ್ಣಿನಷ್ಟು ಸ್ಪಷ್ಟ. ಇಲ್ಲಿ ದಲಿತರು, ಹಿಂದುಳಿದ ವರ್ಗದವರು ಒಂದು ಭಾಗ. ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದರೆ ಇವರ ಕ್ಷೇತ್ರದಲ್ಲಿ ಇವರ ಜಿಲ್ಲೆಯಲ್ಲಿ ಏನು ಪರಿಸ್ಥಿತಿ ಇದೆ ಎನ್ನುವುದು ಇನ್ನೊಂದು ಭಾಗ. ದಲಿತರು ಎನ್ನುವ ಕಾರಣಕ್ಕೋಸ್ಕರ ಕೊಲೆ ಮಾಡಿರುವುದನ್ನು ಮಾಫ್ ಮಾಡುವಂತಹ ಏನಾದರೂ Act ತನ್ನಿ. ದಲಿತರು ಯಾರನ್ನು ಕೊಲೆ ಮಾಡಿದರೂ ಕೂಡ ಯಾರೂ ಕೇಳುವ ಆಗಿಲ್ಲ. ಯಾರೂ arrest ಮಾಡುವ ಹಾಗಿಲ್ಲ, ಅವರನ್ನು ಯಾರೂ ಪ್ರಶ್ನೆ ಮಾಡುವ ಹಾಗಿಲ್ಲ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ದಲಿತರು ಎನ್ನುವ ಕಾರಣಕ್ಕೆ ಕೊಲೆ ಮಾಡಿದ್ದಾರೆಂದರೆ, ಯಾರು ಅವರು ದಲಿತರು ಕೊಲೆ ಮಾಡಿರುವವರು? ದಲಿತರು ಕೊಲೆ ಮಾಡಿರುವವರು ಯಾರು ಎಂದು ಹೇಳಬೇಕು. ಬಾಯಿಗೆ ಬಂದ ಮಾತುಗಳೆಲ್ಲಾ ಆಡುವುದಕ್ಕೆ ಅವಕಾಶವಿಲ್ಲ.

ಶ್ರೀ ಶಿವರಾಜ ಎಸ್. ತಂಗಡಗಿ:– ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ. ಅವತ್ತು ದೊಡ್ಡ ದಾಂಧಲೆ ಆಯಿತು, ಅವತ್ತು ರಾಜೀನಾಮೆ ಕೊಟ್ಟರಾ?

ಅಧ್ಯಕ್ಷರು:– ಮಾನ್ಯ ತಂಗಡಗಿಯವರೆ ಸುಮ್ಮನಿರಿ.

(ಗೊಂದಲ)

ಶ್ರೀ ಪ್ರಮೋದ್ ಮಧ್ವರಾಜ್:- ದಲಿತ ವಿರೋಧಿಯಾಗಿ ಮಾತನಾಡುವುದಕ್ಕೆ ಇದು ಸಂಘ ಪರಿವಾರದ ಬೈಠಕ್ ಅಲ್ಲ.

ಅಧ್ಯಕ್ಷರು:- ಮಾನ್ಯ ರವಿ ಅವರೇ, ಅನಾವಶ್ಯಕವಾಗಿ ಉದ್ರೇಕಗೊಳ್ಳತಕ್ಕಂತಹ ಮಾತನಾಡುವುದು ಬೇಡ.

ಶ್ರೀ ಸಿ.ಟಿ. ರವಿ:- ಅವರು ನನ್ನ ಮೇಲೆ ಬೇರೆ ಆರೋಪ ಮಾಡುತ್ತಿದ್ದಾರೆ. ಅವರು ಸಚಿವರಿದ್ದಾರೆ. ಅವರದೇ ಪೋಲೀಸ್ ಇಲಾಖೆ ಇದೆ.

ಅಧ್ಯಕ್ಷರು:- ಇದೇ ತರಹ ಮಾತನಾಡಿದರೆ ಹೇಗೆ? ಉದ್ರೇಕಗೊಳ್ಳತಕ್ಕಂತಹ ಮಾತುಗಳನ್ನು ಆಡುವುದಕ್ಕೆ ಹೋಗಬೇಡಿ. ವಿಷಯಕ್ಕೆ ಸಂಬಂಧಪಟ್ಟಂತೆ ಏನಾದರೂ ಇದ್ದರೆ ಹೇಳಿ.

ಶ್ರೀ ಸಿ.ಟಿ. ರವಿ:- ಇದೇ ಮಾತು ಹೇಳಿದ್ದಕ್ಕೆ ಯಲ್ಲಾಲಿಂಗ ಕೊಲೆ ಆದ. ಈ ಕ್ಷೇತ್ರದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ, ಲೂಟಿ ನಡೆಯುತ್ತಿದೆ ಎಂದು ಹೇಳುವುದು ಉದ್ರೇಕದ ಮಾತಾ? ಉದ್ರೇಕಕ್ಕೊಳಗಾಗುವವರು ಯಾರು? ಯಾರು ಲೂಟಿ ಹೊಡೆದಿದ್ದಾರೆ, ಅವರು ಉದ್ರೇಕಕ್ಕೊಳಗಾಗಬೇಕು. ಯಾರು ಲೂಟಿ ಹೊಡೆದಿಲ್ಲ ಅವರು ನನಗೆ ಸಂಬಂಧವಿಲ್ಲವೆಂದು ಇರಬೇಕು.

ಅಧ್ಯಕ್ಷರು:- ಇದೇನಾ ಭಾಷಣ? ನೀವೇನು ಚರ್ಚೆಗೆ ಒಳಪಡಿಸಿದ್ದಿರಿ, ಈ ವಿಷಯಕ್ಕೆ ಸಂಬಂಧಪಟ್ಟ ವಿಷಯವಾ ಇದು?

ಶ್ರೀ ಸಿ.ಟಿ. ರವಿ:- 60ರ ದಶಕದಲ್ಲಿ ನೀವು ಅಧಿಕಾರದಲ್ಲಿದ್ದಾಗ ನಿಮ್ಮ ಮಾತನ್ನೂ ಉದ್ರೇಕ ಎಂದು ಕೆಲವು ಅಧಿಕಾರದಲ್ಲಿರವರು ಭಾವಿಸುತ್ತಿದ್ದರು.

ಅಧ್ಯಕ್ಷರು:- ಆಯಿತು ಪೂರೈಸಿ.

ಶ್ರೀ ಸಿ.ಟಿ. ರವಿ:- ಈಗ ನೀವು ಅಧಿಕಾರದಲ್ಲಿ ಇಲ್ಲದೆ ಇದ್ದಾಗ ನೀವು ಮಾತನಾಡುವ ಮಾತು ಕೂಡ ಅಧಿಕಾರದಲ್ಲಿದ್ದವರಿಗೆ ಉದ್ರೇಕ ಎಂದು ಅನ್ನಿಸುತ್ತಿತ್ತು.

ಅಧ್ಯಕ್ಷರು:- ದಯವಿಟ್ಟು ಪೂರೈಸಿ.

ಶ್ರೀ ಸಿ.ಟಿ. ರವಿ:- ಇದು ನಿಷ್ಪಕ್ಷಪಾತವಾದ ತನಿಖೆಯಾಗಬೇಕು. ಈಗಿನ ಯಾವುದೇ ಲೆಕ್ಕದಲ್ಲಿ ಯೋಚನೆ ಮಾಡಿದರೂ ಕೂಡ ಒಬ್ಬ ಆರೋಪಿ ಆರು ತಿಂಗಳ ಕಾಲ ಬೇಕಾಬಿಟ್ಟಿಯಾಗಿ ಓಡಾಡಿಕೊಂಡು ಬೆದರಿಸಿಕೊಂಡು ಇರುತ್ತಾನೆಂದರೆ, ನಮ್ಮ ಪೊಲೀಸ್ ವ್ಯವಸ್ಥೆ ದುರ್ಬಲವಾಗಿದೆ. ಅಥವಾ ಪೊಲೀಸ್ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಕೆಲಸವನ್ನು ನಾನು ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗಾದರೆ ಹೆದರಿಸಿದವರು ಯಾರು? ಮಾಡಿದವರ್ಯಾರು?

ಶ್ರೀ ಕೆ. ಶಿವಮೂರ್ತಿ:- Moral policing ಮಾಡಿಲ್ಲ, ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಮಾಡಿಲ್ಲ, ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು:- ಮಾನ್ಯ ತಂಗಡಗಿಯವರೆ, ದಯವಿಟ್ಟು ಅವರಿಬ್ಬರಿಗೆ ಹೇಳಿ.

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ನನ್ನ ವಿನಂತಿ ಇಷ್ಟೆ. ನ್ಯಾಯಯುತವಾಗಿ ತನಿಖೆ ಆಗಬೇಕೆಂದರೆ, COD ಮೇಲೆ ಕೂಡ influence ಮಾಡುವ ಸಾಧ್ಯತೆ ಇದೆ. ಹಾಗಾಗಿ ಇದನ್ನು CBI ಗೆ ಕೊಡಬೇಕು ಹಾಗೂ ಅವರು ರಾಜೀನಾಮೆ ಕೊಡಬೇಕು.

ಶ್ರೀ ಕೆ. ಶಿವಮೂರ್ತಿ:- ನೀವಿದ್ದಾಗ............

ಶ್ರೀ ಸಿ.ಟಿ. ರವಿ:- ಯಾರನ್ನೂ ಮಂತ್ರಿ ಮಾಡಬೇಕೆಂದು ಹೇಳುವುದು ನನ್ನ ಅಧಿಕಾರವಲ್ಲ. ಇವರಿಗೆ ಅದರ ಬದಲು ದಲಿತರನ್ನೇ ಮಂತ್ರಿ ಮಾಡಬೇಕೆಂದರೆ ಅವರನ್ನೇ ಮಾಡಲಿ. ನನ್ನ ಅಧಿಕಾರ ಅಲ್ಲ ಅದು. ಅದು ಮಾನ್ಯ ಮುಖ್ಯ ಮಂತ್ರಿಗಳ ವಿವೇಚನೆಗೆ ಬಿಟ್ಟಿರುವಂತಹ ಸಂಗತಿ. ಇದರ ಜೊತೆಗೆ ಅಲ್ಲಿಯ ಪರಿಸ್ಥಿತಿ ಬದಲಾಗಬೇಕು. ಇಷ್ಟೆಲ್ಲಾ ಏಕೆ ಧ್ವನಿ ಎತ್ತಬೇಕಾಯಿತು ಎಂದರೆ, ಅಲ್ಲಿಯ ಪರಿಸ್ಥಿತಿ ಬದಲಾಗಬೇಕು. ಮಾನ್ಯ ಶಿವರಾಜ ತಂಗಡಗಿಯವರು ನಮ್ಮ ಜೊತೆ ಇದ್ದಾಗ ಹೀಗಿರಲಿಲ್ಲ. ಏಕೋ ಏನೋ?........(ಗೊಂದಲ) ಈಗ ಅವರು ಬದಲಾಗಿರುವ ರೀತಿ ಅಲ್ಲಿಯ

ಪರಿಸ್ಥಿತಿಯನ್ನು ಬದಲಾಯಿಸಿದೆ. ಜನಸಾಮಾನ್ಯರು ಧ್ವನಿ ಎತ್ತದ ಹಾಗೆ ಅಲ್ಲಿಯ ಪರಿಸ್ಥಿತಿ ಬದಲಾಗಿದೆ. ಪರಿಸ್ಥಿತಿ ಬದಲಾಗಬೇಕೆಂದರೆ, ಅವರು ಮಂತ್ರಿ ಸ್ಥಾನದಲ್ಲಿ ಇರುವುದು ಸೂಕ್ತವಲ್ಲ. ಅವರ ಬದಲಿಗೆ ಮಾನ್ಯ ನರೇಂದ್ರಸ್ವಾಮಿಯವರನ್ನೇ ಮಂತ್ರಿ ಮಾಡಲಿ. ಮಾನ್ಯ ಶಿವಮೂರ್ತಿಯವರನ್ನೇ ಮಂತ್ರಿ ಮಾಡಲಿ. ನನಗೆ ಸಂಬಂಧ ಇಲ್ಲ. ಆದರೆ ಅಲ್ಲಿಯ ಪರಿಸ್ಥಿತಿ ಬದಲಾಗಬೇಕು. ಸತ್ಯ ನುಡಿಯುವುದಕ್ಕೆ ಧೈರ್ಯವಾಗಿ ಮುಂದೆ ಬರುವಂತ ಸ್ಥಿತಿ ನಿರ್ಮಾಣವಾಗಬೇಕು. ಆಗ ಮಾತ್ರ ಅಹಿಂದಗೆ ರಕ್ಷಣೆ ಸಿಗುತ್ತದೆ. ಕೊಲೆಯಾದ ಯಲ್ಲಾಲಿಂಗ ಹಿಂದುಳಿದ ವರ್ಗಕ್ಕೆ ಸೇರಿದವನು. ಕುರುಬ ಸಮಾಜಕ್ಕೆ ಸೇರಿದವನು. ಆ ಸಮಾಜದವರೇ ಮುಖ್ಯ ಮಂತ್ರಿಯಾಗಿದ್ದಾಗ ಆ ಸಮಾಜದ ಧ್ವನಿ ಎತ್ತುವಂತಹ ಯುವಕರಿಗೆ ರಕ್ಷಣೆ ಇಲ್ಲದೆ ಇದ್ದರೆ ಇನ್ಯಾರಿಗೆ ರಕ್ಷಣೆ ಸಿಗುವುದಕ್ಕೆ ಸಾಧ್ಯ? ನಿಷ್ಪಕ್ಷಪಾತವಾಗಿ ತನಿಖೆಯಾಗಬೇಕೆಂದು ಹೇಳಿ,.......ಅಧ್ಯಕ್ಷರೆ, ಸತ್ಯವನ್ನು ಬಹುಮತದ ಆಧಾರದ ಮೇಲೆ ಹತ್ತಿಕ್ಕುವುದಕ್ಕಾಗುವುದಿಲ್ಲ. ಸತ್ಯವನ್ನು ಬಹುಮತದ ಆಧಾರದ ಮೇಲೆ ಹತ್ತಿಕ್ಕುವುದಕ್ಕೆ ಹೋದವರೆಲ್ಲ ಏನು ಸ್ಥಿತಿ ಆಗಿದೆ ಎನ್ನುವುದನ್ನು ಪ್ರಜಾಪ್ರಭುತ್ವ ಕಲಿಸಿ ಕೊಟ್ಟಿದೆ.

ಅಧ್ಯಕ್ಷರು:- ನೀವು ಪೂರೈಸುತ್ತೀರೋ ಇಲ್ಲ...

ಶ್ರೀ ಸಿ.ಟಿ. ರವಿ:- ಅಧ್ಯಕ್ಷರೆ, ಎರಡೇ ಮಾತು ಹೇಳಿ ಮುಗಿಸುತ್ತೇನೆ.

(ಗೊಂದಲ)

ಇಂದ್ರ ತಕ್ಷಕನಿಗೆ ಆಶ್ರಯ ಕೊಟ್ಟ.

ಅಧ್ಯಕ್ಷರು:- ಆ ಕಥೆಯೆಲ್ಲಾ ಬೇಡಾರಿ. ಇದಕ್ಕೆ ಸಂಬಂಧಪಟ್ಟಂತೆ ಏನಾದರೂ ಇದ್ದರೆ ಹೇಳಿ.

ಶ್ರೀ ಸಿ.ಟಿ. ರವಿ:- ಹೇಳುತ್ತೇನೆ, ಹೇಳಬೇಕಲ್ಲ. ಇಂದ್ರ ತಕ್ಷಕನಿಗೆ ಆಶ್ರಯ ಕೊಟ್ಟ ಕಾರಣಕ್ಕೆ "ಇಂದ್ರಾಯ ತಕ್ಷಕಾಯ ಸ್ವಾಹಾ" ಎಂದು ಕೊನೆಗೆ ಇಂದ್ರನ ಸಮೇತ ಕೆಳಗಡೆ ಅಗ್ನಿಕುಂಡಕ್ಕೆ ಬರಬೇಕಾಯಿತು. ಈಗ ನೀವು

ಶಿವರಾಜ್ ತಂಗಡಗಿಯೊಬ್ಬರನ್ನು ರಕ್ಷಣೆ ಮಾಡುವುದಕ್ಕೆ ಹೋದರೆ ಇಡೀ ಕಾಂಗ್ರೆಸ್ ಅಗ್ನಿಕುಂಡಕ್ಕೆ ಬಂದು ಬೀಳಬೇಕಾಗುತ್ತದೆ. ಆ ರೀತಿ ಬೀಳಬಾರದು ಎಂದರೆ ತನಿಖೆಯನ್ನು ನಿಷ್ಪಕ್ಷಪಾತವಾಗಿ ಮಾಡುವುದಕ್ಕೆ ಅವಕಾಶ ಕೊಡಿ. ಇಷ್ಟೇ ನಾನು ಕೇಳುವುದು.

ಅಧ್ಯಕ್ಷರು:- ಆಯಿತು. ಈಗ ಚರ್ಚೆ ಮುಕ್ತಾಯವಾಯಿತು. ಮಾನ್ಯ ಗೃಹ ಸಚಿವರು ಉತ್ತರ ಹೇಳಬೇಕು.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):- ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರೋಧ ಪಕ್ಷದ ನಾಯಕರು ಮತ್ತು ಹಲವಾರು ಸದಸ್ಯರುಗಳು ಯಲ್ಲಾಲಿಂಗನ ಕೊಲೆ ಪ್ರಕರಣದ ವಿಚಾರದಲ್ಲಿ ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾರೆ. ಬಹುಶಃ ಇಡೀ ಸದನ ಆ ಕಡೆಯಿರಬಹುದು, ಈ ಕಡೆಯಿರಬಹುದು, ಈ ಒಂದು ಹೀನಾಯಕರವಾದಂಥ ಕೊಲೆಯಾಗಿರುವುದನ್ನು ಯಾರೂ ಒಪ್ಪುವುದಿಲ್ಲ. ಇದನ್ನು ಯಾರೇ ಮಾಡಿರಲಿ, ಅವರಿಗೆ ತಕ್ಕ ಶಿಕ್ಷೆಯನ್ನು ಕೊಡುವುದಕ್ಕೆ ಸರ್ಕಾರ ಈಗಾಗಲೇ ಮುಂದೆ ಬಂದಿದೆ. ಇಲ್ಲಿ preliminary stage ನಲ್ಲಿ ಸ್ವಲ್ಪ setback ಆಗಿದೆ. ಏಕೆಂದರೆ, ಇದು ಒಂದು ರೈಲ್ವೆ ಲೈನ್‌ನಲ್ಲಿ ಅವರ ಹೆಣ ಸಿಕ್ಕಿತು. Murder ಆಗಿರುವುದು 11ನೇ ತಾರೀಖು, ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ರವಿಯವರು 10ನೇ ತಾರೀಖು ಎಂದು ಹೇಳಿದರು. 10ನೇ ತಾರೀಖಲ್ಲ, 11ನೇ ತಾರೀಖು murder ಆಗಿರುವುದು. ಇದು ಗದಗ್ ಹತ್ತಿರದಲ್ಲಿ ಒಂದು ರೈಲ್ವೆ ಲೈನ್ ಹತ್ತಿರ ಆಗಿರುವುದು. ಅವತ್ತು ರೈಲ್ವೆ ಪೊಲೀಸ್‌ನವರು ಇದನ್ನು 174 CRPC ಯಲ್ಲಿ ಇದೊಂದು ಆತ್ಮಹತ್ಯೆ ತರಹದಲ್ಲಿ ಕೇಸ್‌ನ್ನು ಬುಕ್ ಮಾಡುತ್ತಾರೆ. ತಮಗೆ ಗೊತ್ತಿದೆ, ಏನಾಗುತ್ತದೆಂದರೆ, ಈ ರೈಲ್ವೆ ಪೊಲೀಸ್‌ನವರು ಬೇರೆ ಪೊಲೀಸರ ಹಾಗೆ ಅದೊಂದು remort area ಅಲ್ಲಿ ಹಿರಿಯ officerಗಳು ಯಾರೂ ಇರುವುದಿಲ್ಲ. ಅದೇನಾಗುತ್ತದೆ ಅಲ್ಲಿ ಎ.ಎಸ್.ಐ ಅಥವಾ ಎಸ್.ಐ. ಇರುತ್ತಾರೆ. ಅವರು ಇದನ್ನು ದಾಖಲೆ ಮಾಡಿ ಈ ಕೇಸ್ ಬಗ್ಗೆ investigation ಮಾಡುವುದಕ್ಕೆ ಅವರ ಹತ್ತಿರ infrastructure ಬೇರೆ ಇಲ್ಲ. ಇದನ್ನು ದಿನಾಂಕ 18-02-2015 ರಲ್ಲಿ ಯಲ್ಲಾಲಿಂಗರವರ

sister ಮಂಜುಳಾರವರು ರೈಲ್ವೆ ಪೊಲೀಸ್‌ನವರಿಗೆ ಒಂದು complaint ಕೊಡುತ್ತಾರೆ. ಅದರಲ್ಲಿ ಇದು suicide ಅಲ್ಲ, ಇದು murder ಎಂದು ಹೇಳಿ. ಇದರಲ್ಲಿ ಅವರು ಏನು ಹೇಳುತ್ತಾರೆಂದರೆ ಬಾಲನಗೌಡ, ಪರಶುರಾಮ್, ಹನುಮೇಶ್‌ನಾಯಕ್, ಈ ಮೂರು ಜನ ಸೇರಿಕೊಂಡು ಅವರು ನನ್ನ ತಮ್ಮನ ಕೊಲೆ ಮಾಡಿದ್ದಾರೆಂದು complaintನಲ್ಲಿ ಹೇಳುತ್ತಾರೆ. ನಂತರ ಈ ಕೇಸ್ ಬಗ್ಗೆ ರೈಲ್ವೆ ಪೋಲಿಸ್‌ನವರು ಏನು ಮಾಡುತ್ತಾರೆಂದರೆ, ಮೊದಲು ಡಿ.ಜಿ.ಪಿ. ಯವರಿಗೆ ಬರೆಯಬೇಕು, ಮೊದಲು ಆ ತರಹ ಇರಲಿಲ್ಲ, ಕೋರ್ಟಿನಿಂದ ಆರ್ಡರ್ ಬಂತು, ಏನೆಂದರೆ Railway Manual ಪ್ರಕಾರ DGP ಯವರಿಗೆ ಮಾತ್ರ ಈ ಕೇಸ್‌ನ್ನು ತೆಗೆದು regular Police Station ಗೆ ಕೊಡುವುದಕ್ಕೆ ಅಧಿಕಾರವಿದೆಯೆಂದು ಬರೆಯುತ್ತಾರೆ. ನಮ್ಮ ಡಿ.ಜಿ.ಪಿ. ಯವರು ಈ ಕೇಸ್‌ನ್ನು ದಿನಾಂಕ 10–04–2015 ರಲ್ಲಿ ಕೊಪ್ಪಳ ನಗರ ಪೊಲೀಸ್ ಸ್ಟೇಷನ್‌ಗೆ transfer ಮಾಡುತ್ತಾರೆ. ಅದು transfer ಆದಮೇಲೆ, ನೀವು ಹೇಳಿದ ಹಾಗೆ ಐದಾರು ತಿಂಗಳು ಆಗಲಿಲ್ಲ, arrest ಮಾಡುವುದಕ್ಕೆ. ದಿನಾಂಕ: 10–04–2015 ರಂದು transfer ಆದ ಮೇಲೆ, ಇದರಲ್ಲಿ ಮೊದಲು 8 ಜನ ಆರೋಪಿಗಳು ಎಂದು ಇರುತ್ತಾರೆ, ಮತ್ತೆ ಅದನ್ನು 9 ಜನ ಆರೋಪಿಗಳು ಎಂದು ಹೇಳುತ್ತಾರೆ. ನಾನು ಈಗ ಆರೋಪಿಗಳ ಹೆಸರನ್ನು ಹೇಳುತ್ತೇನೆ. ನೀವು ಅಶೋಕ್‌ನಾಯಕ್ ವಿಚಾರ ಹೇಳಿದಿರಿ. ಅಶೋಕ್‌ನಾಯಕ್ ಇದರಲ್ಲಿ ಆರೋಪಿಯಲ್ಲ. ಅದು ಬೇರೆ ಇನ್ನೊಂದು ಕೇಸ್‌ನಲ್ಲಿ ಗುಡಿಸಲು ಸುಟ್ಟ ಕೇಸ್‌ನಲ್ಲಿ ಅಶೋಕ್‌ನಾಯಕ್ ಆರೋಪಿ. ಆದರೆ ಇದರಲ್ಲಿ 9 ಜನ ಆರೋಪಿಗಳಿರುತ್ತಾರೆ. ಬಾಲನಗೌಡನನ್ನು 19–05–2015 ರಂದು arrest ಮಾಡುತ್ತಾರೆ. ಅದೇ ರೀತಿ ಪರಶುರಾಮ್‌ನನ್ನು ದಿನಾಂಕ 16–05–2015 ರಂದು arrest ಮಾಡುತ್ತಾರೆ. ಹನುಮೇಶ್‌ನಾಯಕನ ಮಗನಾದ ಮಹಾಂತೇಶನನ್ನು 14–05–2015 ರಂದು arrest ಮಾಡುತ್ತಾರೆ. ದುರ್ಗಪ್ಪ ದುರ್ಗೇಶನನ್ನು 14–05–2015 ರಂದು, ಮನೋಜ್ ಪಾಟೀಲ್‌ರನ್ನು 14–05–2015 ರಂದು arrest ಮಾಡುತ್ತಾರೆ. ಇನ್ನಿಬ್ಬರು ನಂದಕುಮಾರ್ ಮತ್ತು ಯಮರಪ್ಪ ದಿನಾಂಕ 29–06–2015 surrender ಆಗುತ್ತಾರೆ.

ತದನಂತರ ಇದರಲ್ಲಿ ಸಾಕಷ್ಟು ಪ್ರಗತಿ ಸರಿಯಾಗಿ ಆಗುತ್ತಿಲ್ಲವೆಂದು ಸಾಕಷ್ಟು complaint ಬಂದಮೇಲೆ ನಮ್ಮ ಮುಖ್ಯಮಂತ್ರಿಯವರು ಈ ಕೇಸ್‌ನ್ನು ಸಿ.ಐ.ಡಿ. ಯವರಿಗೆ ಒಪ್ಪಿಸುತ್ತಾರೆ. ದಿನಾಂಕ: 19-06-2015 ರಂದು ಸಿ.ಐ.ಡಿ. ಯವರು ಈ ಕೇಸ್‌ನ್ನು ತೆಗೆದುಕೊಳ್ಳುತ್ತಾರೆ. ಇದಾದ ಮೇಲೆ ಸಿ.ಐ.ಡಿ. ಯವರು ಹನುಮೇಶ್ ನಾಯಕ್‌ನನ್ನು ದಿನಾಂಕ 21-06-2015 ರಂದು arrest ಮಾಡುತ್ತಾರೆ. ಸಿ.ಐ.ಡಿ ಯವರು ಈ case ತೆಗೆದುಕೊಂಡು ಸುಮಾರು ಎರಡು ದಿವಸದಲ್ಲಿ ಅವರನ್ನು arrest ಮಾಡುತ್ತಾರೆ. ಈ ರೀತಿಯಲ್ಲಿ ಎಲ್ಲಾ ಆರೋಪಿಗಳು ಈಗಾಗಲೇ arrest ಆಗಿದ್ದಾರೆ. ಇವತ್ತು ಈ ವಿಚಾರದಲ್ಲಿ ತಾವೆಲ್ಲರೂ ಹೇಳಿದ ಹಾಗೆ ನಾನು ಒಪ್ಪಿಕೊಳ್ಳುತ್ತೇನೆ. ಯಲ್ಲಾಲಿಂಗ ಒಬ್ಬ ವಿದ್ಯಾರ್ಥಿಯಾಗಿ ಆ ಗ್ರಾಮದಲ್ಲಿ ಏನು ಅನ್ಯಾಯವಾಗುತ್ತಿದೆ, ಏನು ಭ್ರಷ್ಟಾಚಾರ ನಡೆಯುತ್ತದೋ ಅದರ ವಿಚಾರದಲ್ಲಿ ಒಂದು ಟಿ.ವಿ.ಗೆ interview ಕೊಡುತ್ತಾರೆ. ಆ TV interview ಕೊಟ್ಟಮೇಲೆ ನಾಲ್ಕೈದು ದಿವಸಗಳಾದ ಮೇಲೆ ಇದು ಆಗುತ್ತದೆ. ಅವರು ಇದೊಂದು ಕಗ್ಗೊಲೆಯೆಂದು ಹೇಳಬಹುದು. ಇದರಲ್ಲಿ ನಾವೆಲ್ಲಾ ಸೇರಿ ಇಂಥ ಪ್ರಕರಣಗಳು ಮರುಕಳಿಸದ ಹಾಗೆ ನಾವು ಇವತ್ತು ನಾವೆಲ್ಲರೂ ಸೇರಿ ಮಾಡಬೇಕಾಗುತ್ತದೆ. ದಯವಿಟ್ಟು ಇದರಲ್ಲಿ ರಾಜಕೀಯ ತರುವುದು ಬೇಕಾಗಿಲ್ಲ. ಇಡೀ ಕರ್ನಾಟಕ ಜನರು, ನಾವೆಲ್ಲರೂ ಒಟ್ಟಿಗಿದ್ದೇವೆ. ಮಾನ್ಯ ಸದಸ್ಯರಾದ ಸಿ.ಟಿ. ರವಿಯವರು ಹೇಳುತ್ತಾರೆ, ನಾವು ಬರೀ ಅಹಿಂದ ಪರವೆಂದು. ಈ ಸರ್ಕಾರ ಆರೂವರೆ ಕೋಟಿ ಜನರ ಪರವಾಗಿದೆ. ಯಾರು ಶೋಷಣೆಗೊಳಗಾಗಿದ್ದಾರೋ ಯಾರು ಹಿಂದುಳಿದವರಿದ್ದಾರೆ, ದಲಿತರಿದ್ದಾರೆ, ಅವರಿಗೂ ಕೂಡ ನಾವು ಶಕ್ತಿ ಕೊಡಬೇಕಾಗಿರುವುದಕ್ಕೋಸ್ಕರವಾಗಿ ಪೊಲೀಸ್ ರಕ್ಷಣೆ ಅವರಿಗೆ ಹೆಚ್ಚು ಬೇಕಾಗಿರುವುದರಿಂದ ಬಹುಶಃ ಸ್ವಲ್ಪ ತೂಕ ಹೆಚ್ಚು ಅವರಿಗೆ ಕೊಡುತ್ತೇವೆಯೇ ಹೊರತು ಈ ರೀತಿಯ ಯಾವುದೇ ಪ್ರಕರಣ ಆಗುವುದಕ್ಕೆ ನಾವು ಬಿಡುವುದಿಲ್ಲ. ಅದು ಯಾರೋ ಪ್ರಭಾವಿಗಳಿದ್ದರೂ ಕೂಡ ಅವರನ್ನು ನಾವು ಬಿಡುವುದಿಲ್ಲ. ಆದರೆ ಒಂದಂಶವನ್ನು ತಾವು note ಮಾಡಿಕೊಳ್ಳಬೇಕು. ಇದರಲ್ಲಿ ಏನಾಗುತ್ತದೆ, ನಮ್ಮ ಪೊಲೀಸ್‌ನವರು case ತೆಗೆದುಕೊಂಡ ಮೇಲೆ

ಇವರಿಗೆ death note ಸಿಗುತ್ತದೆ. ದಿನಾಂಕ 12–04–2015 ರಂದು death note ಸಿಕ್ಕಿರುವುದು. ಆ death note ನಲ್ಲಿ ಏನು ಹೇಳಲಾಗಿದೆಯೆಂದರೆ, ಅವರು ಬರೆದಿರುವುದರಲ್ಲಿ ಇಬ್ಬರ ಹೆಸರಿದ್ದು ಅದು ಹನುಮೇಶ್ ನಾಯಕ್ ಮತ್ತು ಬಾಲನಗೌಡ ಮತ್ತು ಅವರ ಸಂಗಡಿಗರು ಆರು ಜನರೇ ನನ್ನ ಸಾವಿಗೆ ಕಾರಣರೆಂದು death note ನಲ್ಲಿ ಹೇಳಿದ್ದಾರೆ. ಅದೇ ರೀತಿಯಲ್ಲಿ ಮಂಜುಳಾರವರು ಬಾಲನಗೌಡ, ಪರಶುರಾಮ್, ಹನುಮೇಶ್ ನಾಯಕ್ ಬಗ್ಗೆ ಈ ವಿಚಾರದಲ್ಲಿ ಬರೆಯುತ್ತಾರೆ. ಈ death note ನಲ್ಲಾಗಲಿ ಅಥವಾ ಅವರ sister ಕೊಟ್ಟಿರುವ complaint ನಲ್ಲಾಗಲಿ ಯಾವುದೇ ಶಿವರಾಜ್ ತಂಗಡಗಿಯವರ ಹೆಸರು ಬಂದಿಲ್ಲ. Investigation ನಲ್ಲಿಯೂ ಕೂಡ ಇದುವರೆಗೆ ಶಿವರಾಜ್ ತಂಗಡಗಿಯವರ ಹೆಸರು ಬರಲಿಲ್ಲ. ಇವತ್ತು ನಾನು ಕೂಡ ಆ SP ಯವರೊಟ್ಟಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದೆ, ನಾನು ಕೇಳಿದ್ದೇನೆ, ಈ ಕೇಸ್‌ನಲ್ಲಿ ಶಿವರಾಜ್ ತಂಗಡಗಿಯವರ ಹೆಸರು ಬರುತ್ತಿದೆಯೇ ಎಂದು, ಅದಕ್ಕೆ SP ಯವರು ಹೇಳಿದರು, ಯಾವುದೇ ಹೆಸರಿಲ್ಲ, ನಾವು ನಿಷ್ಪಕ್ಷಪಾತವಾಗಿ ತನಿಖೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಮುಖ್ಯಮಂತ್ರಿಗಳು ಕೂಡ ಒಂದು ಸಂದರ್ಭದಲ್ಲಿ ಹೇಳಿದ್ದಾರೆ, ಕಠಿಣವಾದ ಕ್ರಮ ತೆಗೆದುಕೊಳ್ಳಬೇಕು, ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು, ಯಾರೇ ಇದ್ದರೂ ಕೂಡ ಅವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಹೇಳಿದ್ದಾರೆ. ಇದರಿಂದ ನಮ್ಮ ಸರ್ಕಾರವಾಗಲಿ, ಯಾವುದೇ ಪ್ರಭಾವಿ ವ್ಯಕ್ತಿಗಳಾಗಲಿ, ಇದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಸಂಪೂರ್ಣವಾದ ಸ್ವಾತಂತ್ರ್ಯವನ್ನು ನಾವು ಅವರಿಗೆ ಕೊಟ್ಟಿದ್ದೇವೆ. ಇವತ್ತು ನಾನು ನಿಮಗೆ ಹೇಳುತ್ತೇನೆ, ನಮ್ಮ ಸರ್ಕಾರ ಈ ಕೇಸ್‌ನ್ನು ಸಿ.ಬಿ.ಐ.ಗೆ ಕೊಡುವುದಕ್ಕೆ ಪ್ರತಿಷ್ಠೆ ಪ್ರಶ್ನೆ ಬರುವುದಿಲ್ಲ. ಈಗಾಗಲೇ 6 ಕೇಸ್‌ಗಳನ್ನು ಕೊಟ್ಟಿದ್ದೇವೆ. ಸೌಜನ್ಯ ಕೇಸ್‌ನ್ನು ಸಿ.ಬಿ.ಐ.ಗೆ ಕೊಟ್ಟು ಸುಮಾರು ಒಂದೂವರೆ ವರ್ಷವಾಗಿದೆ. ಸಿ.ಬಿ.ಐ.ನವರು, ನಮ್ಮ ಸಿ.ಐ.ಡಿ.ಯವರು ಮಾಡಿದರು, ನಮ್ಮ local ಪೊಲೀಸಿನವರು ಮಾಡಿದರು. ಇಲ್ಲಿಯತನಕ ಸಿ.ಬಿ.ಐ. ನಿಂದ ಯಾವ report

ಕೂಡ ಬಂದಿಲ್ಲ. ನಿಮಗೆ ಗೊತ್ತಿದೆ, ಆ MUDA case, ಯಾವುದೆಂದರೆ Mandya Urban Development Case, ರಾಮನಗರದ case ಎಲ್ಲವನ್ನು ಸಿ.ಬಿ.ಐ.ಗೆ ಕೊಟ್ಟಿದ್ದೇವೆ. ಅದರದ್ದೂ report ಬಂದಿಲ್ಲ. ಇನ್ನು ಡಿ.ಕೆ. ರವಿಯವರ ಕೇಸ್ ಕೂಡ ತನಿಖೆಯಾಗುತ್ತಿದೆ, ಅದರ ಬಗ್ಗೆ ಕೂಡ ಇನ್ನೂ report ಬಂದಿಲ್ಲ. ಇನ್ನು ಲಾಟರಿ report ಬಗ್ಗೆ ಕೂಡ ತಾವೆಲ್ಲರೂ ಹೇಳಿದಂತೆ ಅದನ್ನು ಕೂಡ ಸಿ.ಬಿ.ಐ.ಗೆ ಕೊಟ್ಟಿದ್ದೇವೆ. ಇನ್ನು ಸಿ.ಬಿ.ಐ. ನವರು ಅದನ್ನು accept ಮಾಡಿಲ್ಲ. ನಮಗೇನು ಸಿ.ಬಿ.ಐ.ಗೆ ಕೊಡುವುದರಲ್ಲಿ ಯಾವುದೇ ಅಭ್ಯಂತರವಿಲ್ಲ. ಆದರೆ ನಮ್ಮ ಪೊಲೀಸ್‌ನವರು, ಸಿ.ಐ.ಡಿ. ಯವರಿರಬಹುದು, regular ಪೊಲೀಸ್‌ನವರಿರಬಹುದು, ಇವರೆಲ್ಲರೂ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಸಾಕಷ್ಟು ತನಿಖೆಗಳನ್ನು ಮಾಡಿದ್ದಾರೆ. ಯಾರು ಆರೋಪಿಗಳಿದ್ದಾರೆ, ಅವರಿಗೆಲ್ಲ ಶಿಕ್ಷೆ ಕೊಡುವಂಥದ್ದರ ಬಗ್ಗೆ chargesheet ಹಾಕುವಂಥ ಕೆಲಸವನ್ನು ಮಾಡಿದ್ದಾರೆ. ದಯವಿಟ್ಟು ತಾವು ಪ್ರತಿಯೊಂದಕ್ಕೂ ಸಿ.ಬಿ.ಐ. ಎಂದು ಹೇಳಿಕೊಂಡು ಹೋದರೆ ಬಹುಶ: ಒಂದು ಕಥೆಯಿದೆ. ಒಂದು ಹಳ್ಳಿಯಲ್ಲಿ ಒಬ್ಬರು ಯಾವಾಗಲೂ ಹುಲಿ ಬಂದಿದೆ, ಹುಲಿ ಬಂದಿದೆ ಎಂದು ಯಾವಾಗಲೂ ಹೇಳುತ್ತಿರುತ್ತಾರಂತೆ. ಗ್ರಾಮದ ಜನರೆಲ್ಲರೂ ಹೋಗಿ ಹುಲಿ ಬಂದಿದೆಯೇ ಎಂದು ಹೋಗಿ ನೋಡುತ್ತಾರೆ. ಆದರೆ ಅಲ್ಲಿ ಹುಲಿ ಬಂದಿರುವುದಿಲ್ಲ. ಜನರಿಗೆ ಸುಮ್ಮನೆ ಆ ರೀತಿ ಹುಲಿ ಬಂದಿದೆಯೆಂದು ಹೇಳುತ್ತಿರುತ್ತಾನೆ. ಆದರೆ ನಿಜವಾಗಿಯೂ ಒಂದು ದಿವಸ ಹುಲಿ ಬಂದಾಗ ಇವನು ನಿಜವಾಗಿಯೂ ಹುಲಿ ಬಂದಿದೆಯೆಂದು ಕೂಗುತ್ತಾನೆ. ಆದರೆ ಗ್ರಾಮದ ಜನರು ಅಂದು ಯಾರೂ ಹೋಗುವುದಿಲ್ಲ. ಹುಲಿ ಬಂದು ಇವನನ್ನು ತಿಂದುಕೊಂಡು ಹೊರಟು ಹೋಗಿರುತ್ತದೆ. ಅದೇ ರೀತಿಯಲ್ಲಿ ಈ ಸಿ.ಬಿ.ಐ. ಎನ್ನುವುದು ಬ್ರಹ್ಮಾಸ್ತ್ರ. ಪ್ರತಿಯೊಂದಕ್ಕೂ ನೀವು ಸಿ.ಬಿ.ಐ., ಸಿ.ಬಿ.ಐ. ಎಂದು ಹೇಳಿಕೊಂಡರೆ ನಿಜವಾದ ಪ್ರಕರಣವನ್ನು ಅವರು ಏನು ಮಾಡುತ್ತಾರೆ ಆಗ, ಆದುದರಿಂದ ನಮ್ಮ ಪೊಲೀಸಿನವರ ಮೇಲೆ ನೀವು ನಂಬಿಕೆಯಿಡಿ. ಈಗಾಗಲೇ ಎಲ್ಲರನ್ನು arrest ಮಾಡಿದ್ದೇವೆ. ಅವರಿಗೆ ತಕ್ಕ ಶಿಕ್ಷೆ ಕೊಡುವಂಥ ಕೆಲಸವನ್ನು ಕೂಡ ನಾವು ಮಾಡುತ್ತೇವೆ. ಇನ್ನೊಂದು ವಿಚಾರ

ಈಗಾಗಲೇ ನಮ್ಮ ಜಗದೀಶ್ ಶೆಟ್ಟರ್‌ರವರು ಹೇಳಿದರು. ಅದೇನೆಂದರೆ ಹುಲಿಹೈದರ್ ಗ್ರಾಮದಲ್ಲಿ? ಹುಸೇನಪ್ಪನವರ ಗುಡಿಸಲನ್ನು ಸುಟ್ಟಿರುವ ವಿಚಾರದ ಬಗ್ಗೆ ಹೇಳಿದರು. ಈಗ ಯಲ್ಲಾಲಿಂಗರವರ ತಾಯಿಯವರಿಗೆ ಸಂಪೂರ್ಣವಾದಂಥ ರಕ್ಷಣೆಯನ್ನು ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ಈ ಗ್ರಾಮದ ಹುಸೇನಪ್ಪನವರಿಗೂ ಸಮೇತ ನಾನು SP ಯವರೊಡನೆ ಮಾತನಾಡಿದ್ದೇನೆ. ಅವರು ಸಮೇತ ಅಲ್ಲಿಯೇ ಇದ್ದಾರೆ. ಅವರಿಗೆ ರಕ್ಷಣೆ ಕೊಡುತ್ತೇವೆ. ಈಗ ಅವರ ಗುಡಿಸಲನ್ನು ಸಮೇತ ಅವರಿಗೆ ಕಟ್ಟಿಕೊಡಿ ಎಂದು ಹೇಳಿದ್ದೇನೆ. ಅಲ್ಲಿ ಆ ration shop ನಲ್ಲಿ ಏನಾದರೂ ಸರಿಯಾಗಿ ವಿತರಣೆಯಾಗುತ್ತಿಲ್ಲವೆನ್ನುವುದಕ್ಕೋಸ್ಕರವಾಗಿ ಅಲ್ಲಿ ಗಲಾಟೆಯಾಗಿದೆ. ಅದನ್ನು ಕೂಡ ಸರಿ ಮಾಡುವುದಕ್ಕೆ ಈಗಾಗಲೇ ನಾವು ಆದೇಶ ಕೊಟ್ಟಿದ್ದೇವೆ. ಇಡೀ ಕರ್ನಾಟಕದಲ್ಲಿ ಪ್ರತಿಯೊಬ್ಬರಿಗೂ ರಕ್ಷಣೆ ಕೊಡುವಂತಹ ಕೆಲಸ ಮಾಡಬೇಕು. ಭ್ರಷ್ಟಾಚಾರವನ್ನು ಯಾರು ನಿಜವಾಗಿ ಹೊರಗಡೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಅವರಿಗೆ ನಾವು ಮತ್ತಷ್ಟು ಶಕ್ತಿ ಕೊಡಬೇಕು. ನಮ್ಮ ಉದ್ದೇಶ, ನಿಮ್ಮ ಉದ್ದೇಶ, ಜನಸಾಮಾನ್ಯರ ಉದ್ದೇಶ ಅದೇ ಆಗಿದೆ. ಅದಕ್ಕೋಸ್ಕರ ನಾವೆಲ್ಲ ಜೊತೆ ಸೇರಿ ಈ ರೀತಿಯ ಪ್ರಕರಣಗಳು ಮತ್ತೆ ಮರುಕಳಿಸದಂತೆ ಕೆಲಸವನ್ನು ಮಾಡೋಣ ಎನ್ನುವ ಮಾತನ್ನು ಹೇಳುತ್ತಾ, ದಯವಿಟ್ಟು ಸಿ.ಬಿ.ಐ. ಬೇಕಾಗಿಲ್ಲ. ನಮ್ಮ ಪೋಲಿಸರ ಮೇಲೆ ನಂಬಿಕೆ ಇಡಿ ಎಂದು ಹೇಳುತ್ತಾ, ನಾವೇ ನಮ್ಮ ಸಿ.ಐ.ಡಿ. ಪೊಲೀಸರಿಂದ ತನಿಖೆ ಮಾಡಿಸಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆನ್ನುವ ಭರವಸೆಯನ್ನು ಸದನಕ್ಕೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹಮಂತ್ರಿಗಳು ಇಲ್ಲಿ ಯಾವುದೇ ಪ್ರಭಾವಕ್ಕೆ ಒಳಗಾಗಿಲ್ಲ, ನಿಷ್ಪಕ್ಷಪಾತವಾಗಿ ತನಿಖೆ ಮಾಡುತ್ತೇವೆನ್ನುವ ಮಾತನ್ನು ಹೇಳಿದರು. ನಾನು ಈಗಾಗಲೇ ಸಂಪೂರ್ಣವಾಗಿ ಏನಾಗಿದೆ ಎನ್ನುವ facts ಹೇಳಿದ್ದೇನೆ. ತಮ್ಮ ಉತ್ತರದಲ್ಲಿ ಹೇಳಿರುವಂತಹ ವಿಚಾರಗಳನ್ನು ಇಲ್ಲಿ ನಾನು ಎರಡು ಮೂರು ಪಾಯಿಂಟ್‌ಗಳನ್ನು ಹೇಳುತ್ತೇನೆ. ಆ ಯಲ್ಲಾಲಿಂಗ ಜನವರಿ 11ನೇ

ತಾರೀಖಿನಂದು ಕೊಲೆಯಾಗಿದ್ದು. ಆದರೆ ಆತನ death note 12ನೇ ಏಪ್ರಿಲ್‌ನಲ್ಲಿ ಸಿಕ್ಕಿದೆ. ಆ death noteನಲ್ಲಿ ಎರಡು ಹೆಸರುಗಳನ್ನು ಮಾತ್ರ ಪ್ರಸ್ತಾಪ ಮಾಡಿದ್ದಾನೆಂದು ನೀವು ಹೇಳಿದಿರಿ. ಅದು ಹನುಮೇಶ್ ನಾಯಕ್ ಮತ್ತು ಬಾಳನಗೌಡ ಎಂದು ಪ್ರಸ್ತಾಪ ಮಾಡಿದಿರಿ. ಆರು ಜನರಲ್ಲಿ ಪ್ರಮುಖವಾಗಿ ಹನುಮೇಶ್ ನಾಯಕ ಆಗಿದ್ದಾನೆ. ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ death note 12ನೇ ಏಪ್ರಿಲ್‌ನಂದು ಸಿಗುತ್ತದೆ, ಅದರಲ್ಲಿ ಹನುಮೇಶ್ ನಾಯಕನ ಹೆಸರು ಬರುತ್ತದೆ. ಆದರೆ ಆತನನ್ನು ಅರೆಸ್ಟ್ ಮಾಡುವುದಿಲ್ಲ. ಅಲ್ಲಿನ ಎಸ್‌ಪಿಯವರು ಒಂದು ಸ್ಟೇಟ್‌ಮೆಂಟ್ ಪತ್ರಿಕೆಯಲ್ಲಿ ಕೊಟ್ಟಿರುವುದನ್ನು ನಾನು ನೋಡಿದೆ. ಅವರು ಆ ಹನುಮೇಶ್ ನಾಯಕನ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಇಲ್ಲ, ಅದಕ್ಕೆ ನಾವು ಅವನನ್ನು ಅರೆಸ್ಟ್ ಮಾಡುವುದಕ್ಕೆ ಆಗಿಲ್ಲವೆಂದು ಹೇಳಿದ್ದಾರೆ. ಮುಂದೆ ಯಾವಾಗ ಪ್ರೆಷರ್ ಪ್ರಾರಂಭವಾಗುತ್ತದೆ, Public opinion, ಜನಪರ ಹೋರಾಟ ಇವೆಲ್ಲ ನಡೆಯುತ್ತದೆ, ಆ ಪ್ರೆಷರ್ ಆದಮೇಲೆ, ಸಿ.ಐ.ಡಿ.ಗೆ ಕೊಟ್ಟಮೇಲೆ ಜೂನ್ 21ನೇ ತಾರೀಖಿಗೆ ಹನುಮೇಶ್ ನಾಯಕನನ್ನು ಅರೆಸ್ಟ್ ಮಾಡುತ್ತಾರೆ. ಅಲ್ಲಿಂದ ಇಲ್ಲಿಯವರೆಗೂ ಎರಡು ತಿಂಗಳು ಗ್ಯಾಪ್ ಇದೆ. ಈ ಎಲ್ಲಾ ಸಂಶಯಗಳು ಏನು ಬರುತ್ತವೆ..

ಅಧ್ಯಕ್ಷರು:– ಯಲ್ಲಾಲಿಂಗನ death note ಪೊಲೀಸ್‌ನವರಿಗೆ ಯಾವಾಗ ಸಿಕ್ಕಿದ್ದು?

ಶ್ರೀ ಜಗದೀಶ್ ಶೆಟ್ಟರ್:– Death note ಏಪ್ರಿಲ್ 12ನೇ ತಾರೀಖು ಸಿಕ್ಕಿದ್ದು. ಆದರೆ ಹನುಮೇಶ್ ನಾಯಕನನ್ನು ದಿನಾಂಕ 21.06.2015ರಂದು ಅರೆಸ್ಟ್ ಮಾಡಿದ್ದು. ಅದೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಸಿ.ಐ.ಡಿ.ಗೆ ಕೊಟ್ಟ ಮೇಲೆ ಅವರು ಕೊಪ್ಪಳಕ್ಕೆ ಬಂದಮೇಲೆ ಅರೆಸ್ಟ್ ಮಾಡುತ್ತಾರೆ. ಅಲ್ಲಿಯವರೆಗೂ ಅಲ್ಲಿನ ಸ್ಥಳೀಯ ಪೊಲೀಸರು ಅರೆಸ್ಟ್ ಮಾಡುವುದಿಲ್ಲ. ಇದರಿಂದ ನಮಗೆ ಸಂಶಯ ಏನು ಬರುತ್ತದೆ ಎಂದರೆ ರಾಜಕೀಯ ಪ್ರಭಾವ, ಮಂತ್ರಿಗಳ ಪ್ರಭಾವ, ಅವರನ್ನು ರಕ್ಷಣೆ ಮಾಡುವಂಥಾದ್ದು ಇದೆಲ್ಲಾ ಇದೆ. ಅದಕ್ಕಾಗಿ ನಮಗೆ ಸಂಶಯ ಬರುತ್ತದೆ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನಾನು ಅದಕ್ಕೆ clarification ಕೊಡುತ್ತೇವೆ. Death note ವಿಚಾರದಲ್ಲಿ ಏನಾಗಿದೆ ಎಂದರೆ ಅದು ಒಬ್ಬ railway police constable ಹತ್ತಿರ ಇರುತ್ತದೆ. ಅದು record ನಲ್ಲಿ ಇರುವುದಿಲ್ಲ.

ಅಧ್ಯಕ್ಷರು:- ಆ death note ಅವನ ಹತ್ತಿರ ಹೇಗೆ ಹೋಯಿತು?

ಶ್ರೀ ಕೆ.ಜೆ. ಜಾರ್ಜ್:- ನಾನು ನಿಮಗೆ ಮೊದಲೆ ಹೇಳಿದ್ದೇನೆ. ಈ railway police ಸಾಕಷ್ಟು ವ್ಯವಸ್ಥೆಗಳು ಇರುವುದಿಲ್ಲ. ಅಲ್ಲಿ ಒಬ್ಬ ASI, ಒಬ್ಬ ಸಬ್ ಇನ್ಸ್‌ಪೆಕ್ಟರ್ ಇರುತ್ತಾನೆ, ಅವನ jurisdiction ಬಹಳ ದೊಡ್ಡದಾಗಿರುತ್ತದೆ. ನಾವು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಇನ್ನು ಮುಂದೆ ಯಾವುದೇ ಈ ರೀತಿಯ ಕೇಸುಗಳು ಬಂದರೆ ತಕ್ಷಣ ಲೋಕಲ್ ಪೊಲೀಸ್‌ನವರಿಗೆ handover ಮಾಡಬೇಕೆಂದು ಸುತ್ತೋಲೆ ರೆಡಿ ಮಾಡುವುದಕ್ಕೆ ಹೇಳಿದ್ದೇನೆ. ಅದನ್ನು ಆದಷ್ಟು ಬೇಗ ಕಳುಹಿಸಿಕೊಡುತ್ತೇನೆ. ಇದರಲ್ಲಿ ಏನಾಗಿದೆ ಎಂದರೆ death note ಅಷ್ಟು ತಡವಾಗಿ ಬಂದಿರುವುದರಿಂದ, ಅದು ನಿಜವಾದ death note ಹೌದೋ ಅಲ್ಲವೋ ಎಂದು verify ಮಾಡಬೇಕಾಗುತ್ತದೆ. ನೋಡಿ ಎಲ್ಲಾ ಸರಿಯಿದ್ದರೆ ನಾವು ಸಿ.ಐ.ಡಿ.ಗೆ ಕೊಡುವ ಅವಶ್ಯಕತೆ ಇಲ್ಲ.

ಅಧ್ಯಕ್ಷರು:- ಗೃಹ ಸಚಿವರೇ, ನಾನು ನನ್ನ ಅನುಭವದ ಮೇಲೆ ಹೇಳುತ್ತೇನೆ. ಆ death note ಏನು ಸಿಕ್ಕಿದೆ, ಅದನ್ನು verify ಮಾಡಲೇಬೇಕು, ಅದನ್ನು ಹಾಗೆ ತನಿಖೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ ನಮ್ಮ ಸ್ಥಳೀಯ ಪೊಲೀಸರು ಕೆಲವೊಂದು ಸಾರಿ ತಪ್ಪನ್ನು ಮಾಡುತ್ತಾರೆ. ಅಂತಹವರ ಬಗ್ಗೆ ನೀವು ಎಚ್ಚರಿಕೆ ವಹಿಸದಿದ್ದರೆ ಈ ಅನುಮಾನಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಈ ಅನುಮಾನದಿಂದ ಇನ್ನೊಂದು ರಾಜಕಾರಣ ವಗ್ಯೆರೆ ವಗ್ಯೆರೆ ಬೆಳೆಯುತ್ತದೆ.

ಶ್ರೀ ಕೆ.ಜೆ. ಜಾರ್ಜ್:- ಅದಕ್ಕೋಸ್ಕರ ನಾವು ಈಗಾಗಲೇ ಸಿ.ಐ.ಡಿ ತನಿಖೆಗೆ ಕೊಟ್ಟಿದ್ದೇವೆ.

ಅಧ್ಯಕ್ಷರು:- ಅದು ಸರಿಯಿದೆ, ಅದನ್ನು ನಾನು ಒಪ್ಪುತ್ತೇನೆ. ನೀವು ಆ sub inspector ಅನ್ನು ಏನು ಮಾಡಿದ್ದೀರಿ?

ಶ್ರೀ ಕೆ.ಜೆ. ಜಾರ್ಜ್:- ಅದರ ವರದಿ ಬಂದ ಮೇಲೆ ಯಾರು ಅಲ್ಲಿ ತಪ್ಪು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ನಮಗೆ ಸಂಶಯ ಉಳಿದಿದೆ. ಪತ್ರಿಕೆಯಲ್ಲಿ ಎಸ್.ಪಿ. ಸ್ಟೇಟ್‌ಮೆಂಟ್ ಕೊಟ್ಟಿದ್ದಾನೆ. ಏಪ್ರಿಲ್ 12ನೇ ತಾರೀಖಿಗೆ death note ಸಿಕ್ಕಮೇಲೂ ಕೂಡ ಹನುಮೇಶ್ ನಾಯಕ ಮೇಲೆ ಯಾವುದೇ ಸಾಕ್ಷ್ಯ ಇಲ್ಲವೆಂದು ಅರೆಸ್ಟ್ ಮಾಡುವುದಿಲ್ಲವೆಂದು ಹೇಳುತ್ತಾರೆ. ಯಾವಾಗ ಪ್ರೆಷರ್ ಜಾಸ್ತಿಯಾಗುತ್ತದೆ, ಆಗ ಅರೆಸ್ಟ್ ಮಾಡುತ್ತಾರೆ. ಅಂದರೆ ಹೋರಾಟ ಮಾಡಿದ ಮೇಲೆ ಮಾತ್ರ ಅರೆಸ್ಟ್ ಮಾಡುತ್ತೀರಾ ಎಂದು ನಾನು ಕೇಳುತ್ತೇನೆ. ಇದು natural course ನಲ್ಲಿ ಆಗಬೇಕು. ಇದು ಪ್ರಭಾವ. . . . .

ಅಧ್ಯಕ್ಷರು:- ಅದಕ್ಕೆ ನಮ್ಮ ಗುರು ಹೋರಾಟ ಜೈಲು, ಅನ್ಯಾಯ ಬಯಲು ಎಂದು ಹೇಳಿದ್ದರು.

ಶ್ರೀ ಜಗದೀಶ್ ಶೆಟ್ಟರ್:- ಆ ರೀತಿ ಹೋರಾಟ ಮಾಡಿದಾಗಲೇ ಇಂತಹ ಪ್ರಕರಣಗಳಿಗೆ ತಾರ್ಕಿಕವಾಗಿ ಅಂತ್ಯ ಸಿಗುವುದಕ್ಕೆ ಸಾಧ್ಯವಿದೆ. ಹೋರಾಟ ಮಾಡಿದಾಗಲೇ ಎಲ್ಲಾ ಪ್ರಕರಣಗಳೂ ಹೊರಗೆ ಬಂದವು. ಆತ್ಮಹತ್ಯೆ ಹೋಗಿ ಕೊಲೆಯಾಯಿತು. ಕೊಲೆಯಾಗಿದೆ ಎನ್ನುವ ಹಿನ್ನೆಲೆಯಲ್ಲಿ 7–8 ಜನ ಆರೋಪಿಗಳಲ್ಲಿ ಒಂದಿಬ್ಬರು ಬಿಟ್ಟರೆ ಎಲ್ಲರೂ ಅರೆಸ್ಟ್ ಆಯಿತು. ಅದಕ್ಕಾಗಿ ನಾನು ಸಂಶಯ ಪಡುವುದೇನೆಂದರೆ ಇಲ್ಲಿ influence ಆಗಿಯೇ ಆಗುತ್ತದೆ. ಇದು ತಂಗಡಗಿ ಅವರ right hand ಹನುಮೇಶ್ ನಾಯಕ ಎರಡು ತಿಂಗಳೂ ಅಡ್ಡಾಡಿದನಲ್ಲ, death note ನಲ್ಲಿ ಅವನ ಹೆಸರು ಬಂದಮೇಲೂ ಕೂಡ ಆ ಆರೋಪಿ ಕೆಂಚಮ್ಮನ ಮನೆಗೆ ಹೋಗಿ ಭೇಟಿ ಕೊಡುತ್ತಾನೆ. ಅವನು open ಆಗಿ ಅಡ್ಡಾಡಿಕೊಂಡು ನಾನು ಏನೂ ಮಾಡಿಲ್ಲವೆಂದು ಹೇಳುತ್ತಾನೆ. ಈ ರೀತಿಯಾದಂತಹ ಗೂಂಡಾ ವ್ಯಕ್ತಿಗಳಿದ್ದಾರೆ, ಅವರ ಮೇಲೆ

ಹತ್ತು ಹದಿನೈದು ಕ್ರಿಮಿನಲ್ ಕೇಸ್ ಇವೆ. ರೌಡಿ ಶೀಟರ್ ಏನಿದ್ದಾನೆ, ಆತನ ಅರೆಸ್ಟ್ ಆಗುವುದಿಲ್ಲ, influence ಆಗುತ್ತದೆ, ಪ್ರಭಾವ ಬೀರುತ್ತಾರೆ, ಅದಕ್ಕಾಗಿ ನಾನು ಸಿ.ಬಿ.ಐ. ತನಿಖೆಯಾಗಬೇಕೆಂದು ಒತ್ತಾಯ ಮಾಡುತ್ತೇನೆ. ತಂಗಡಗಿಯವರು ಇಲ್ಲಿ ಪ್ರಭಾವ ಬೀರಿಯೇ ಬೀರುತ್ತಾರೆ. ಅದಕ್ಕೆ ಅವರು ರಾಜೀನಾಮೆಯನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಯಲ್ಲಾಲಿಂಗನ ಮೊಬೈಲ್ ಏನಿದೆ, ಅದು ಏನೇನಾಗಿದೆ ಎಂದು ಹೇಳಬೇಕು. ಸಿಐಡಿ interim report ಸದನದ ಮುಂದೆ ಮಂಡಿಸಿ. ಡಿ.ಕೆ. ರವಿ ಹತ್ಯೆಯಾದಾಗ interim report ಸದನದಲ್ಲಿ ಕೊಡುತ್ತೇವೆಂದು ಹೇಳಿದಿರಿ, ಆದರೆ ಅದು court ನಲ್ಲಿ stay ಆಯಿತು. ಆಗ ಅವಸರ ಮಾಡಿದರು. ಈಗಾಗಲೇ ಇದರ ಬಗ್ಗೆ ನಿಮಗೆ ಒಂದು interim report ಬಂದಿರಬೇಕು. ಅದನ್ನು ಸದನದ ಮುಂದೆ ಇಡಿ. ಆಗ ಯಾರಿದ್ದಾರೆ, ಏನಾಗುತ್ತದೆ, ಇದರಲ್ಲಿ ಯಾರ ಪ್ರಭಾವವಿದೆ, ಹನುಮೇಶ್ ನಾಯಕ್‌ಗೆ ಏನು ಸಂಬಂಧ, ರಾಜಕೀಯ ಸಂಬಂಧ ಇದೆಯೇ, ಯಾರ ಸಂಬಂಧ ಇವೆಲ್ಲಾ ವಿಚಾರಗಳು ಗೊತ್ತಾಗುತ್ತದೆ. ಆ ಯಲ್ಲಾಲಿಂಗನ ಮೊಬೈಲ್‌ನಿಂದ ಯಾರ್ಯಾರಿಗೆ ಕಾಲ್ ಹೋಗಿವೆ, ಅವನು ಯಾರ ಜೊತೆ ಮಾತನಾಡಿದ್ದಾನೆ, ಅದನ್ನು ಕೂಡ ಸದನದ ಮುಂದೆ ತಿಳಿಸಿ. ಆಗ real fact ಗೊತ್ತಾಗುತ್ತದೆ. ಮಾನ್ಯ ಗೃಹಸಚಿವರು ಇದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕಾಗುತ್ತದೆ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ನಾನು ಸ್ಪಷ್ಟವಾಗಿ ವ್ಯಕ್ತಮಾಡಿದ್ದೇನೆ. ಮಾನ್ಯ ಶಿವರಾಜ್ ತಂಗಡಗಿಯವರು ಇದರಲ್ಲಿ ಯಾವುದೇ ಒತ್ತಡವನ್ನು ತೆಗೆದುಕೊಂಡು ಬರಲಿಲ್ಲ. Investigation ಆಗಲಿ, death note ನಲ್ಲಾಗಲಿ, FIR ನಲ್ಲಾಗಲಿ ಎಲ್ಲಿಯೂ ಅವರ ಹೆಸರು ಇಲ್ಲ. ದಯವಿಟ್ಟು ನಿಮ್ಮಲ್ಲಿ ಏನಾದರೂ ಸಾಕ್ಷಾಧಾರಗಳು ಇದ್ದರೆ, ದಯವಿಟ್ಟು ಕೊಡಿ. ನಾವು ಅದನ್ನು ಸಿ.ಐ.ಡಿ. ಗೆ ಕೊಟ್ಟು investigation ಮಾಡಿಸುತ್ತೇವೆ. ಎರಡನೆಯದಾಗಿ

ಸಿ.ಐ.ಡಿ.ಯವರು ನಮಗೆ interim report ಕೊಡಲಿಲ್ಲ. ಅವರು ಕೊಟ್ಟರೆ ಮಾನ್ಯ ಮುಖ್ಯ ಮಂತ್ರಿಯವರ ಜೊತೆ ಚರ್ಚೆ ಮಾಡಿ ಮಾನ್ಯ ಅಧ್ಯಕ್ಷರ ಅನುಮತಿಯನ್ನು ತೆಗೆದುಕೊಂಡು ಅದನ್ನು ಸದನದ ಮುಂದೆ ಇಡುವಂತಹ ಕೆಲಸವನ್ನು ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಈ ಪ್ರಕರಣವನ್ನು ಮುಚ್ಚಿ ಹಾಕುವುದು ಹಾಗೂ ಆರೋಪಿಗಳನ್ನು ರಕ್ಷಣೆ ಮಾಡುವಂತಹ ಕೆಲಸ ಈ ಸರ್ಕಾರ ಮಾಡುತ್ತಿದೆ. ತಂಗಡಗಿಯವರು ಈ ಗೂಂಡಾಗಳನ್ನು ರಕ್ಷಣೆ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಈ ಪ್ರಕರಣವನ್ನು ಮುಚ್ಚಿ ಹಾಕುವಂತಹ ಕೆಲಸವನ್ನು ಮಾಡುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಈ ಪ್ರಕರಣ ಮುಚ್ಚಿ ಹಾಕುವಂತಹ ಪ್ರಯತ್ನ ಅಂತ ಈಗಲೇ ಸಾಕ್ಷಿಯಾಗುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್:- ಇವತ್ತು ಯಾರು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತಿದ್ದಾರೆ, ಪ್ರಾಮಾಣಿಕರಿದ್ದಾರೆ, ಅವರಿಗೆ ರಕ್ಷಣೆ ಇಲ್ಲದಂಥ ಪರಿಸ್ಥಿತಿ ಇದ್ದು, ಇದಕ್ಕೆ ಸ್ಪಷ್ಟವಾದಂತಹ ಉತ್ತರ ಇಲ್ಲ. ಈ ಪ್ರಕರಣ ಮುಚ್ಚಿ ಹಾಕುವಂತಹ ಕೆಲಸ ಮಾಡುತ್ತಿದ್ದು, ಇದನ್ನು ನಾವು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆ.

ಅಧ್ಯಕ್ಷರು:- O.K. ಈಗ ಇದು ಮುಕ್ತಾಯವಾಯಿತು.

ಶ್ರೀ ಜಗದೀಶ್ ಶೆಟ್ಟರ್:- ಇದು ಗೂಂಡಾ ರಾಜ್ಯ, ಇದರ ವಿರುದ್ಧ ಹೋರಾಟ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:– ಶಿವಮೂರ್ತಿಯವರೆ, ಈಗ ಬೇಡಿಕೆ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿ ಎಲ್ಲರೂ ಹತ್ತತ್ತು ನಿಮಿಷ ಮಾತನಾಡಿ. ನೀವು ಚೀಟಿ ಕೊಟ್ಟಿದ್ದಿರಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ:– ಮಾನ್ಯ ಅಧ್ಯಕ್ಷರೆ, ಒಂದು ಖಾಸಗಿ ನಿರ್ಣಯ ಇದೆ.

ಅಧ್ಯಕ್ಷರು:– ಅದು ಕೊನೆಗೆ ಇದೆ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಹೇಗಿದ್ದರೂ ಈಗ ಖಾಲಿ ಇದೆ, ಈ ಸಮಯದಲ್ಲಾದರೂ ನನಗೆ ಅವಕಾಶ ಕೊಟ್ಟರೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು:– Next ನಿಮಗೆ ಕೊಡುತ್ತೇನೆ. ಆ ಕಡೆ, ಈ ಕಡೆ ಮಾತನಾಡುವುದಕ್ಕೆ ಅವಕಾಶ ಕೊಡುವುದು ಬೇಡವೇ? ಬೇಗ ಹತ್ತತ್ತು ನಿಮಿಷ ಮಾತನಾಡಿ.

5. ವಿತ್ತೀಯ ಕಾರ್ಯಕಲಾಪಗಳು

2015–16ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ):– ಮಾನ್ಯ ಅಧ್ಯಕ್ಷರೆ, ತಾವು ಪೂರಕವಾಗಿ ಈ ಬೇಡಿಕೆ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ, ಈ ಬೇಡಿಕೆಯನ್ನು ಬೆಂಬಲಿಸುತ್ತೇನೆ. ಇವತ್ತು ಕೃಷಿ ಮತ್ತು ತೋಟಗಾರಿಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಬೇಡಿಕೆಗಳ ಮೇಲೆ ಚರ್ಚೆಯನ್ನು ಮಾಡಬೇಕಾಗಿದೆ. ಇವತ್ತು ಕೃಷಿ ಆಧಾರಿತ ಕೈಗಾರಿಕೆ ಸಂಸ್ಥೆಗಳನ್ನು ಸ್ಥಾಪನೆ ಮಾಡುತ್ತೇವೆ. ಕೃಷಿ ಭಾಗ್ಯವನ್ನು ತರುತ್ತೇವೆ ಎನ್ನುವ ಮಾತನ್ನು ಆಯವ್ಯಯದಲ್ಲಿ ಹೇಳಿದ್ದಾರೆ. ಇವೆಲ್ಲ ಹೊಸ ಹೊಸ ಕಾರ್ಯಕ್ರಮಗಳು. ಇವತ್ತು ನಮ್ಮ ದೇಶದಲ್ಲಿ ಅದರಲ್ಲೂ ಕರ್ನಾಟಕ ರಾಜ್ಯ ಕೃಷಿ ಆಧಾರಿತ ಮೇಲೆ ನಿಂತಿರುವಂತಹ ರಾಜ್ಯವಾಗಿದೆ. ಜನಸಂಖ್ಯೆ ಬೆಳೆಯುತ್ತಿದೆ. ಆದರೆ ಭೂಮಿ ಎಷ್ಟಿದೆಯೋ ಅಷ್ಟೇ ಇದೆ. ಆದರೆ ಜನ